ಗುರುವಾರ,13 ಜೂನ್ 2024 | ಪುಟಗಳು: 18 | ಬೆಲೆ: ₹ 5.00
www.vijaykarnataka.com C
ಸಂಪುಟ: 25 | ಸಂಚಿಕೆ: 159
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

ವಿಜಯ ಕರ್ನಾಟಕ 25 SINCE 1999 ರಜತ ಸಂಭ್ರಮ ವಿಕ ಸಮಸ್ತ ಕನ್ನಡಿಗರ ಹೆಮ್ಮೆ

ಜೂನ್ 20ಕ್ಕೆ ಜಮ್ಮು-ಕಾಶ್ಮೀರಕ್ಕೆ ಪ್ರಧಾನಿ ಮೋದಿ, ಶ್ರೀನಗರದಲ್ಲಿ ಯೋಗ ದಿನಾಚರಣೆಯಲ್ಲಿ ಭಾಗಿ

ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ 4.75% ದಾಖಲು, 12 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ

ಉತ್ತರಾಖಂಡದ ಜೋಶಿಮಠ ಇನ್ನು ಜ್ಯೋತಿರ್ಮಠ, ಮರುನಾಮಕರಣಕ್ಕೆ ಕೇಂದ್ರ ಸರಕಾರ ಅಸ್ತು

Centenary Celebrated Sharnbasveshwar Vidya Vardhak Sangha's

Sharnbasveshwar Residential Composite PU College's

SBR NEET ACADEMY

Kalaburagi-585103. Ph No. 08472 241373, Email : sbrpucollege.glb2004@gmail.com

NEET-2024 Toppers | 161 Students Score above 600



KK REGION TOPPER
705
NEET SCORE

VINAYKUMAR

ನಾನು ನೀಟ್ ಪರೀಕ್ಷೆಯಲ್ಲಿ 705 ಅಂಕಗಳಿಸುವಲ್ಲಿ ಎಸ್.ಬಿ.ಆರ್. ಪ್ರಮುಖ ಪಾತ್ರ ವಹಿಸಿದೆ. ಪ್ರತಿವಾರ ಟೆಸ್ಟ್ ಇರುತ್ತಿದ್ದರು ಇದರಿಂದ ಓದಿದ್ದು ಮನನವಾಗಲು ಅನುಕೂಲವಾಗುತ್ತಿತ್ತು ಮತ್ತು ನಿಗದಿತ ಸಮಯದಲ್ಲಿ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗುತ್ತಿತ್ತು. ನಿರಂತರ ಅಭ್ಯಾಸ, ಪ್ರಾಚಾರ್ಯರ ಹಾಗೂ ಎಲ್ಲಾ ಶಿಕ್ಷಕರ ಮಾರ್ಗದರ್ಶನ ಮತ್ತು ಪ್ರೋತ್ಸಾಹದಿಂದ ನನಗೆ ನೀಟ್‌ನಲ್ಲಿ ಉತ್ತಮ ಅಂಕಗಳನ್ನು ಪಡೆಯಲು ಸಾಧ್ಯವಾಯಿತು.

ವಿನಯಕುಮಾರ್ ಕನಪೇಗೌಡರ್, ನೀಟ್ ಟಾಪರ್

ಎಸ್‌ಬಿಆರ್ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಮಯಪಾಲನೆ, ಪರಿಶ್ರಮ ಮತ್ತು ಹಾಳ್ಕೆ ರೂಢಿಸಿದ ಪ್ರತಿಫಲವಾಗಿ ಅವರ ಉಜ್ವಲ ಭವಿಷ್ಯ ರೂಪುಗೊಳ್ಳುತ್ತಿದೆ. ಮಹಿಳ್ಯಾಧಾರಿತ ಹೈಟೆಕ್ ಶಿಕ್ಷಣ, ಅನುಭವಿ ಪ್ರಾಚಾರ್ಯರಾದ ಎನ್.ಎಸ್.ದೇವರಕಲ್ ಮಾರ್ಗದರ್ಶನದಲ್ಲಿ ಬೋಧಕರ ಸಮರ್ಪಣಾ ಭಾವನೆಯಿಂದ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದರಿಂದ ಈ ಸಾಧನೆ ಸಾಧ್ಯವಾಗಿದೆ. ಎಸ್‌ಬಿಆರ್ ಕರ್ನಾಟಕದ ಹೆಮ್ಮೆಯ ಕಾಲೇಜ್ ಆಗಿ ಹೊರಹೊಮ್ಮುತ್ತಿದೆ.

- ವಿದ್ಯಾಭಂಡಾರಿ ಪೂಜ್ಯಶ್ರೀ ಡಾ. ಶರಣಬಸವಪ್ಪ ಅಪ್ಪ
ಪೀಠಾಧಿಪತಿ ಹಾಗೂ ಅಧ್ಯಕ್ಷರು ಶರಣಬಸವೇಶ್ವರ ವಿದ್ಯಾವರ್ಧಕ ಸಂಘ

ಎಸ್‌ಬಿಆರ್ ನಲ್ಲಿ ಉಪನ್ಯಾಸಕರು ಬಹಳ ಶ್ರದ್ಧೆಯಿಂದ ಹಗಲಿರುಳು ಸೇವೆಯಲ್ಲಿ ಮಗ್ನರಾಗಿದ್ದಾರೆ. ಪಾಲಕರು ಈ ಸಂಸ್ಥೆಯ ಬಗ್ಗೆ ಇಟ್ಟುಕೊಂಡ ಭಕ್ತಿಯಿಂದ, ಮಕ್ಕಳ ಪರಿಶ್ರಮದಿಂದ ಹಾಗೂ ಪ್ರಾಚಾರ್ಯರ, ಉಪನ್ಯಾಸಕರ ಕಾರ್ಯದಕ್ಷತೆಯಿಂದ ಈ ಫಲಿತಾಂಶ ಪಡೆಯಲು ಸಾಧ್ಯವಾಗಿದೆ.

- ಮಾತೋಶ್ರೀ ಡಾ. ದಾಕ್ಷಾಯಿಣಿ ಎಸ್. ಅಪ್ಪಾ
ಚೇರ್‌ಪರ್ಸನ್ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ



ಎಸ್.ಬಿ.ಆರ್ ಕಾಲೇಜು ತನ್ನ ಪ್ರವೃತ್ತವಾದ ಶಿಕ್ಷಣಕ್ರಮದಿಂದ ಪ್ರತಿ ವರ್ಷವೂ ಮೆಡಿಕಲ್ ವಿಭಾಗದಲ್ಲಿ ಅಮೋಘ ಸಾಧನೆಯನ್ನು ಮಾಡುತ್ತಾ ಬಂದಿದೆ. ಕಲ್ಯಾಣ ನಾಡಿನ ಎಸ್.ಬಿ.ಆರ್. ನಂಬರ್ ಒನ್ ಆಗಿದ್ದು ಸಂತೋಷ ತಂದಿದೆ. ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಎಸ್.ಬಿ.ಆರ್ ತನ್ನದೇ ಆದ ಕೊಡುಗೆಯನ್ನು ಕೊಡುತ್ತಾ ಬಂದಿದೆ ಅದರಲ್ಲೂ ವೈದ್ಯಕೀಯ ವಿಭಾಗದಲ್ಲಿ ಪ್ರತಿ ವರ್ಷವೂ ಕೂಡಾ ಅತಿ ಹೆಚ್ಚಿನ ಅಂಕಗಳನ್ನು ಪಡೆದು ಸಾಧನೆ ಮಾಡುತ್ತಿದೆ. ಇದು ಇಲ್ಲಿನ ಗುಣಮಟ್ಟದ ಶಿಕ್ಷಣಕ್ಕೆ ಸಾಕ್ಷಿಯಾಗಿದೆ.

-ಶ್ರೀ ಬಸವರಾಜ ದೇಶಮುಖ,
ಕಾರ್ಯದರ್ಶಿಗಳು, ಶರಣಬಸವೇಶ್ವರ ವಿದ್ಯಾ ವರ್ಧಕ ಸಂಘ

DISTRICT 2nd TOPPER
700
NEET SCORE

PANCHAKSHARI

ಎಸ್.ಬಿ.ಆರ್‌ನಲ್ಲಿ ನಿರಂತರವಾಗಿ ಪ್ರತಿವಾರ ವೀಕ್ಲಿ ಟೆಸ್ಟ್, ಕ್ಯುಮಿಲೆಟಿವ್ ಟೆಸ್ಟ್ ಮತ್ತು ಗ್ರ್ಯಾಂಡ್ ಟೆಸ್ಟ್‌ಗಳನ್ನು ಇಡುತ್ತಿದ್ದರು. ಇದರಿಂದ ಸಮಯಪಾಲನೆ ಮಾಡಲು ನನಗೆ ಅನುಕೂಲವಾಗುತ್ತಿತ್ತು. ಯಾವುದೇ ಸಮಯದಲ್ಲೂ ಶಿಕ್ಷಕರು ನಮ್ಮ ಡೌಟ್ ನಿವಾರಿಸಿ ಮಾರ್ಗದರ್ಶನ ಮಾಡುತ್ತಿದ್ದರು. ಮೊದಲನೇ ದಿನದಿಂದ ಮೂರು ವರ್ಷ ಹೀಗಾಗಿ ನನಗೆ ನೀಟ್ ಪರೀಕ್ಷೆಯಲ್ಲಿ 700 ಅಂಕ ಗಳಿಸಲು ಸಾಧ್ಯವಾಯಿತು.

ಪಂಚಾಕ್ಷರಿ ಲೋಣಿಮಠ, ನೀಟ್ ಟಾಪರ್

A Quantum Leap: 500+ Prospective Medicos

700 & Above Marks	Above 650 Marks	Above 600 Marks	Above 550 Marks	Above 500 Marks
2	36	161	306	470



SACHIDANAND 690	MD BURHANUDDIN 686	MEGHANA 685	SIDDANAGOUDA 680	MALLIKARJUN 677	BHARATRAJ 677	BHAVANA 676	AMBRESH 670	VISHAL 670	APPANNA 670	VISHWARAJA 670	SHRISHANTH 668	MD HUZAIFA Z 668

ARUN 666	SAMARTH 665	VEERESH 665	ANANDRAJ 665	SYED SHAHID 663	PAVAN P 662	ASHWINI 662	RANJITA K 660	SHARAN J 660	BALAJI C 660	ABHISHEK 659	GUNDAPPA 658	VEDANT S 657

MEGHA 655	LAXMI K 653	SHREYA 653	SADIYA S 651	MANISH 651	VISHAL 651	ADITYA 650	RAHUL U 650	MD A MUQEET 649	RIDA N P 649	VARUN 648	AAKANKSHA 646	ADITYA 646



SHAHANA 645	SUSHMITA 645	SRIOM B 645	ANKITA P 645	VAISHNAVI 644	SOMANATH 644	MAHALAKSHMI 644	BHARATH K 643	RAJSHEKHAR 643	SUMIT 642	MANIKANTH 642	ZOHRA T 642	SHWETA S 642

SOHAN P 641	ABHINAVA 640	GOWRI 640	ROHIT R 640	KANAKLATA 640	ANILKUMAR 640	MD S KASHIF 640	BHIMASHANKAR 638	SANTOSH 638	AKHILESH 638	VAJRA 637	ANUSHREE 636	VISHWA D 636

BHAVANI 635	SRIVANI R 635	BHUMIKA R 635	MANOJ 635	DIVAKAR H 635	PALLAVI 635	BALARAJ 635	ABHISHEK 634	PRACHI R 632	BUSHRA F 631	ABHISHEK 631	BHUMIKA S 631	GANGAMBIKA 631

MANJUNATH 630	SUMEET 630	SUPREET 630	BANASHANKARI 628	SHREYA S 627	SANDHYA 627	AKHILA 627	SOUMYA 625	SHIVASHANKAR 625	VARUNKUMAR 625	AKSHATA 624	A FATIMA 623	DINESH 623

SHRADHA 623	ARADHYA R 622	MANSI M 622	SHIVANI D 622	SHWETA S 621	PRAGATI B 621	PRAPTI 620	AMOGH N 620	SHIVAPRASAD 620	SPOORTI 619	SUMA 618	ANJALI 618	MD FAISAL S 618



SUMIT C 617	JANANISH 617	RAKSHITA 617	SOUMYA H 616	BHAGYASHREE 616	RAJ 615	KALLAMMA G 614	BHIMANAGOUDA 614	SOUMYA S 614	SHREYA W 613	AKSHATA 612	SRIRAM J 611	SHARANABASAVA 611

SHRIJA	GURUSHANTAMMA	JEEVAN M	VANI D	PRAGATI	SWATI	JHANSIRANI	SOUMYA K	SHREYA I	SHRUSTI D	SHRASTI P	VISHAL	SUNIL S
611	610	610	610	610	609	609	608	608	608	608	608	607



SHARAN P	SPOORTI	ZAID JAMEEL	ISRA TAZEEN	SHIVANI	SUNIL.S	ABHISHEK G	DHEERAJ	ANUSHREE	VINAY R	PRATHAM D	SIDDALINGAYYA	SHIVAKUMAR
607	607	607	607	607	607	606	606	605	605	605	605	603

VARSHA	CHAITRA	SUSHMA	SHRINIDHI	SANDYA L	GANGA	NADIRA	SHRUSHTI K	KHADIJA REEM	BHAVANA	NAWAZ	VIGNA S	RISHU K
603	603	602	602	602	602	602	601	601	601	601	600	600

JANVI J	AKSHAY	AKSHATA	SUMA	ARCHANA	VIDYARANI	AKSHATA R	NISHITA	Z FATIMA	APOORVA	BHUMIKA	HARSHA	SWATHI G
600	600	600	599	599	599	599	598	598	598	598	597	597

PRASOON	CHANVEERESH	GURURAJ	RAJSHEKHAR	VAISHNAVI P	PRUTHVI RAJ	BHAVANA	SANJANA M	VARSHA P	RADHIKA	INDUMATI	SHALINI	CHETAN
596	596	596	596	595	594	594	594	594	594	594	593	593

AMAN	ZIYAUL M	BASAVAPRASAD	AMULYA	SUBIYA M	SANJANA P	NASHWA I	PRIYA P	BHAGYA R	RAGHAVENDRA	ROHAN SINGH	SAIKIRAN K	SAKSHI A
592	591	591	591	590	590	590	589	589	589	589	588	588



AKSHATA	BASAVARAJ B	ADITYA S	POOJA A	SRUSHTI B	AKANKSHA	SHIVATEJA M	MAHINDRA	BHARATH	SANIYA	VISMITA B	SHANTHREDDY	SUMIT P
588	588	587	587	587	586	585	585	585	585	585	585	585

SOURAV	SANOBAR	SANJANA	ABHISHEK	NEHA P	MAYUR M	KARTHIK N	MALLAREDDY	AKASH	SHIVARUDRAMANI	PRAGATI S	SHREEHARI	E TANVEER
584	584	583	583	582	582	581	580	580	579	579	579	578

SADIYA M	PRAGATI	ROOPA	SHREYA C	SHREYAS	AFRIN	DHANESHWARI	VEERESH S	VIKAS	SINDHU	AYESHA K	KIRANKUMAR	AMRA BEGAM
578	578	578	576	575	575	574	574	573	573	573	573	572



ADITYA	MADIVALAPPA	POOJA	SHALINI	MEGHANA	SAHEBGOUDA	ALISHA S	AFEEFA S	ADITYA B	DEVARAJ	BHAVYA	SHARANBASAV	MALLANGOUDA
571	571	571	570	570	570	570	570	569	569	568	568	568

POOJA R	RAMESH	VAISHNAVI	RAMYA P	POOJADEVI	KARTHIK M	BHOOMIKA	KHUSHI A	MANOJ P	BHAGYAJYOTI	SHRAVAN	PRADEEP	VAISHNAVI
567	566	566	566	566	565	565	565	565	563	562	562	562



ABHISHEK	OMKAR	CAUVERY	AKHILESH	JYOTHI	VANDANA S	BHAVANI	SHASHANK	BHARAT D	SHOBHA	POOJA	SIDDHARODH	V A PRANAV
561	561	561	560	560	559	559	559	559	558	558	558	557

SHARANAGOUDA	PREETI T	PRAKRUTI P	MUSKAN B	ABHINAV R	BASAVARAJ	CHANNABASAVA	TEJASHWINI	SHREYA	AISHWARYA	AMRAPALI	SAHANA	ANKUSH
557	557	557	557	557	556	556	555	555	554	554	553	553

SANGEETA	RENUKA	SAKSHI B	SUMIT	ARIF AKBAR	RUTUJA R	MD RAYHAN	VARSHINI A	RENUKA S	NIRANJAN	SAMARTH	AZIZUNNISA	GUNDA R
553	553	553	553	553	553	552	552	552	551	551	550	550

SNEHA O	SWAPNA	TANEISHA	AJAY	NAYANA
550	550	550	550	550

ADMISSIONS OPEN

FOR NEET LONG TERM BATCH 2024-25

(FOR REPEATERS)

4th Batch Classes Start from 18-06-2024

FOR DETAILS CONTACT:

99021 37339 / 99165 24276

ಗುರುವಾರ,13 ಜೂನ್ 2024 | ಪುಟಗಳು: 18 | ಬೆಲೆ: ₹ 5.00
www.vijaykarnataka.com
ಸಂಪುಟ: 25 | ಸಂಚಿಕೆ: 159
ಬೆಂಗಳೂರು । ಮೈಸೂರು । ಶಿವಮೊಗ್ಗ । ಮಂಗಳೂರು । ಹುಬ್ಬಳ್ಳಿ । ಬಾಗಲಕೋಟೆ । ಕಲಬುರಗಿ । ಚಿತ್ರದುರ್ಗ । ಗಂಗಾವತಿ । ಹಾಸನ । ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

VK ವಿಜಯ ಕರ್ನಾಟಕ 25 SINCE 1999 ರಜತ ಸಂಭ್ರಮ ವಿಕ ಸಮಸ್ತ ಕನ್ನಡಿಗರ ಹೆಮ್ಮೆ

ಶೀಘ್ರದಲ್ಲೇ ಪೆಟ್ರೋಲ್, ಡೀಸೆಲ್ ಜಿಎಸ್‌ಟಿ ವ್ಯಾಪ್ತಿಗೆ: ಸಚಿವ ಹರ್ದೀಪ್‌ಸಿಂಗ್ P04

ಬೆಂಗಳೂರು ದರ		
22 ಕ್ಯಾರೆಟ್ (ಆಭರಣ ಚಿನ್ನ)	₹6,835	1 ಗ್ರಾಂ ದರ (ಜಿಎಸ್‌ಟಿ, ಮೇಕಿಂಗ್ ಪ್ರತ್ಯೇಕ)
24 ಕ್ಯಾರೆಟ್ (ಗಟ್ಟಿ ಚಿನ್ನ)	₹7,390	1 ಗ್ರಾಂ ದರ (ಜಿಎಸ್‌ಟಿ ಪ್ರತ್ಯೇಕ)

ಅರುಣಾಚಲ ನೂತನ ಸಿಎಂ ಆಗಿ ಪೆಮಾ ಖಂಡು ಇಂದು ಪ್ರಮಾಣ

ಪಂಚ ಯೋಜನೆ ಸಾಧಕ-ಬಾಧಕ ಅಧ್ಯಯನಕ್ಕೆ ಮುಂದಾದ ರಾಜ್ಯ ಸರಕಾರ

ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರಕ್ಕೆ ಜವಾಬ್ದಾರಿ

ಗ್ಯಾರಂಟಿಗಳಿಗೆ ಅಗ್ನಿಪರೀಕ್ಷೆ

■ ಎಂ. ಕೀರ್ತಿ ಪ್ರಸಾದ್ ಬೆಂಗಳೂರು
keerthi.prasad@timesgroup.com

ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳ ರಾಜಕೀಯ ಲಾಭ- ನಷ್ಟದ ಲೆಕ್ಕಾಚಾರದ ಚರ್ಚೆ ನಡೆದಿರುವ ಹೊತ್ತಿನಲ್ಲೇ ಸರಕಾರ ಗ್ಯಾರಂಟಿಗಳ ಅನುಷ್ಠಾನ ಕುರಿತಂತೆ ಮೌಲ್ಯಮಾಪನಕ್ಕೆ ಸಿದ್ಧತೆ ನಡೆದಿದೆ. ಸರಕಾರದ ಸೂಚನೆಯಂತೆ ಶಕ್ತಿ, ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮೀ ಹಾಗೂ ಯುವನಿಧಿ ಯೋಜನೆಗಳ ಪರಿಣಾಮ ಕುರಿತು ಮೌಲ್ಯಮಾಪನಕ್ಕೆ ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ ಸಜ್ಜಾಗಿದೆ.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕುರಿತಂತೆ ಅಧ್ಯಯನ ಮಾಡಿ, ಮೌಲ್ಯಮಾಪನ ವರದಿ ಸಲ್ಲಿಸುವಂತೆ ಸರಕಾರ ಪ್ರಾಧಿಕಾರಕ್ಕೆ ಇತ್ತೀಚೆಗೆ ಸೂಚನೆ ನೀಡಿದೆ. ಅದರಂತೆ ಈಗಾಗಲೇ ಎರಡು ಸುತ್ತಿನ ಸಭೆ ನಡೆಸಿರುವ ಪ್ರಾಧಿಕಾರವು ಸದ್ಯದಲ್ಲೇ ಮೌಲ್ಯಮಾಪನ ಪ್ರಕ್ರಿಯೆ ಆರಂಭಿಸಲಿದ್ದು, ಸುಮಾರು 6 ತಿಂಗಳಲ್ಲಿ ಪೂರ್ಣಗೊಳಿಸಿ ವರದಿ ಸಲ್ಲಿಸಲು ಸಿದ್ಧತೆ ನಡೆಸಿದೆ.

ರಾಜ್ಯದಲ್ಲಿ 100 ಕೋಟಿ ರೂ. ವೆಚ್ಚ ಮೀರಿದ ಯೋಜನೆ, ಕಾರ್ಯಕ್ರಮಗಳ ಅನುಷ್ಠಾನ, ಪರಿಣಾಮ ಕುರಿತಂತೆ ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ನಡೆಸಬೇಕೆಂಬ ನಿಯಮವಿದೆ. ಸಂಬಂಧಪಟ್ಟ ಇಲಾಖೆಯೇ ಮೌಲ್ಯಮಾಪನ ಕಾರ್ಯವನ್ನು ಪ್ರಾಧಿಕಾರಕ್ಕೆ ವಹಿಸಬಹುದು. ಇಲ್ಲವೇ ಆಂತರಿಕ ಇಲ್ಲವೇ ಬಾಹ್ಯ ಮೂಲಗಳಿಂದಲೂ ಮೌಲ್ಯಮಾಪನ ನಡೆಸಲು ಅವಕಾಶವಿದೆ. ಪಂಚ ಗ್ಯಾರಂಟಿಗಳಿಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ 52,000 ಕೋಟಿ ರೂ. ವೆಚ್ಚದ ಅಂದಾಜಿದ್ದು, ಬಜೆಟ್‌ನಲ್ಲಿ ಅನುದಾನ ಕಾಯ್ದಿರಿಸಲಾಗಿದೆ.

ಮೌಲ್ಯಮಾಪನಕ್ಕೆ ಮುಂದಾದ ಸರಕಾರ

ಸಾಮಾನ್ಯವಾಗಿ ಯಾವುದೇ ಯೋಜನೆಯ ಅರ್ಹ ಫಲಾನುಭವಿಗಳು, ಬಿಡುಗಡೆಯಾಗಿರುವ ಅನುದಾನ, ಫಲಾನುಭವಿಗಳಿಗೆ ತಲುಪಿರುವ ಪ್ರಮಾಣ, ಒಟ್ಟು ಗುರುತಿಸಲಾದ ಫಲಾನುಭವಿಗಳು, ಜಿಲ್ಲಾವಾರು- ತಾಲೂಕುವಾರು ಫಲಾನುಭವಿಗಳ ವಿವರ, ಅತಿ ಹೆಚ್ಚು ಹಾಗೂ ಅತಿ ಕಡಿಮೆ ಫಲಾನುಭವಿಗಳಿರುವ ಪ್ರದೇಶ... ಹೀಗೆ ನಾನಾ ದತ್ತಾಂಶ ಆಧರಿಸಿ ಪ್ರಾಧಿಕಾರವು ಮೌಲ್ಯಮಾಪನ ವಿಧಾನ ನಿಗದಿಪಡಿಸಲಿದೆ. ಅದೇ ವಿಧಾನವನ್ನು ಗ್ಯಾರಂಟಿಗಳ ಮೌಲ್ಯಮಾಪನಕ್ಕೂ ಬಳಸುವ ಸಾಧ್ಯತೆ ಇದೆ. »06

ಪಂಚ ಸವಾಲಿಗೆ ಪರಿಹಾರವೇನು?

1. 'ಶಕ್ತಿ' ಜಾರಿ ಬಳಿಕ ಸರಕಾರಿ ಬಸ್‌ಗಳಲ್ಲಿ ಹಿರಿಯ ನಾಗರಿಕರು, ಶಾಲಾ ಮಕ್ಕಳಿಗೆ ಪ್ರಯಾಣ ದುಸ್ತರವಾಗಿದೆ.
2. ಸ್ಮಾರ್ಟ್‌ಕಾರ್ಡ್ ವಿತರಣೆಯೂ ನನೆಗುದಿಗೆ ಬಿದ್ದಿದ್ದು, ಮುಂದೇನು ಎಂಬ ಗೊಂದಲ.
3. ಅನ್ನಭಾಗ್ಯ ಯೋಜನೆಯಡಿ ಉಚಿತ ಅಕ್ಕಿ ನೀಡಲು ಸಾಧ್ಯವಾಗಿಲ್ಲ, ಮಾಸಿಕ 170 ರೂ. ಡಿಬಿಟಿಗೆ ಪರ್ಯಾಯ ಏನು?
4. ಗೃಹಲಕ್ಷ್ಮೀ ಯೋಜನೆ ಇನ್ನೂ ಕೆಲವರಿಗೆ ತಲುಪಿಲ್ಲ ಎಂಬ ದೂರಿದೆ.
5. ಒಂದೇ ಕುಟುಂಬದಲ್ಲಿರುವ ಮೂರಕ್ಕಿಂತ ಹೆಚ್ಚು ಯೋಜನಾ ಫಲಾನುಭವಿಗಳನ್ನು ಗುರುತಿಸುವುದು ಹೇಗೆ?

6 ತಿಂಗಳಲ್ಲಿ ವರದಿ

ಪ್ರಾಧಿಕಾರವು ಆರು ತಿಂಗಳಲ್ಲಿ ಅಧ್ಯಯನ, ಮೌಲ್ಯಮಾಪನ ನಡೆಸಿ ವರದಿ ಸಲ್ಲಿಸುವ ಸಾಧ್ಯತೆ ಇದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸ್ಥಿತಿಗತಿ ಕುರಿತು ಅಧ್ಯಯನ ದಾಖಲಾಂಶವನ್ನು ಗುರುತಿಸುವ ಪ್ರಯತ್ನ ನಡೆಸಲಿದ್ದು, ಫಲಾನುಭವಿಗಳಿಗೆ ಪರಿಣಾಮಕಾರಿಯಾಗಿ ಸೇವೆ ಒದಗಿಸುವ ಸಂಬಂಧ ಶಿಫಾರಸು ಮಾಡಲಿದೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಮಹತ್ವದ ಪಾತ್ರ ವಹಿಸಿದ್ದ ಹಾಗೂ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಿರೀಕ್ಷಿಸಿದಷ್ಟು ಸ್ಥಾನ ಪಡೆಯಲು ಸಹಕಾರಿ ಎನಿಸದ ಗ್ಯಾರಂಟಿಗಳ ಕುರಿತಂತೆ ಪ್ರಾಧಿಕಾರ ಮೌಲ್ಯಮಾಪನ ನಡೆಸಿ ಸಲ್ಲಿಸುವ ವರದಿ ಬಗ್ಗೆ ಕುತೂಹಲ ಮೂಡಿದೆ.

ಐದು ಗ್ಯಾರಂಟಿ ಯೋಜನೆಗಳ ಕುರಿತಂತೆ ಮೌಲ್ಯಮಾಪನ ನಡೆಸುವಂತೆ ಸರಕಾರ ಇತ್ತೀಚೆಗೆ ಸೂಚನೆ ನೀಡಿದೆ. ಯೋಜನೆಗಳ ಕುರಿತು 6 ತಿಂಗಳಲ್ಲಿ ಮೌಲ್ಯಮಾಪನ ನಡೆಸಿ ವರದಿ ಸಲ್ಲಿಸಲು ಪ್ರಯತ್ನಿಸಲಾಗುವುದು.

- ಸುಷ್ಮಾ ಗೋಡಬೋಲೆ, ಮುಖ್ಯ ಮೌಲ್ಯಮಾಪನ ಅಧಿಕಾರಿ



ಕುವೈತ್‌ನಲ್ಲಿ ಅಗ್ನಿ ಅವಘಡ 40 ಭಾರತೀಯರ ಸಾವು?

ಕುವೈತ್ ಸಿಟಿ: ಗಲ್ಫ್‌ರಾಷ್ಟ್ರ ಕುವೈತ್‌ನ ಮಂಗಾಫ್‌ನಲ್ಲಿರುವ ವಸತಿ ಸಮುಚ್ಚಯದಲ್ಲಿ ಸಂಭವಿಸಿದ ಭಾರಿ ಅಗ್ನಿ ಅನಾಹುತದಲ್ಲಿ 49ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಇದರಲ್ಲಿ ಸುಮಾರು 40 ಭಾರತೀಯರು ಸೇರಿದ್ದಾರೆ ಎಂದು ತಿಳಿದುಬಂದಿದೆ.

ಮೃತ ಭಾರತೀಯರಲ್ಲಿ ಹೆಚ್ಚಿನವರು ಕೇರಳ ಮತ್ತು ತಮಿಳುನಾಡು ರಾಜ್ಯದವರೆಂದು ಹೇಳಲಾಗಿದೆ.

6 ಅಂತಸ್ತಿನ ಕಟ್ಟಡದ ಅಡುಗೆಮನೆಯೊಂದರಲ್ಲಿ ಬುಧವಾರ ಬೆಳಗ್ಗೆ ಕಾಣಿಸಿಕೊಂಡ ಬೆಂಕಿ ಇಡೀ ಕಟ್ಟಡಕ್ಕೆ ಆವರಿಸಿತು. ಕೇರಳದ ಉದ್ಯಮಿಗೆ ಸೇರಿದ ಕಟ್ಟಡದಲ್ಲಿ 160 ಮಂದಿ ವಾಸಿಸುತ್ತಿದ್ದರು. ಮೃತರಲ್ಲಿ ಹಲವರು ಬೆಂಕಿಯಿಂದ ತಪ್ಪಿಸಿಕೊಳ್ಳಲು ಕಟ್ಟಡದಿಂದ ಕೆಳಗೆ ಜಿಗಿದು ಮೃತಪಟ್ಟರು. 50ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದು, ಹಲವರ ಸ್ಥಿತಿ ಚಿಂತಾಜನಕವಾಗಿದೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ.

- ಭಾರತೀಯರ ರಕ್ಷಣೆಗೆ ಕೇಂದ್ರ ಸರಕಾರ ತುರ್ತು ಕ್ರಮ
- ತುರ್ತು ಸಹಾಯವಾಣಿ: +96565505246 ಆರಂಭ
- ಪ್ರಧಾನಿ ತೀವ್ರ ಸಂತಾಪ, ಅಧಿಕಾರಿಗಳ ಜತೆ ತುರ್ತು ಸಭೆ
- ಮೋದಿ ಸೂಚನೆ ಮೇರೆಗೆ ಕುವೈತ್‌ಗೆ ತೆರಳಿದ ವಿದೇಶಾಂಗ ಖಾತೆ ಸಹಾಯಕ ಸಚಿವ ಕೀರ್ತಿ ವರ್ಧನ್
- ಆಸ್ಪತ್ರೆ ಬಳಿ ರಾಯಭಾರಿಗಳ ಮೊಕ್ಕಾಂ, ಖುದ್ದು ನಿಗಾ

ಡಿ ಗ್ಯಾಂಗ್‌ಗೆ ಖಾಕಿ ಡ್ರಿಲ್

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಆರೋಪದಡಿ ಬಂಧಿತರಾಗಿರುವ ನಟ ದರ್ಶನ್ ಮತ್ತು ತಂಡವನ್ನು ಪೊಲೀಸರು ಸತತ ಎರಡನೇ ದಿನ ತೀವ್ರ ವಿಚಾರಣೆಗೆ ಒಳಪಡಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದ ಮತ್ತಷ್ಟು ಮಹತ್ವದ ವಿಚಾರಗಳು ಬಯಲಾಗಿವೆ.

ರೇಣುಕಾಸ್ವಾಮಿ ಮೃತದೇಹ ವಿಲೇವಾರಿ ಹಾಗೂ ಕೊಲೆ ತಪ್ಪೊಪ್ಪಿ ಶರಣಾಗತಿಗೆ ನಾಲ್ವರು ಯುವಕರಿಗೆ 30 ಲಕ್ಷ ರೂ. ಡೀಲ್ ನಡೆದಿತ್ತು ಎಂಬ ವಿಚಾರ ತನಿಖೆಯಲ್ಲಿ ತಿಳಿದುಬಂದಿದೆ. ಅಲ್ಲದೆ, ದರ್ಶನ್ ಅಭಿಮಾನಿಗಳ ಸಂಘದ ಚಿತ್ರದುರ್ಗ ಜಿಲ್ಲಾ ಘಟಕದ ಅಧ್ಯಕ್ಷ ರಾಘವೇಂದ್ರ ಶರಣಾಗತಿ ಹಿಂದೆಯೂ ಆರೋಪಿಗಳು ತಂತ್ರ ರೂಪಿಸಿದ್ದರು. ರೇಣುಕಾ ಸ್ವಾಮಿ ಕೂಡ ಚಿತ್ರದುರ್ಗದವನೇ ಆಗಿದ್ದು ಇಬ್ಬರ ನಡುವೆ ಹಣಕಾಸು ವ್ಯವಹಾರದ ವೈಷಮ್ಯವಿತ್ತು. ಇದೇ ಕಾರಣಕ್ಕೆ ಕೊಲೆ ಮಾಡಲಾಗಿದೆ ಎಂದು ಪೊಲೀಸರಿಗೆ ತಿಳಿಸಬೇಕು. ಹೀಗಾಗಿ, ದರ್ಶನ್, ಪವಿತ್ರಾಗೌಡ ಹೆಸರು ಹೊರಗಡೆ ಬರುವುದಿಲ್ಲ ಎಂಬುದು ಅವರ ಲೆಕ್ಕಾಚಾರವಾಗಿತ್ತು. ಹೀಗಾಗಿಯೇ, ರಾಘವೇಂದ್ರ ಕೂಡ ಶರಣಾಗಿದ್ದ ಎಂದು ಮೂಲಗಳು ಹೇಳಿವೆ. ವಿವರ »02

ಮಹತ್ವದ ಮಾಹಿತಿ ಬಹಿರಂಗ

- ಆರೋಪಿಗಳ ಸಂಖ್ಯೆ 17ಕ್ಕೆ ಏರಿಕೆ, ಮಹಿಳೆ ಸೇರಿ ನಾಲ್ವರಿಗಾಗಿ ಶೋಧ
- ಚಾಮರಾಜ/ತಮಿಳುನಾಡಿನ ಅರಣ್ಯದಲ್ಲಿ ಮೃತದೇಹ ಎಸೆಯಲು ಸಂಚು
- ಮಾರ್ಗಮಧ್ಯೆ ಸಿಕ್ಕಿಬೀಳುವ ಭಯದಲ್ಲಿ ಸುಮನಹಳ್ಳಿ ಬ್ರಿಡ್ಜ್ ಸಮೀಪವೇ ವಿಲೇವಾರಿ
- ಅಶ್ಲೀಲ ಫೋಟೊ, ಅಸಭ್ಯ ಸಂದೇಶ ಕಳುಹಿಸಿದ್ದ ರೇಣುಕಾಸ್ವಾಮಿ
- ಮರಣೋತ್ತರ ಪರೀಕ್ಷಾ ವರದಿಯಲ್ಲಿ ಗಂಭೀರ ಗಾಯದ ಸುಳಿವು
- ಕೊಲೆ ನಡೆದ ಶೆಡ್‌ಗೆ ಆರೋಪಿಗಳನ್ನು ಕರೆದೊಯ್ದು ಮಹಜರು

ಪೋಕ್ಸೊ ಕೇಸ್: ಬಿಎಸ್‌ವೈಗೆ ಸಿಐಡಿ ನೋಟಿಸ್

»06

ಕೋರ್ಟ್ ಆವರಣದಲ್ಲೇ ಪಾಕ್ ಪರ ಘೋಷಣೆ »06

ವಿಕ ಹೊಂಗಿರಣ

ನಮ್ಮ ಮೌಲ್ಯವನ್ನು ಗುರುತಿಸುವಲ್ಲಿ ಬೇರೆಯವರು ಅಸಮರ್ಥರಾದರೆ, ಅದರಿಂದ ನಮ್ಮ ಮೌಲ್ಯವೇನೂ ಕಡಿಮೆಯಾಗುವುದಿಲ್ಲ.

Vencobb
ಫಾರಂ ಫಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ ₹123/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹163/-
ವಿಥ್ ಸ್ಕಿನ್ ₹230/- | ವಿಥೌಟ್ ಸ್ಕಿನ್ ₹262/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಕಲುಷಿತ ನೀರು ಸೇವನೆ, ಇಬ್ಬರು ಹಿರಿಯರ ಸಾವು

ಮಧುಗಿರಿ (ತುಮಕೂರು): ಕಲುಷಿತ ನೀರು ಸೇವನೆಯಿಂದ ಗಂಭೀರವಾಗಿ ಅನಾರೋಗ್ಯಕ್ಕೀಡಾಗಿದ್ದ ಇಬ್ಬರು ಹಿರಿಯ ನಾಗರಿಕರು ಚಿಕಿತ್ಸೆ ಫಲಿಸದೆ ಬುಧವಾರ ರಾತ್ರಿ ಮೃತಪಟ್ಟರು. ತಾಲೂಕಿನ ಚಿನ್ನೇನಹಳ್ಳಿಯ ಪೆದ್ದಣ್ಣ (72) ಹಾಗೂ ಚಿಕ್ಕದಾಸಪ್ಪ (76) ಮೃತರು.

ಸೋಮವಾರ ಚಿನ್ನೇನಹಳ್ಳಿ ಲಕ್ಷ್ಮೀ ದೇವಿ -ಕೆಂಚಮ್ಮ ದೇವಿಯ ಜಾತ್ರಾ ಮಹೋತ್ಸವದಲ್ಲಿ ಭಾಗಿಯಾಗಿದ್ದ ಭಕ್ತರು ಕಲುಷಿತ ನೀರು ಸೇವನೆಯಿಂದ ಅಸ್ವಸ್ಥರಾಗಿದ್ದರು. 62 ಮಂದಿ ಆರೋಗ್ಯದಲ್ಲಿ ಏರುಪೇರಾಗಿತ್ತು. ಈ ಪೈಕಿ 8 ಮಂದಿಯನ್ನು ಜಿಲ್ಲಾಸ್ಪತ್ರೆ, ಉಳಿದವರನ್ನು ಮಧುಗಿರಿ ತಾಲೂಕು ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪೆದ್ದಣ್ಣ, ಚಿಕ್ಕದಾಸಪ್ಪ ಮೃತಪಟ್ಟಿದ್ದಾರೆ.

ಮೈಸೂರು ಭಾಗದಲ್ಲಿ ಕಲುಷಿತ ನೀರು ಸೇವಿಸಿ ಸಾವು ಸಂಭವಿಸಿದ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಡಿಸಿ, ಸಿಇಒಗಳ ಸಭೆ ನಡೆಸಿದ್ದರು. ಇಂತಹ ಪ್ರಕರಣ ಮರುಕಳಿಸಿದರೆ ಸಂಬಂಧಿಸಿದ ಅಧಿಕಾರಿಗಳನ್ನು ಹೊಣೆ ಮಾಡುವುದಾಗಿ ಎಚ್ಚರಿಸಿದ್ದರು.

ADVERTORIAL
ಮಂಡಿನೋವು
ಸರ್ಜರಿ ಇಲ್ಲದೇ ಉಪಶಮನ
10,000ಕ್ಕೂ ಹೆಚ್ಚು ಮಂದಿಗೆ ಅಲಿವಿಯೇಟ್‌ನಿಂದ ನೋವು ಮುಕ್ತ ಜೀವನ
ಕೇವಲ 30-60 ನಿಮಿಷದ ವಿಧಾನ | ಆಸ್ಪತ್ರೆ ವಾಸವಿಲ್ಲ | ವೇಗವಾದ ಚೇತರಿಕೆ
ದೀರ್ಘಕಾಲದ ಅಸ್ಥಿಸಂಧಿವಾತದ ನೋವನ್ನು ಕೇವಲ ಔಷಧಿಗಳಿಂದ ಮಾತ್ರವೇ ಪರಿಣಾಮಕಾರಿಯಾಗಿ ನಿರ್ವಹಿಸುವುದು ಸಾಧ್ಯವೇ ಇಲ್ಲ. ಸಂಧಿವಾತವು ತೀವ್ರವಾಗಿರುವವರಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿದ್ದರೂ ಸಹ, ಬಹುಪಾಲು ಜನರು ಶಸ್ತ್ರಚಿಕಿತ್ಸೆಯಿಲ್ಲದ ನೋವಿನಿಂದ ಮುಕ್ತರಾಗಬಹುದು.
ರೇಡಿಯೋ ಫ್ರೀಕ್ವೆನ್ಸಿ ಅಬ್ಲೇಶನ್ (ಆರ್.ಎಫ್.ಎ), ಸರ್ಜರಿಯೇ ಇಲ್ಲದೇ ನೋವನ್ನು ಉಪಶಮಿಸುವ ಆಧುನಿಕ ಚಿಕಿತ್ಸಾ ವಿಧಾನಗಳಲ್ಲಿ ಒಂದಾಗಿದೆ.
ಈ ವಿಧಾನವು ಪೀಡಿತ ಪ್ರದೇಶದಲ್ಲಿನ ನೋವಿಗೆ ಕಾರಣವಾಗುವ ನರಗಳನ್ನು ಗುರುತಿಸಿ, ಅವು ಮೆದುಳಿಗೆ ನೋವಿನ ಸಂದೇಶ ನೀಡದಂತೆ ತಡೆಯುವ ಕೆಲಸ ಮಾಡುತ್ತದೆ. ಇದರಿಂದಾಗಿ ನೋವು ಹಂತ ಹಂತವಾಗಿ ಕಡಿಮೆಯಾಗುತ್ತದೆ.
RADIO FREQUENCY ABLATION FDA APPROVED
ಈ ಪ್ರಕ್ರಿಯೆಯು ಕನಿಷ್ಠ ಛೇದನವನ್ನು ಒಳಗೊಂಡಿರುವುದು ಮಾತ್ರವಲ್ಲದೇ, ಅತೀ ಕಡಿಮೆ ಚೇತರಿಕೆಯ ಸಮಯವನ್ನು ತೆಗೆದುಕೊಳ್ಳುತ್ತದೆ. ಹೆಚ್ಚಿನ ರೋಗಿಗಳು ಅದೇ ದಿನ ಮನೆಗೆ ತೆರಳಿ, ಮರುದಿನ ದಿಂದಲೇ ಸಾಮಾನ್ಯ ಚಟುವಟಿಕೆಗಳನ್ನು ಶುರು ಮಾಡಬಹುದು.
ಮೊಣಕಾಲು ನೋವಿನ ಪ್ರಚೋದಕ ಸ್ಥಳವನ್ನು ಕಂಡುಹಿಡಿಯುತ್ತಿರುವ ವೈದ್ಯರು
ಆರ್.ಎಫ್.ಎ ವಿಧಾನದ ಹಂತಗಳು:
1.ತಯಾರಿ: ವೈದ್ಯರು ಸ್ಥಳೀಯ ಅರಿವಳಿಕೆಯನ್ನು ನೋವು ಇರುವ ಜಾಗಕ್ಕೆ ಚುಚ್ಚಿ, ಮಂದಿಯ ಪ್ರದೇಶ ನಿಷ್ಕ್ರಿಯಗೊಳಿಸುತ್ತಾರೆ.
2.ಚಿತ್ರಣ: ನೋವು ಉಂಟುಮಾಡುವ ನರಗಳನ್ನು ಪತ್ತೆಹಚ್ಚಲು ವೈದ್ಯರು ಎಕ್ಸ್-ರೇ ಅಥವಾ ಅಲ್ಟ್ರಾಸೌಂಡ್ ಅನ್ನು ಬಳಸುತ್ತಾರೆ.
3.ಪರೀಕ್ಷೆ: ಸರಿಯಾದ ನರವನ್ನು ಖಚಿತಪಡಿಸಲು ಸೂಜಿಯ ಮೂಲಕ ವಿದ್ಯುತ್ ಪ್ರವಾಹವನ್ನು ಕಳುಹಿಸಲಾಗುತ್ತದೆ, ಇದು ಜುಮ್ಮೆನಿಸುವಿಕೆ ಸಂವೇದನೆ ಉಂಟುಮಾಡುತ್ತದೆ.
4.ಶಾಖ: ರೇಡಿಯೋ ಆವರ್ತನದ ಮೂಲಕ ಉತ್ಪತ್ತಿಯಾಗುವ ಶಾಖವು ಪೀಡಿತ ಪ್ರದೇಶದ ನರಗಳಿಗೆ ನೀಡಲಾಗುತ್ತದೆ. ಇದು ನರಗಳಲ್ಲಿ ಸಣ್ಣ ಗಾಯವನ್ನು ಉಂಟುಮಾಡಿ ನೋವಿನ ಸಂಕೇತಗಳನ್ನು ಮೆದುಳಿಗೆ ಕಳುಹಿಸದಂತೆ ತಡೆಯುತ್ತದೆ.
5.ಪ್ರಕ್ರಿಯೆಯ ನಂತರ: ಸಣ್ಣ ಬ್ಯಾಂಡೇಜ್ ಅನ್ನು ಅನ್ವಯಿಸಲಾಗುತ್ತದೆ. ನೀವು ಸ್ವಲ್ಪ ವಿಶ್ರಾಂತಿ ಪಡೆದು ಮನೆಗೆ ತೆರಳಬಹುದು. ನಂತರ ನೋವು ಕ್ರಮ ಕ್ರಮವಾಗಿ ಉಪಶಮನಗೊಳ್ಳುತ್ತದೆ.
ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಕೂಡ ಅಲಿವಿಯೇಟ್‌ನಲ್ಲಿ ಸರ್ಜರಿ ಇಲ್ಲದೇ ಚಿಕಿತ್ಸೆ ಲಭ್ಯ
ನೋವು ಮುಕ್ತ ಜೀವನಕ್ಕೆ ಇಂದೇ ಸಂಪರ್ಕಿಸಿ
81475 50855
080 23614888
ಇವರ ಕ್ಲಿನಿಕ್‌ಗಳು ಬೆಂಗಳೂರಿನಲ್ಲಿ ಇವೆ:
ಅಲಿವಿಯೇಟ್ ಪೇನ್ ಮ್ಯಾನೇಜ್‌ಮೆಂಟ್ ಕ್ಲಿನಿಕ್
Google Reviews 4.8
ಪೀಣ್ಯಾ ದಾಸರಹಳ್ಳಿ | ಸದಾಶಿವನಗರ | ವೈಟ್‌ಫೀಲ್ಡ್ | ಜಯನಗರ | ಇಂದಿರಾನಗರ

ಶರಣಾಗಲು 30 ಲಕ್ಷ ರೂ. ದರ್ಶನ್ ಡೀಲ್!

ರೇಣುಕಾಸ್ವಾಮಿ ಮೃತದೇಹ ಬಿಸಾಡಿ ಬರಲು 10 ಲಕ್ಷ ರೂ. ಮುಂಗಡ ಪಡೆದಿದ್ದ ಗ್ಯಾಂಗ್ | ಇನ್ನೂ ನಾಲ್ವರು ಭಾಗಿ

ಪವನ್ | ವಿನಯ್ | ಕಾರ್ತಿಕ್ | ಲಕ್ಷ್ಮಣ್ | ರಾಘವೇಂದ್ರ | ನಾಗರಾಜ | ನಂದೀಶ | ನಿಖಿಲ್ ನಾಯಕ್

■ ಮಂಜುನಾಥ ಲಘುಮೇನಹಳ್ಳಿ ಬೆಂಗಳೂರು
manjunatha.s@timesgroup.com

ಚಿತ್ರದುರ್ಗದ ರೇಣುಕಾಸ್ವಾಮಿ (34) ಕೊಲೆಗೈದ ಆರೋಪ ಎದುರಿಸುತ್ತಿರುವ ನಟ ದರ್ಶನ್ ಮತ್ತು ತಂಡ, ರೇಣುಕಾಸ್ವಾಮಿ ಮೃತದೇಹ ವಿಲೇವಾರಿ ಹಾಗೂ ಶರಣಾಗತಿಗೆ ನಾಲ್ವರು ಯುವಕರಿಗೆ 30 ಲಕ್ಷ ರೂ. ಡೀಲ್ ನೀಡಿತ್ತು ಎಂಬ ವಿಚಾರ ತನಿಖೆಯಲ್ಲಿ ಬಯಲಾಗಿದೆ. ಡೀಲ್ ಮೊತ್ತ 30 ಲಕ್ಷ ರೂ.ಗಳನ್ನು ತನಿಖಾ ತಂಡ ವಶಕ್ಕೆ ಪಡೆದುಕೊಂಡಿದೆ.

ಜೂ.10ರಂದು ರಾತ್ರಿ ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಶರಣಾಗಿದ್ದ ಗಿರಿನಗರದ ಕಾರ್ತಿಕ್ ಅಲಿಯಾಸ್ ಕಪ್ಪೆ ನೀಡಿದಂತೆ ನಾಲ್ವರ ವಿಚಾರಣೆ ವೇಳೆ ರೇಣುಕಾಸ್ವಾಮಿ ಹತ್ಯೆ ಹಿಂದಿನ 'ಡಿ ಗ್ಯಾಂಗ್' ಕರಾಮತ್ತು ಬಯಲಾಗಿತ್ತು. ಥ್ರಿಲ್ ಸಿನಿಮಾ ಶೈಲಿಯಲ್ಲಿ ರೇಣುಕಾಸ್ವಾಮಿ ಕೊಲೆಯಲ್ಲಿ ಬಚಾವಾಗಲು ದರ್ಶನ್ ಮತ್ತಿತರರು ಹೆಣೆದಿದ್ದ ಅಸಲಿ ಕಥೆ ಬೆಳಕಿಗೆ ಬಂದಿತ್ತು. ಇದರ ಆಧಾರದಲ್ಲೇ ಪೊಲೀಸರು ಮೈಸೂರಿನಲ್ಲಿದ್ದ ದರ್ಶನ್ ಸೇರಿ 13 ಮಂದಿಯನ್ನು ಹೆಡೆಮುರಿಕಟ್ಟಿತ್ತು.

ಅಶ್ಲೀಲ ಸಂದೇಶ ಹಾಗೂ ಫೋಟೊ ಕಳುಹಿಸಿ ಪವಿತ್ರಾ ಗೌಡ ಅವರಿಗೆ ಕಿರುಕುಳ ನೀಡುತ್ತಿದ್ದ ಚಿತ್ರದುರ್ಗದ ರೇಣುಕಾಸ್ವಾಮಿ ಅವರನ್ನು ದರ್ಶನ್ ಸೂಚನೆಯಂತೆ ಇತರ ಆರೋಪಿಗಳು ಜೂ.8ರಂದು ಪಟ್ಟಣಗೆರೆ ಶೆಡ್‌ನಲ್ಲಿ ಮಾರಣಾಂತಿಕ ಹಲ್ಲೆ ನಡೆಸಿ ಕೊಲೆಗೈದಿದ್ದರು. ಶೆಡ್‌ನಲ್ಲಿಯೇ ರೇಣುಕಾಸ್ವಾಮಿ ಪ್ರಾಣಬಿಡುತ್ತಿದ್ದಂತೆ ಆರೋಪಿಗಳು ಕಂಗಾಲಾಗಿದ್ದರು. ದರ್ಶನ್ ಅವರನ್ನು ಹೇಗಾದರೂ ಮಾಡಿ ಈ ಕೃತ್ಯದಿಂದ ಬಚಾವ್ ಮಾಡಬೇಕು ಎಂದು ಕೆ.ಪವನ್ ಯೋಜನೆ ರೂಪಿಸಿದ್ದ.

ಜೂ.10ರಂದು ಸುಮನಹಳ್ಳಿ ಮೋರಿಯ ಬಳಿ ರೇಣುಕಾಸ್ವಾಮಿ ಮೃತದೇಹ ಪತ್ತೆಯಾಗುತ್ತಿದ್ದಂತೆಯೇ ಆರೋಪಿಗಳಿಗೆ ಹೆದರಿಕೆ ಶುರುವಾಗಿತ್ತು. ಹೀಗಾಗಿ, ಗಿರಿನಗರದ ಪಟ್ಟಣಗೆರೆ ಪ್ರದೇಶಗಳಿಗೆ ಕರೆ ಮಾಡಿದ್ದ ಪವನ್, ಇಡೀ ಕೃತ್ಯವನ್ನು ವಿವರಿಸಿದ್ದ. ಜತೆಗೆ, ಕೊಲೆಯಾದ ಮೃತದೇಹವನ್ನು ಯಾರಿಗೂ ಗೊತ್ತಾಗದಂತೆ ವಿಲೇವಾರಿ ಮಾಡಬೇಕು. ಒಂದು ವೇಳೆ ಕೊಲೆ ಪ್ರಕರಣ ಬಯಲಾದರೆ ಪೊಲೀಸರಿಗೆ ಶರಣಾಗಿ ಒಪ್ಪಿಕೊಳ್ಳಲು ಹುಡುಗರನ್ನು ಸಿದ್ಧಪಡಿಸುವಂತೆ ಸೂಚಿಸಿದ್ದ. ಈ ಕೆಲಸಕ್ಕೆ ಪ್ರದೋಶ್ 30 ಲಕ್ಷ ರೂ.ಗಳಿಗೆ ದೀಪಕ್‌ಗೆ ಡೀಲ್ ಒಪ್ಪಿಸಿದ್ದ. ಡೀಲ್ ಒಪ್ಪಿಕೊಂಡಿದ್ದ ದೀಪಕ್, ಗಿರಿನಗರದ ಕಾರ್ತಿಕ್ ಹಾಗೂ ಉಳಿದವರಿಗೆ ಶರಣಾಗಲು ಒಪ್ಪಿ, ತಲಾ ಐದು ಲಕ್ಷ ರೂ. ನೀಡುವುದು ಹಾಗೂ ಪ್ರಕರಣದಲ್ಲಿ ಜಾಮೀನು ಕೊಡಿಸುವುದು, ಕೋರ್ಟ್ ವಿಚಾರಣೆ ಖರ್ಚು, ವೆಚ್ಚ ನೋಡಿ ಕೊಳ್ಳುವ ಭರವಸೆ ನೀಡಿದ್ದ.

ಡೀಲ್‌ನ ಮೊದಲ ಕಂತು 10 ಲಕ್ಷ ರೂ.ಗಳನ್ನು ಪವಿತ್ರಾಗೌಡ ಹಾಗೂ ಪವನ್ ಮುಖಾಂತರ ದೀಪಕ್‌ಗೆ ತಲುಪಿತ್ತು. ಇದೇ ಹಣದಲ್ಲಿ ಕೇಶವಮೂರ್ತಿ ಹಾಗೂ ನಿಖಿಲ್ ನಾಯಕ್‌ಗೆ ತಲಾ ಐದು ಲಕ್ಷ ರೂ. ನೀಡಿದ್ದರು.

ಸ್ಯಾಟಿಲೈಟ್‌ನಲ್ಲಿ ಮೃತದೇಹ ಸಾಗಾಟ: ಒಪ್ಪಂದದಂತೆ ಕಾರ್ತಿಕ್, ನಿಖಿಲ್ ಹಾಗೂ ಕೇಶವಮೂರ್ತಿ ಜೂ.9ರಂದು ಬೆಳಗಿನ ಜಾವ ಶೆಡ್ ಬಳಿ ತೆರಳಿ ಸ್ಕಾರ್ಪಿಯೋ ವಾಹನದಲ್ಲಿ ರೇಣುಕಾ ಸ್ವಾಮಿ ಮೃತದೇಹ ಹಾಕಿಕೊಂಡಿದ್ದರು. ಚಾಮರಾಜ ಫ್ಲಾಟ್, ಸುಮನಹಳ್ಳಿ ಅರ್ಧ ಪ್ರದೇಶದಲ್ಲಿ ಮೃತದೇಹ ಎಸೆಯುವ ಸಂಚು ಅವರದ್ದಾಗಿತ್ತು. ಆದರೆ, ಮೃತದೇಹ ಸಾಗಾಟ ಮಾಡುವಾಗ ಎಲ್ಲಿಯಾದರೂ ಪೊಲೀಸರಿಗೆ ಸಿಕ್ಕಿಬೀಳುತ್ತೇವೆ ಎಂಬ ಭಯದಲ್ಲಿ ಸುಮನಹಳ್ಳಿ ಬ್ರಿಡ್ಜ್ ಸಮೀಪದ ಕಾಲುವೆಗೆ ಎಸೆದು ಪರಾರಿಯಾಗಿದ್ದರು.

ರಾಘವೇಂದ್ರ ಶರಣಾಗತಿ ಟ್ವಿಸ್ಟ್: ದರ್ಶನ್ ಅಭಿಮಾನಿಗಳ ಸಂಘದ ಚಿತ್ರದುರ್ಗ ಜಿಲ್ಲಾ ಘಟಕದ ಅಧ್ಯಕ್ಷ ರಾಘವೇಂದ್ರ ಶರಣಾಗತಿ ಹಿಂದೆಯೂ ಆರೋಪಿಗಳು ತಂತ್ರ ರೂಪಿಸಿದ್ದರು. ರೇಣುಕಾ ಸ್ವಾಮಿ ಕೊಲೆ ಚಿತ್ರದುರ್ಗದಲ್ಲಿ ಅಥವಾ ಬೇರೆ ಎಲ್ಲೋ ನಡೆದ ಹಾಗಿ ವ್ಯವಹಾರ ಪ್ರಯತ್ನಿಸಿತ್ತು. ಇದೇ ಕಾರಣಕ್ಕೆ ಕೊಲೆ ಮಾಡಲಾಗಿದೆ ಎಂದು ಪೊಲೀಸರಿಗೆ ತಿಳಿಸಬೇಕು. ಹೀಗಾಗಿ, ದರ್ಶನ್, ಪವಿತ್ರಾಗೌಡ ಹೆಸರು ಹೊರಗೆ ಬರದಂತೆ ನೋಡಿಕೊಳ್ಳಬೇಕು ಎಂದು ಲೆಕ್ಕಾಚಾರ ಹಾಕಿದ್ದರು. ಹೀಗಾಗಿಯೇ, ರಾಘವೇಂದ್ರ ಕೂಡ ಶರಣಾಗಿದ್ದ.

ಸ್ಕಾರ್ಪಿಯೋ ನೀಡಿದ್ದು ಸುನಿಲ್...!: ಶೆಡ್ ಆವರಣದ ಆಪ್ತ ಸುಮನಹಳ್ಳಿ ಮೋರಿ ಸಮೀಪ ಸಿಸಿಟಿವಿ ಪರಿಶೀಲಿಸಿದಾಗ ಜೂ.9ರ ಬೆಳಗಿನ ಜಾವ ಸ್ಕಾರ್ಪಿಯೋ ಕಾರು ಓಡಾಡಿರುವುದು ಪತ್ತೆಯಾಗಿತ್ತು. ಈ ಜಾಡು ಬೆನ್ನತ್ತಿದ್ದ ಪೊಲೀಸರು ಎರಡೂ ಕಾರುಗಳ ಸುಳಿವು ಬೇಧಿಸಿದಾಗ ಆದೇ ಕಾರುಗಳು ರಾಜರಾಜೇಶ್ವರಿ ನಗರದ ಪಟ್ಟಣಗೆರೆ ಶೆಡ್‌ಗೆ ಬಂದಿರುವುದು ಗೊತ್ತಾಗಿತ್ತು. ಜತೆಗೆ, ಈ ಕಾರುಗಳಲ್ಲಿಯೇ ಮೃತದೇಹ ಸಾಗಿಸಿರುವುದು ಕಂಡು ಬಂದಿತ್ತು.

ನಾಲ್ವರಿಗೆ ಶೋಧ..!: ಕೃತ್ಯದಲ್ಲಿ ದರ್ಶನ್ ಆಪ್ತವಲಯದಲ್ಲಿದ್ದ ಆನು, ಜಗದೀಶ್ ಅಲಿಯಾಸ್ ಜಗ್ಗು, ರವಿ, ರಾಜು ಕೂಡ ಭಾಗಿಯಾಗಿದ್ದು, ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಪಿಎಂ ರಿಪೋರ್ಟ್ ಹೇಳಿದ್ದೇನು?: ರೇಣುಕಾಸ್ವಾಮಿಗೆ ಮರದ ರೀಪ್ಸ್, ಕೋಲು ಹಾಗೂ ಹಗ್ಗದಿಂದ ನಿರಂತರವಾಗಿ ಹಲ್ಲೆ ನಡೆಸಲಾಗಿದೆ. ಬೆಲ್ಟ್ ಬಳಕೆ ಮಾಡಿರುವ ಶಂಕೆಯಿದೆ. ರೇಣುಕಾಸ್ವಾಮಿ ಮರಣೋತ್ತರ ಪರೀಕ್ಷಾ ವರದಿಯಲ್ಲಿ ಮರ್ಮಾಂಗಕ್ಕೆ ಬಲವಾದ ಪೆಟ್ಟು ಬಿದ್ದಿರುವ ಅಂಶ ಬೆಳಕಿಗೆ ಬಂದಿದೆ. ಮರ್ಮಾಂಗಕ್ಕೆ ಬಲವಾಗಿ ಒದ್ದು, ಕೋಲು ಅಥವಾ ರೀಪ್ಸ್‌ನಿಂದ ಹೊಡೆದಿರುವ ಸಾಧ್ಯತೆ ಎಂದು ವೈದ್ಯರು ತಿಳಿಸಿದ್ದಾರೆ. ಹೊಟ್ಟೆ, ಕೈಕಾಲು, ಎದೆಯ ಭಾಗದಲ್ಲೂ ಬಲವಾದ ಹೊಡೆತ ಬಿದ್ದಿದ್ದು, ರಕ್ತ ಹೆಪ್ಪುಗಟ್ಟಿದೆ.

ಮಹಜರು ಸ್ಥಳದಲ್ಲಿ ಕೈ ಕಟ್ಟಿ ತಲೆಬಗ್ಗಿಸಿದ ದಾಸ

ಬೆಂಗಳೂರು: ಪಟ್ಟಣಗೆರೆಯ ಶೆಡ್‌ನಲ್ಲಿ ಮುಖಭಾವ ಹೊಂದಿದ್ದ ದರ್ಶನ್, ಕೈ ಕಟ್ಟಿ ತಲೆಬಗ್ಗಿಸಿದ್ದರು. ಗೆಳತಿ ಪವಿತ್ರಾ ಗೌಡ ಸೇರಿ ಸಹ ಆರೋಪಿಗಳ ಜತೆ ನಿಂತು ಮಹಜರು ಪ್ರಕ್ರಿಯೆಯಲ್ಲಿ ಭಾಗಿ..! ಪೊಲೀಸರ ಸೂಚನೆ ಮೇರೆಗೆ ಬೆರಳು ಬೆನ್ನು ಹುಕ್ಕಿದ್ದರು...! ಪಟ್ಟಣಗೆರೆ ಶೆಡ್‌ನಲ್ಲಿ ಬುಧವಾರ ಕಂಡು ಬಂದ ಚಿತ್ರಣವಿದು.

ಕೊಲೆಯ ಉರುಳಲ್ಲಿ ಸಿಲುಕಿ ಒದ್ದಾಡುತ್ತಿರುವ ಆರೋಪಿ ದರ್ಶನ್, ಎ1 (ಪ್ರಥಮ) ಪವಿತ್ರಾ ಗೌಡ ಸೇರಿದಂತೆ 13 ಮಂದಿ ಆರೋಪಿಗಳನ್ನು ಇದೇ ಮೊದಲ ಬಾರಿ 'ಸ್ಪಾಟ್' ನಡೆಸಿತು. ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆಗೈದ ಶೆಡ್‌ನಲ್ಲಿ ಆರೋಪಿಗಳನ್ನು ಕರೆದೊಯ್ದು ಮಹಜರು ಪ್ರಕ್ರಿಯೆ ನಡೆಸಿತು. ಆರೋಪಿಗಳನ್ನು ಬಿಗಿಭದ್ರತೆಯಲ್ಲಿ ಕರೆದು ರೇಣುಕಾಸ್ವಾಮಿ ಕೂಡಿ ಹಾಕಿದ್ದ, ಹಲ್ಲೆ ನಡೆಸಿದ್ದ ಸ್ಥಳಗಳ ಕುರಿತ ಹೇಳಿಕೆ ದಾಖಲಿಸಿಕೊಳ್ಳಲಾಯಿತು. ಸುಮಾರು ಮೂರು ಗಂಟೆಗಳಿಗೂ ಹೆಚ್ಚು ಕಾಲ ನಡೆದ ಈ ಪ್ರಕ್ರಿಯೆಯಲ್ಲಿ ದರ್ಶನ್ ಹಾಗೂ ಪವಿತ್ರಾ ಒಟ್ಟಿಗೆ ನಿಂತಿದ್ದರು.

ಪೊಲೀಸ್ ಜೀಪಿನಲ್ಲಿ ಮಹಜರು ಸ್ಥಳಕ್ಕೆ ಬಂದಿದ್ದ ದರ್ಶನ್, ಪವಿತ್ರಾ ಇಬ್ಬರು ಪಶ್ಚಾತ್ತಾಪದ ಭಾವದಲ್ಲಿದ್ದರು. ಪವಿತ್ರಾ ಕಣ್ಣಲ್ಲಿ ನೀರು ಹೊತ್ತ ಭಾವದೊಂದಿಗೆ ದರ್ಶನ್ ಜತೆಗೆ ನಿಂತಿದ್ದರು. ಪವಿತ್ರಾ ಜತೆ ಒಂದೆರಡು ಮಾತಷ್ಟೇ ಆಡಿದ ದರ್ಶನ್, ಮುಖದಲ್ಲಿ ಎಂಬ ಆತಂಕದ ಭಾವದಲ್ಲಿಯೇ ದಿನ ಕಳೆದರು.

ಕಂಬಿ ಹಿಂದೆ ರಾತ್ರಿ: ಆರೋಪಿ ದರ್ಶನ್ ಪೊಲೀಸ್ ಠಾಣೆಯ ಸೆಲ್‌ನಲ್ಲಿ ರಾತ್ರಿ ಕಳೆದಿದ್ದಾರೆ. ಯಾರೊಂದಿಗೂ ಹೆಚ್ಚಾಗಿ ಮಾತನಾಡದ ದರ್ಶನ್ ವಕೀಲರ ಜತೆ ಮಾತ್ರವೇ ಮಾತನಾಡುತ್ತಿದ್ದಾರೆ. ಕೃತ್ಯದ ಕುರಿತು ನನಗೇನೂ ಗೊತ್ತಿಲ್ಲ ಎಂದು ಪುನರುಚ್ಚರಿಸುತ್ತಿದ್ದಾರೆ.

ಹಲ್ಲೆ ಮಾಡಿದ್ದ ದರ್ಶನ್, ಪವಿತ್ರಾ!

ಆರೋಪಿ ರಾಘವೇಂದ್ರ ಚಿತ್ರದುರ್ಗದಿಂದ ರೇಣುಕಾಸ್ವಾಮಿಯನ್ನು ಶೆಡ್‌ಗೆ ಕರೆತರುತ್ತಲೇ ಜೂ.8ರ ಸಾಯಂಕಾಲ ದರ್ಶನ್‌ಗೆ ಕರೆ ಮಾಡಿ ಮಾಹಿತಿ ನೀಡಿದ್ದ. ದರ್ಶನ್ ಹಾಗೂ ಪವಿತ್ರಾ ಇಬ್ಬರೂ ಶೆಡ್‌ಗೆ ತೆರಳಿದ್ದರು. ಅಶ್ಲೀಲ ಸಂದೇಶ ಹಾಗೂ ಫೋಟೊ ಕಳಿಸಿದ್ದಕ್ಕೆ ಸಿಟ್ಟಾಗಿದ್ದ ಇಬ್ಬರೂ ರೇಣುಕಾಸ್ವಾಮಿ ಮೇಲೆ ಹಲ್ಲೆ ನಡೆಸಿದ್ದರು. ಪವಿತ್ರಾ ಚಪ್ಪಲಿಯಲ್ಲಿ ಹೊಡೆದಿದ್ದರು ಎಂಬುದು ಗೊತ್ತಾಗಿದೆ. ರೇಣುಕಾಸ್ವಾಮಿ ಮರ್ಮಾಂಗಕ್ಕೆ ಒದೆಯಲಾಗಿದೆ. ಆದರೆ, ಒದ್ದವರು ಯಾರು ಎಂಬುದು ಸ್ಪಷ್ಟವಾಗಿಲ್ಲ. ಆರೋಪಿಗಳು ಬೀಭತ್ಸ ಹೇಳಿಕೆ ನೀಡುತ್ತಿರುವುದರಿಂದ ಈ ಅಂಶ ಇತ್ಯರ್ಥವಾಗಿಲ್ಲ. ರೇಣುಕಾಸ್ವಾಮಿ ಮೃತನಾಗುವುದಕ್ಕೆ ಮೊದಲೇ ದರ್ಶನ್, ಪವಿತ್ರಾ ಹೊರಟಿದ್ದರೇ ಅಥವಾ ಇಲ್ಲವೇ ಎಂಬುದು ಗೊತ್ತಾಗಬೇಕಿದೆ ಎಂದು ಮೂಲಗಳು ಹೇಳಿವೆ.

ಶವ ನೋಡಿದಾಗ ನನ್ನ ಮಗ ಅಂತಲೇ ಅನ್ನಿಸಲಿಲ್ಲ!

■ ವಿಕ ಸುದ್ದಿಲೋಕ ಚಿತ್ರದುರ್ಗ

"ನಾವು ನೋಡಿದಾಗ ಮೈ ಮೇಲೆ ಬಟ್ಟೆ ಇರಲಿಲ್ಲ. ತಲೆಗೆ, ಮರ್ಮಾಂಗಕ್ಕೆ ಹೊಡೆದ ಗಾಯಗಳಿದ್ದವು. ಎದೆಗೆ ಚುಚ್ಚಿದ್ದರು. ಕಾಲು, ಬೆನ್ನು ಮೂಳೆ ಮುರಿದಿದೆ. ಮುಖ ಗುರುತೇ ಸಿಗದಂತೆ ಮಾಡಿದ್ದಾರೆ. ಅಷ್ಟು ಕ್ರೂರವಾಗಿ ಹಿಂಸಿಸಿದ್ದಾರೆ. ನೋಡಿದರೆ ನನ್ನ ಮಗ ಅಂತ ಅನಿಸಲೇ ಇಲ್ಲ, ಹೆಂಗಿದ್ದವನನ್ನು ಹೇಗೆ ಮಾಡಿದ್ದಲ್ಲ ಅನ್ನೋ ಸಂಕಟ...,"

ದುರ್ಘಟನೆಯ ಎಳೆ ಬಿಚ್ಚಿ ಹೇಳಿದ ರೇಣುಕಾ ಸ್ವಾಮಿ ತಾಯಿ ರತ್ನಪ್ರಭ

ರೇಣುಕಾಸ್ವಾಮಿ ಕುಟುಂಬ

ನಟ ದರ್ಶನ್ ಮತ್ತು ಸಹಚರರಿಂದ ಕೊಲೆಯಾದ ರೇಣುಕಾಸ್ವಾಮಿಯ ಮೃತದೇಹ ನೋಡಿದ ಮೊದಲು ಕಂಡಾಗಿನ ಚಿತ್ರಣವನ್ನು ಹತ್ಯೆ ತಾಯಿ ರತ್ನಪ್ರಭ ಮೇಲಿನಂತೆ ಹೇಳುತ್ತಲೇ ಕಣ್ಣೀರಾದರು.

"ನನ್ನ ಬೇಗ್ಗೆಯೇ ನನಗೆ ಗೊತ್ತಾಗಿದ್ದು. ಪೊಲೀಸರು ಅಪ್ಪರೋ ಫಾರ್ಮಸಿಯವರಿಗೆ, ನಮ್ಮ ಮನೆಯವರಿಗೆ ಫೋನ್ ಮಾಡಿದ್ದಾರೆ. ಬೆಳಗ್ಗೆ ಎಂಟು ಗಂಟೆಯೊಳಗೆ ಬನ್ನಿ ಅಂತ ಹೇಳಿದ್ದರು. ಮಗನನ್ನ ಅಂತಹ ಸ್ಥಿತಿಯ ಶೋಚನೀಯವಾಗಿ ಅಂತ ಅನ್ನಿಸಲಿಲ್ಲ," ಎಂದು ಹೇಳುವಾಗ ಕಣ್ಣಲ್ಲಿ ನೀರು ಹರಿಯುತ್ತಲೇ ಇದ್ದವು.

"ಅವನಿದ್ದರೇ ಹೇಗೆ ನಿಭಾಯಿಸಬೇಕು ಅಂತ ಗೊತ್ತಿಲ್ಲ. ಜನ ಬಳಕೆ ಚೆನ್ನಾಗಿತ್ತು. ಸ್ನೇಹಿತರು ಒಳ್ಳೆಯವರು ಇದ್ದರು. ನಮಗೆ ವಯಸ್ಸಾಗಿದೆ. ನನ್ನ ಸೊಸೆ ಪರಿಸ್ಥಿತಿ (ಗರ್ಭಿಣಿ) ಹೀಗಿದೆ. ಕಾನೂನು ಕೈಗೆ ತೆಗೆದುಕೊಂಡ ದರ್ಶನ್, ಪವಿತ್ರಾ ಗೌಡ ಮತ್ತು ಗ್ಯಾಂಗ್‌ಗೆ ಶಿಕ್ಷೆಯಾಗಬೇಕು. ಅವರೆಲ್ಲರೂ ಹೆಚ್ಚೆಂದರೆ ಹೆಣ್ಣಿಗೆ ಬುದ್ಧಿ ಹೇಳಿ ಎಚ್ಚರಿಕೆ ನೀಡಬಹುದಿತ್ತು. ನಿಜಕ್ಕೂ ಅವರಿಗೆ ಮನುಷ್ಯತ್ವ ಇದ್ದೀತೋ ಇಲ್ಲವೋ? ದರ್ಶನ್ ಮೇಲೆ ನೊಂದಿದ್ದೆ ನಟ, ಒಳಗೆ ವಿಲನ್‌ನ. ನನ್ನ ಮಗನನ್ನು ಹೇಗೆ ಬರ್ಬರವಾಗಿ ಸಾಯಿಸಿದ್ದಾರೋ ಅವರಿಗೂ ಅದೇ ರೀತಿಯ ಶಿಕ್ಷೆಯಾಗಬೇಕು. ಅವರು ಬದುಕಬಾರದು," ಎಂದು ಕಣ್ಣೀರಿಟ್ಟರು.

ತಂದೆ ಕಾಶೀನಾಥ್ ಶಿವನಗೌಡರ ತಮ್ಮ ಸೊಸೆಯ ಭವಿಷ್ಯದ ಬಗ್ಗೆ ಆತಂಕ ವ್ಯಕ್ತಪಡಿಸಿದರು. "ಏನೂ ತೋಚದಂತಾಗಿದೆ. ನಿವೃತ್ತಿಯ ಹರಿದಿರುವ ವರ್ಷ ಆಗಿದೆ. ನನ್ನ ಪಿಂಚಣಿ, ಅವನ ಸಂಬಳದಲ್ಲೇ ಜೀವನ ಮಾಡ್ತಾ ಇದ್ದೆವು. ಸದ್ಯನಂತೆ ಹೆಚ್ಚಾಗಿ ನನ್ನ ಸೊಸೆಯ ಚಿಂತೆ. ಅವಳ ಜೀವನ ಹೇಗೆ ಅಂತ. ಅವಳನ್ನೂ ಸಲ್ಲಬೇಕು. ಅವಳಿಗೆ ಯಾವ ಅನುಕೂಲ ಮಾಡಬೇಕು ಅನ್ನೋ ಚಿಂತೆಯಾಗಿದೆ," ಎಂದು ಹೇಳುತ್ತಲೇ ಗದ್ಗದಿತರಾದರು.

ಪಾಪುವನ್ನು ನೋಡಲೂ ಬಿಡದೆ ಸಾಯಿಸಿಬಿಟ್ರು...,

"ಅವರು (ಪವಿತ್ರಾಗೌಡ) ಮನುಷ್ಯಳಾ? ನನ್ನ ಹೆಂಡ್ತಿ ಗರ್ಭಿಣಿ ಅಂದ್ರು ಬಿಟ್ಟಿಲ್ಲ, ಪಾಪುವನ್ನು ನೋಡಲು ಆಸೆಯಿಂದ ಕಾಯುತ್ತಿದ್ದರು. ಅವರು ಸತ್ತುಹೋದ್ರಲ್ಲ, ಏನೂ ಆಗುತ್ತಿರಲಿಲ್ಲ..." ಎಂದು ರೇಣುಕಾ ಸ್ವಾಮಿ ಪತ್ನಿ ಭಾವೋದ್ವೇಗಕ್ಕೊಳಗಾದರು.

"ನನಗೀಗ ಐದು ತಿಂಗಳು ಆಗಲಿಲ್ಲದೇ ನಾನು ಜೀವನ ಹೇಗೆ ಮಾಡಲಿ. ಆತ್ಮ ಮಾಡಿದಂತೆ ವಯಸ್ಸಾಗಿದೆ. ಒಬ್ಬನೇ ಇದ್ದರೂ ಹತ್ತನ್ನೆರಡು ಜನ ಸೇರಿ ಹೊಡೆದು ಹಿಂಸಿಸಿದ್ದಾರೆ. ಪೊಲೀಸರಿಗೆ ಒಪ್ಪಿಸಿದ್ರೆ ಸಾಕಿತ್ತು. ಕಾನೂನು ಕೈಗೆ ತೆಗೆದುಕೊಳ್ಳಬಾರದಿತ್ತು. ಅವರಿಗೆ ಶಿಕ್ಷೆಯಾಗಲೇಬೇಕು," ಎಂದರು.

ದುರ್ಗದಲ್ಲಿ ಪ್ರತಿಭಟನೆ

ಚಿತ್ರದುರ್ಗ: ರೇಣುಕಾಸ್ವಾಮಿ ಹತ್ಯೆ ಖಂಡಿಸಿ ಚಿತ್ರದುರ್ಗದಲ್ಲಿ ಬುಧವಾರ ನಾನಾ ಸಂಘಟನೆ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ನಗರದ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಿಂದ ಹೊರಟ ಪ್ರತಿಭಟನಾ ಮೆರವಣಿಗೆಯಲ್ಲಿ ಆಗಮಿಸಿದ ಸಾವಿರಾರು ಜನ, ನಟ ದರ್ಶನ್ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಗಾಂಧಿ ವೃತ್ತದಲ್ಲಿ ಕೆಲಕಾಲ ಮಾನವ ಸರಪಳಿ ನಿರ್ಮಿಸಿ, ಮೌನಾಚರಣೆ ಮಾಡಲಾಯಿತು. ಮಹಿಳೆಯರೂ ಮಕ್ಕಳು ನಟ ದರ್ಶನ್ ವಿರುದ್ಧ ನೆರೆದಿದ್ದ ನೂರಾರು ಜನ 'ಕೊಲೆ ಗಡುಕ ದರ್ಶನ್‌ಗೆ ಧಿಕ್ಕಾರ, ಖಳ ನಾಯಕ ದರ್ಶನ್‌ಗೆ ಧಿಕ್ಕಾರ' ಎಂದು ಘೋಷಣೆ ಕೂಗಿದರು. ಜಿಲ್ಲಾಧಿಕಾರಿ ಕಚೇರಿ ವೃತ್ತದಲ್ಲಿ ಕೆಲ ಹೊತ್ತು ಸಮಾವೇಶಗೊಂಡ ಪ್ರತಿಭಟನಾಕಾರರು ನಂತರ ಜಿಲ್ಲಾಧಿಕಾರಿ ಕಚೇರಿಗೆ ಬಂದು ಮನವಿ ಸಲ್ಲಿಸಿದರು. ಈ ವೇಳೆ ಮಾತನಾಡಿದ ಸಂಘಟನೆಗಳ ಮುಖಂಡರು, "ರಾಜ್ಯ ಸರಕಾರ ಆರೋಪಿ ನಟ ದರ್ಶನ್‌ನನ್ನು ರಕ್ಷಿಸುವ ಕೆಲಸ ಮಾಡಬಾರದು. ನಿಷ್ಪಕ್ಷಪಾತ ತನಿಖೆ ನಡೆಸಿ ಕಠಿಣ ಶಿಕ್ಷೆಯಾಗಬೇಕು. ಸೂಕ್ತ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಬೇಕು," ಎಂದು ಆಗ್ರಹಿಸಿದರು.

● ನಟ ದರ್ಶನ್ ಪ್ರಕರಣದಲ್ಲಿ ಯಾವುದೇ ರಾಜಕೀಯ ಒತ್ತಡವಿಲ್ಲ. ಮನೆಯಲ್ಲಿಯೂ ನನಗೆ ಗೊತ್ತಿರುವಂತೆ ಯಾವ ಪ್ರಭಾವಿ ರಾಜಕಾರಣಿಯೂ ದರ್ಶನ್ ಬಚಾವ್ ಮಾಡಲು ಪ್ರಯತ್ನಿಸಿಲ್ಲ, ಮುಕ್ತ ತನಿಖೆ ನಡೆಸಲು ಪೊಲೀಸರಿಗೆ ಸ್ವಾತಂತ್ರ್ಯ ನೀಡಲಾಗಿದೆ.

-ಡಾ.ಜಿ.ಪರಮೇಶ್ವರ್ ಗೃಹ ಸಚಿವ

ಅಶ್ಲೀಲ ಫೋಟೊ ಕಳಿಸಿದ್ದ ರೇಣುಕಾಸ್ವಾಮಿ..!

ಚಿತ್ರದುರ್ಗದ ರೇಣುಕಾಸ್ವಾಮಿ ನಕಲಿ ಇನ್‌ಸ್ಟಾಗ್ರಾಂ ಖಾತೆಗಳಲ್ಲಿ ಸಕ್ರಿಯನಾಗಿದ್ದನು. ಯಾರೊಂದಿಗೂ ಹೆಚ್ಚಾಗಿ ಬೆರೆಯದ ರೇಣುಕಾಸ್ವಾಮಿ, ರೀಲ್ಸ್‌ಗಳಿಗೆ

ಅಸಭ್ಯ ವಿಚಾರಗಳ ಕಮೆಂಟ್ ಮಾಡುತ್ತಿದ್ದ. ಮೆಸೆಂಜರ್‌ನಲ್ಲಿ ಹೆಚ್ಚು ಕಾಲಕಳೆಯುತ್ತಿದ್ದ. ಅತಿ ಕೆಟ್ಟ ಭಾಷೆ ಬಳಸಿ ಕಮೆಂಟ್ ಮಾಡುತ್ತಿದ್ದ ಎಂದು ಮೂಲಗಳು ತಿಳಿಸಿವೆ.

ನಕಲಿ ಖಾತೆ ಮೂಲಕ ರೇಣುಕಾಸ್ವಾಮಿ, ಪವಿತ್ರಾ ಗೌಡ ಅವರಿಗೆ ನಿರಂತರವಾಗಿ ಅಶ್ಲೀಲ ಮೆಸೇಜ್ ಕಳುಹಿಸುತ್ತಿದ್ದ. ಹಲವು ಬಾರಿ ವಾರ್ನಿಂಗ್ ಮಾಡಿದರೂ ಕೇಳಿರಲಿಲ್ಲ. ಅಕೌಂಟ್ ಬ್ಲಾಕ್ ಮಾಡಿದರೂ ಮತ್ತೊಂದು ಅಕೌಂಟ್‌ನಲ್ಲಿ ಮೆಸೇಜ್ ಮಾಡುತ್ತಿದ್ದ.

ಇತ್ತೀಚೆಗೆ ತನ್ನ ಮರ್ಮಾಂಗದ ಫೋಟೊ ಕಳಿಸಿ, ದರ್ಶನ್ ಬದಲಿಗೆ ನನ್ನ ಜತೆ ಬಾ ಎಂದು ಅಸಭ್ಯವಾಗಿ ಸಂದೇಶ ಕಳಿಸಿದ್ದ. ಹೀಗಾಗಿ, ಪವಿತ್ರಾ ಗೌಡ ಪವನ್‌ಗೆ ಈ ವಿಷಯ ತಿಳಿಸಿದ್ದರು. ಪವನ್ ಮೂಲಕ ದರ್ಶನ್‌ಗೂ ಈ ವಿಚಾರ ತಲುಪಿತ್ತು. ಹಾಗಾಗಿ ಹೆಸರನ್ನೇ ರೇಣುಕಾಸ್ವಾಮಿ ಬಳಿಗೆ ಕಳಿಸಿದ ಆರೋಪಿಗಳು ಚಿತ್ರದುರ್ಗದಿಂದ ಕಿಡ್ನಾಪ್ ಮಾಡಿಕೊಂಡು ಶೆಡ್‌ಗೆ ಕರೆತಂದಿದ್ದರು ಎಂದು ಮೂಲಗಳು ಹೇಳಿವೆ.

ಮೂರು ಅಕಾಡೆಮಿಗಳಿಗೆ ಕೈ ಆಪರೇಷನ್

ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷರಾಗಿ ಶುಭಾ ಧನಂಜಯ | ಕೃಪಾ ಫಡ್ಕೆ ನಾಮನಿರ್ದೇಶನ ರದ್ದು

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯ ಸರಕಾರ ನೇಮಿಸಿದ್ದ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಸ್ಥಾನ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯ ಸ್ಥಾನಗಳಿಗೆ ಅಧಿಕಾರ ವಹಿಸಿಕೊಳ್ಳುವ ಮೊದಲೇ ನಾಮನಿರ್ದೇಶನ ರದ್ದುಪಡಿಸಿ, ಹೊಸಬರನ್ನು ನೇಮಕ ಮಾಡಿ ರಾಜ್ಯ ಸರಕಾರ ಆದೇಶಿಸಿದೆ.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ನೂತನ ಅಧ್ಯಕ್ಷರಾಗಿ ಶುಭಾ ಧನಂಜಯ (ಶಿವಮೊಗ್ಗ), ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸದಸ್ಯರಾಗಿ ಬಿ.ಎಲ್.ರಾಜು ಮತ್ತು ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿ ಜಿ.ಪಿ.ರವೀಂದ್ರನಾಥ (ದಲಿತಸಂಘರ್ಷ ಸಮಿತಿ) ಅವರನ್ನು ನಾಮನಿರ್ದೇಶನ ಮಾಡಿ ಆದೇಶ ಹೊರಡಿಸಲಾಗಿದೆ.

ಮಾರ್ಚ್‌ನಲ್ಲಿ ಅಕಾಡೆಮಿ, ಪ್ರಾಧಿಕಾರಗಳಿಗೆ ನೂತನ ಅಧ್ಯಕ್ಷರು, ಸದಸ್ಯರನ್ನು ನಾಮನಿರ್ದೇಶನಗೊಳಿಸಿ ಸರಕಾರ ಆದೇಶಿಸಿತ್ತು. ಆದರೆ, ಅಂದೇ ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಾಗಿದ್ದರಿಂದ ಅಕಾಡೆಮಿಗಳು ಮತ್ತು ಪ್ರಾಧಿಕಾರದ ಅಧಿಕಾರವನ್ನು ಯಾರೂ ವಹಿಸಿಕೊಂಡಿರಲಿಲ್ಲ. ಇದೀಗ ಬಳಿಕ ಜೂ.13ರಂದು ಮಧ್ಯಾಹ್ನ 3.30ಕ್ಕೆ ರವೀಂದ್ರ ಕಲಾಕ್ಷೇತ್ರ ದಲ್ಲಿರುವ ಅಕಾಡೆಮಿ ಕಚೇರಿಯಲ್ಲಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಇದರ ಬೆನ್ನಲ್ಲೇ ಈ ಹಿಂದೆ ನೇಮಕಗೊಂಡಿದ್ದ ಪ್ರತಿ ಮಾದರಿಗಳನ್ನು ಸಂಘ ಪರಿವಾರದ ಹಿನ್ನೆಲೆಯವರು ಎಂಬ ಕಾರಣಕ್ಕಾಗಿ ಸರಕಾರ ಅವರ ನೇಮಕಾತಿ ರದ್ದುಪಡಿಸಿ, ಮೂರು ಹುದ್ದೆಗಳಿಗೆ ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಿದೆ.

● ನಾಮನಿರ್ದೇಶನ ರದ್ದು ಮಾಡಿರುವ ಬಗ್ಗೆ ಯಾರಿಂದ ಅಥವಾ ಯಾವ ಕಾರಣಕ್ಕಾಗಿ ರದ್ದು ಮಾಡಲಾಗಿದೆ ಎಂಬುದು ನನಗೆ ಗೊತ್ತಿಲ್ಲ. ಸರಕಾರದಿಂದ ಈ ಕುರಿತು ಯಾವುದೇ ಆದೇಶವೂ ಬಂದಿಲ್ಲ, ಇದು ಅತ್ಯಂತ ಬೇಸರದ ಸಂಗತಿ. - ಮಾಲೂರು ವಿಜಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ಮೈಸೂರಿನ ಡಾ. ಕೃಪಾ ಫಡ್ಕೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸದಸ್ಯ ಸ್ಥಾನಕ್ಕೆ ವಿಜಯಲಕ್ಷ್ಮಿ ಕೌಟಗಿ ಹಾಗೂ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯ ಸ್ಥಾನಕ್ಕೆ ಮಾಲೂರು ವಿಜಿ ಅವರನ್ನು ಈ ಹಿಂದೆ ನೇಮಿಸಲಾಗಿತ್ತು. ಇವರ ನಾಮನಿರ್ದೇಶನವನ್ನು ಕಕ್ಕಾನಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಸರಕಾರ ಆದೇಶಿಸಿದೆ.

ಕಾರ್ಪೊರೇಷನ್ ಶಾಲೆಗೆ ಚಿಂತನೆ

ಬೆಂಗಳೂರು: ಬಿಬಿಎಂಪಿ ಮಾದರಿಯಲ್ಲಿ ಎಲ್ಲ ಮಹಾನಗರ ಪಾಲಿಕೆಗಳಲ್ಲೂ "ಕಾರ್ಪೊರೇಷನ್ ಶಾಲೆ"ಗಳನ್ನು ತೆರೆಯಲು ಚಿಂತನೆ ನಡೆಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಹೇಳಿದ್ದಾರೆ.

ಬುಧವಾರ ಇಲಾಖಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, "ಸ್ಮಾರ್ಟ್ ಸಿಟಿ ಯೋಜನೆಯಡಿ ಎಲ್ಲಿಲ್ಲಿ ಶಾಲೆಗಳಿವೆ, ತೆರೆಯಲು ಸಾಧ್ಯವಿದೆ ಎಂದು ಪರಿಶೀಲನಾ ವರದಿ ನೀಡಿ," ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

"ಹೆಚ್ಚುವರಿಯಾಗಿ ವರ್ಗ ಇರುವ ಪಾಲಿಕೆಗಳಿಂದ ಸಿಬ್ಬಂದಿ ಕೊರತೆ ಇರುವ ಪಾಲಿಕೆಗಳಿಗೆ ನಿಯೋಜನೆ ಕ್ರಮ ವಹಿಸಬೇಕು. ಜತೆಗೆ ಬಾಕಿ ಉಳಿದಿರುವ ಕಾಮಗಾರಿ ಮತ್ತು ಯೋಜನೆಗಳನ್ನು ಕಾಲಮಿತಿಯಲ್ಲಿ ಮುಗಿಸಲು ಎಂಜಿನಿಯರ್ ಹಾಗೂ ತಾಂತ್ರಿಕ ಸಿಬ್ಬಂದಿಯನ್ನು ಎರವಲು ಸೇವೆ ನೀಡುವ ಮಾಡಿಕೊಳ್ಳಬೇಕು," ಎಂದರು.

ಇಂಟಿಗ್ರೇಟೆಡ್ ಟೌನ್‌ಶಿಪ್: "ತುಮಕೂರಿನ ವಸಂತನರಸಾಪುರ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತೆ ಇಂಟಿಗ್ರೇಟೆಡ್ ಟೌನ್‌ಶಿಪ್ ನಿರ್ಮಾಣಕ್ಕೆ 500 ಎಕರೆ ಗುರುತಿಸಲಾಗಿದ್ದು, ಕೂಡಲೇ ಕ್ರಮ ವಹಿಸಬೇಕು. ಮೈಸೂರು ರಿಂಗ್ ರಸ್ತೆ ನಿರ್ಮಾಣ ಯೋಜನೆಗೆ ಕೆಲ ಆಕ್ಷೇಪಣೆಗಳು ಎದುರಾಗಿದ್ದು, ಮತ್ತೆ ಅಲ್ಪಾವಧಿ ಟೆಂಡರ್ ಕರೆಯಬೇಕು. ಹಾಸನ, ಚಿಕ್ಕಮಗಳೂರು, ಬೆಳಗಾವಿ ಮತ್ತು ಕೋಲಾರ ನಗರ ಪ್ರದೇಶದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಚುರುಕುಗೊಳಿಸಬೇಕು," ಎಂದರು.

ನೌಕರರ ವೇತನ ಪರಿಷ್ಕರಣೆ ನಿರೀಕ್ಷೆ

■ ವಿಕ ಸುದ್ದಿಲೋಕ ಬೆಂಗಳೂರು

7ನೇ ರಾಜ್ಯ ವೇತನ ಆಯೋಗದ ಅಂತಿಮ ವರದಿ ಶಿಫಾರಸು ಆಧರಿಸಿ ವೇತನ ಪರಿಷ್ಕರಣೆ ಬಗ್ಗೆ ಗುರುವಾರ ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆ ತೀರ್ಮಾನ ಕೈಗೊಳ್ಳುವ ನಿರೀಕ್ಷೆಯಿದೆ.

ಇಂದು ಸಚಿವ ಸಂಪುಟ ಸಭೆ

ಚುನಾವಣಾ ನೀತಿ ಸಂಹಿತೆ ಕಾರಣ 3 ತಿಂಗಳ ಬಳಿಕ ಸಚಿವ ಸಂಪುಟ ಸಭೆ ನಡೆಯುತ್ತಿದೆ. ನಿವೃತ್ತ ಮುಖ್ಯ ಕಾರ್ಯದರ್ಶಿ ಸುಧಾಕರ್‌ರಾವ್ ನೇತೃತ್ವದ ವೇತನ ಆಯೋಗವು ಕಳೆದ ಮಾರ್ಚ್ 16 ರಂದು ಸಿಎಂ ಸಿದ್ದರಾಮಯ್ಯ ಅವರಿಗೆ ತನ್ನ ಅಂತಿಮ ವರದಿ ಸಲ್ಲಿಸಿತ್ತು. ಪ್ರಮುಖವಾಗಿ ಶೇ.31ರಷ್ಟು ತುಟ್ಟಿಭತ್ಯೆ ವಿಲೀನಗೊಳಿಸಿ ಶೇ.27.50 ಫಿಟ್‌ಮೆಂಟ್ ನೀಡುವ ಮೂಲಕ ಕನಿಷ್ಠ ಮೂಲ ವೇತನವನ್ನು ಸದ್ಯದ 17,000 ರೂ.ಗಳಿಂದ 27,000 ರೂ.ಗೆ ಏರಿಕೆ ಮಾಡಲು ಆಯೋಗ ಶಿಫಾರಸು ಮಾಡಿತ್ತು. ಆಯೋಗದ ಅಂತಿಮ ವರದಿ ನಿರೀಕ್ಷೆ ಹಿಂದಿನ ಬೊಮ್ಮಾಯಿ ನೇತೃತ್ವದ ಸರಕಾರ ಏಪ್ರಿಲ್‌ನ ಚುನಾವಣೆಗೆ ಮುನ್ನ ಶೇ.17ರಷ್ಟು ಮಧ್ಯಂತರ ವೇತನ ಹೆಚ್ಚಳ ಮಾಡಿತ್ತು. ಅಂತಿಮವಾಗಿ ಎಷ್ಟು ಪ್ರಮಾಣದ ಏರಿಕೆ ಎಂಬುದು ಕುತೂಹಲ ಮೂಡಿಸಿದೆ.

ಚರ್ಚೆ ನಿರೀಕ್ಷೆ: ಸರಕಾರಕ್ಕೆ ಸಲ್ಲಿಕೆಯಾಗಿರುವ ಜಾತಿ ಗಣತಿ ವರದಿ ವಿಚಾರದಲ್ಲಿ ಮುಂದಿನ ಹೆಜ್ಜೆ, ಸ್ಥಳೀಯ ಸಂಸ್ಥೆಗಳ ಚುನಾವಣೆ ಸಿದ್ಧತೆ ಹಾಗೂ ಲೋಕಸಭೆ ಚುನಾವಣೆ ಫಲಿತಾಂಶ ಕುರಿತಂತೆ ಸಂಪುಟದಲ್ಲಿ ಚರ್ಚೆ ನಡೆಯುವ ನಿರೀಕ್ಷೆ ಇದೆ.

8.21 ಕೋಟಿ ರೂ. ನಗದು ಜಪ್ತಿ

ಬೆಂಗಳೂರು: ವಾಲ್ಮೀಕಿ ನಿಗಮದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಂಗಳವಾರ ಬಂಧಿಸಿದ್ದ ಇಬ್ಬರು ಆರೋಪಿಗಳಿಂದ 8.21 ಕೋಟಿ ರೂ. ಜಪ್ತಿ ಮಾಡಲಾಗಿದೆ.

ವಾಲ್ಮೀಕಿ ನಿಗಮದ ಹಗರಣ

ಪ್ರಕರಣದಲ್ಲಿ ಸತ್ಯನಾರಾಯಣ ವರ್ಮಾ ಮತ್ತು ಆತನ ಸಹಚರ ಚಂದ್ರಮೋಹನ್‌ನನ್ನು ಹೈದರಾಬಾದ್‌ನ ಹೆಬ್ಬಾಳದಲ್ಲಿ ಬಂಧಿಸಲಾಗಿದೆ. ಚಂದ್ರಮೋಹನ್, ಹಣದ ವರ್ಗಾವಣೆಗೆ ವರ್ಮಾ ಜೊತೆ ಕೈಜೋಡಿಸಿದ್ದ. ಇಬ್ಬರೂ ನಕಲಿ ಬ್ಯಾಂಕ್ ಖಾತೆಗಳನ್ನು ಸೃಷ್ಟಿಸಿ ಹಂತ-ಹಂತವಾಗಿ ಹಣ ವರ್ಗಾವಣೆ ಮಾಡಿಕೊಂಡಿದ್ದರು. ಬಳಿಕ ವರ್ಮಾ ಹಣ ಡ್ರಾ ಮಾಡಿಕೊಂಡು ತನ್ನ ಬಳಿ ಇಟ್ಟುಕೊಂಡಿದ್ದ. ಈ ಬಗ್ಗೆ ಕೋರ್ಟ್‌ಗೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಆರು ದಿನಗಳ ಕಾಲ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಮತ್ತೊಬ್ಬ ಸಹಚರನನ್ನು ಅಧಿಕೃತವಾಗಿ ಬಂಧಿಸಿ, ಬೆಂಗಳೂರಿನ ಕರೆತರಲು ಕ್ರಿಡಿ. ಹೈದರಾಬಾದ್‌ನ ಫಸ್ಟ್ ಫೈನಾನ್ಸ್ ಸೊಸೈಟಿಯಲ್ಲಿದ್ದ 45 ಕೋಟಿ ರೂ.ಗಳನ್ನು ಜೂ.6ರಂದು ಜಪ್ತಿ ಮಾಡಿದ್ದರು. ಬಂಧಿತ ಸತ್ಯನಾರಾಯಣ್ ಇಟಕಾರಿ, ಫಸ್ಟ್ ಫೈನಾನ್ಸ್ ಸೊಸೈಟಿಯ ಅಧ್ಯಕ್ಷನಾಗಿದ್ದ. ಇದೇ ಬ್ಯಾಂಕ್‌ನ 18 ನಕಲಿ ಖಾತೆಗಳಿಗೆ ವಾಲ್ಮೀಕಿ ನಿಗಮದ ಖಾತೆಯಿಂದ ಅಕ್ರಮವಾಗಿ 94.73 ಕೋಟಿ ರೂ. ವರ್ಗಾವಣೆಯಾಗಿತ್ತು.

'ನಿಯಮದ ಚೌಕಟ್ಟಿನಲ್ಲೇ ವರ್ಗಾವಣೆ'

ಬೆಂಗಳೂರು: "ಪೊಲೀಸರ ಅಂತರ ಜಿಲ್ಲಾ ವರ್ಗಾವಣೆ ವೇಳೆ ನಿಯಮಗಳನ್ನು ಮೀರಿ ವರ್ಗಾವಣೆ ಮಾಡಲು ಸಾಧ್ಯವಿಲ್ಲ," ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, "ಪೊಲೀಸ್‌ನಲ್ಲಿ ಅರ್ಜಿ ಸಲ್ಲಿಕೆಗೆ ನಿಬ್ಬಂಧ್ಯ ತೊಂದರೆ ಆದ ಬಗ್ಗೆ ದೂರು ಬಂದಿದೆ. ಇದನ್ನು ಸರಿಪಡಿಸಲಾಗುವುದು," ಎಂದರು.

"ಪೊಲೀಸ್ ಅಧಿಕಾರಿಗಳ ವರ್ಗಾವಣೆಗೆ ಒಂದು ವರ್ಷದ ನಿಯಮವಿದೆ. ಈ ಕಾನೂನು ಬದಲಿಸಿ ವರ್ಗಾವಣೆ ಒಂದು ಸ್ಥಳದಲ್ಲಿ ಕನಿಷ್ಠ ಕೆಲಸ ಮಾಡಿರಬೇಕು ಎಂಬ ನಿಯಮವನ್ನು ಕಡ್ಡಾಯ ಮಾಡಲಾಗಿದೆ," ಎಂದು ತಿಳಿಸಿದರು.

"ನಿಯಮದ ಚೌಕಟ್ಟಿನಲ್ಲಿಯೇ ನಡೆಯಬೇಕು ಎಂಬುದು ಇದೆ. ವರ್ಗಾವಣೆಗೆ ಸಂಬಂಧಿಸಿದಂತೆ ಕೆಲವು ನಿಯಮಗಳನ್ನು ಮಾಡಲಾಗಿದ್ದು, ಅದರಂತೆ ನಡೆಯಬೇಕಿದೆ," ಎಂದರು.

ಪ್ರಜ್ವಲ್ ಕೇಸ್: ಸ್ವತಂತ್ರ ತನಿಖೆ ಬೇಕಿಲ್ಲ

ಬೆಂಗಳೂರು: ಪ್ರಜ್ವಲ್ ರೇವಣ್ಣ ಲೈಂಗಿಕ ಹಗರಣ ಪ್ರಕರಣದ ಹಿಂದಿಯೇ ಸ್ವತಂತ್ರ ತನಿಖಾ ಸಂಸ್ಥೆಗೆ ವಹಿಸಲು ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಹೈಕೋರ್ಟ್ ಬುಧವಾರ ಇತ್ಯರ್ಥಪಡಿಸಿದೆ.

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಉಪಾಧ್ಯಕ್ಷ ಎಸ್.ಎಚ್.ಲಿಂಗೇಗೌಡ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಅರ್ಜಿದಾರರ ಪರ ವಾದಿಸಿದ ವಕೀಲ ಜಿ. ಎಲ್.ಮೋಹನ್, "ಎಸ್‌ಐಟಿ ಸಮರ್ಪಕವಾಗಿ ತನಿಖೆ ನಡೆಸುತ್ತಿಲ್ಲ," ಎಂದರು. ವಾದ ಆಲಿಸಿದ ಪೀಠ, "ಸರಕಾರ ಎಸ್‌ಐಟಿ ರಚಿಸಿ ತನಿಖೆ ನಡೆಸುತ್ತಿದೆ. ನಿಮ್ಮ ಆಸಮಾಧಾನ ಏನೇ ಇದ್ದರೂ ಆ ಬಗ್ಗೆ ಎಸ್‌ಐಟಿ ಗಮನಕ್ಕೆ ತಂದು ಪರಿಹರಿಸಿಕೊಳ್ಳಿ," ಎಂದು ಸೂಚಿಸಿತು.

ಸ್ಥಳೀಯ ಸಂಸ್ಥೆ ಚುನಾವಣೆ ತಾಲೀಮಿಗೆ ಇಳಿದ ಕಾಂಗ್ರೆಸ್

■ ವಿಕ ಸುದ್ದಿಲೋಕ ಬೆಂಗಳೂರು

ಬಿಬಿಎಂಪಿ, ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆ ಹಾಗೂ ವಿಧಾನಸಭೆ ಉಪಚುನಾವಣೆಗಳಿಗೆ ತಯಾರಿಗಾಗಿ ಕಾಂಗ್ರೆಸ್‌ನಲ್ಲಿ ಗುರುವಾರದಿಂದ ಸರಣಿ ಸಭೆಗಳು ಆರಂಭವಾಗಲಿವೆ.

ಲೋಕಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆ ಪರಾಮರ್ಶೆ ಜತೆಗೆ, ಸೋಲುಗಳಲ್ಲಿ ಬರಲಿರುವ ಚುನಾವಣೆಗಳಿಗೆ ಸಿದ್ಧತೆಗಾಗಿ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ 3 ದಿನಗಳ ಕಾಲ ಸರಣಿ ಸಭೆ ನಡೆಸಲಿದ್ದಾರೆ.

ಬಿಜೆಪಿ-ಜೆಡಿಎಸ್ ಮೈತ್ರಿ ಪ್ರಬಲ ವಾಗಿದ್ದು, ಲೋಕಸಭೆ ಚುನಾವಣೆಯಲ್ಲಿ ಮತ ಕ್ರೋಡೀಕರಣಕ್ಕೆ ಕಾರಣವಾಯಿತು. ಈ ಮೈತ್ರಿ ಮುಂದಿನ ದಿನಗಳಲ್ಲಿ ಕಾಂಗ್ರೆಸ್‌ಗೆ ಪ್ರಬಲ ಪ್ರತಿಸ್ಪರ್ಧಿಯ ವಾತಾವರಣ ಸೃಷ್ಟಿಯಾಗಿದೆ ಎಂಬ ಅಭಿಪ್ರಾಯದ ಬೆನ್ನಲ್ಲೇ, ಸ್ಥಳೀಯ ಸಂಸ್ಥೆಗಳಿಗೂ ನಡೆಸಲಿರುವ ಸಿದ್ಧತೆಯ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಅನಿವಾರ್ಯತೆ ಎದುರಾಗಿದೆ. ಎಲ್ಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಸಭೆ ನಡೆಯಲಿದ್ದು, ಬಳಿಕ ಪಕ್ಷದ ಹಿರಿಯ ನಾಯಕರ ಸಭೆಯನ್ನು ನಡೆಸಲಿರುವ ಪಕ್ಷದ ಕಾರ್ಯ ತಂತ್ರದಲ್ಲಿ ಬದಲಾವಣೆ ಕುರಿತು ಪಕ್ಷದ ಪದಾಧಿಕಾರಿ ಕ್ರಿಯಾಯೋಜನೆ ರೂಪಿಸಲಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಹುಮ್ಮಸ್ಸಿನಿಂದ ಪಾಲ್ಗೊಂಡಿದ್ದ 88 ಮಂದಿ ಜತೆಗೂ ಸಭೆ ನಡೆಸಿ ಸೋಲಿನ ಕಾರಣಕ್ಕೆ ನಿರ್ದಿಷ್ಟವಾಗಿ ಚರ್ಚಿಸಿ ಮುಂದಿನ ಪಕ್ಷ ಸಂಘಟನೆ ಕುರಿತು ಕ್ರಮ ಕೈಗೊಳ್ಳಲಾಗುತ್ತದೆ.

ಕ್ರಾಸಿಂಗ್‌ಗೆ ಅನುಮತಿ ಇಲ್ಲ

ಬೆಂಗಳೂರು: "ಕಡಲ ತೀರಗಳಲ್ಲಿ ಕ್ರಾಸಿಂಗ್‌ಗೆ ಅನುಮತಿ ನೀಡುವ ಚಿಂತನೆ ಇಲ್ಲ," ಎಂದು ಸಚಿವ ಎಚ್.ಕೆ. ಪಾಟೀಲ್ ಹೇಳಿದರು. "ಕರಾವಳಿಯಲ್ಲಿ ದೇವಾಲಯಗಳು, ಪ್ರವಾಸಿ ತಾಣಗಳಿವೆ. ಸುಮಾರು 320 ಕಿ.ಮೀ. ಉದ್ದದ ಕಡಲ ತೀರದಲ್ಲಿ ಅಂದಾಜು 40 ಸ್ಥಳಗಳನ್ನು ಗುರುತಿಸಿ ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುವುದು," ಎಂದರು.

ಆಸ್ಪತ್ರೆಯಲ್ಲಿದ್ದರೂ ಗಾಯಾಳು ಭೇಟಿಗೆ ಮನುಷ್ಯತ್ವ ತೋರದ ಸಚಿವ, ಸ್ಪೀಕರ್ | ಬೋಳಿಯಾರಿಗೆ ಭೇಟಿ ನೀಡಿದ ಆರ್.ಅಶೋಕ್

ಸರಕಾರದ ವಿರುದ್ಧ ಹೋರಾಟ: ಚರ್ಚೆಗೆ 13ರಂದು ಸಭೆ

■ ವಿಕ ಸುದ್ದಿಲೋಕ ಮಂಗಳೂರು

"ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಬಿಜೆಪಿ ಕಾರ್ಯಕರ್ತರನ್ನು ಗುರಿಯಾಗಿಸಿ ದೌರ್ಜನ್ಯ ಮಾಡುತ್ತಿದ್ದು, ಇದರ ವಿರುದ್ಧ ಹೋರಾಟ ನಡೆಸಲು ಜೂ. 13ರಂದು ಬೆಂಗಳೂರಿನಲ್ಲಿ ಸಭೆ ನಡೆಸಲಾಗುವುದು," ಎಂದು ವಿಪಕ್ಷ ನಾಯಕ ಆರ್. ಅಶೋಕ್ ಹೇಳಿದರು.

"ಮೋದಿ ಮೂರನೇ ಬಾರಿ ಅಧಿಕಾರ ಸ್ವೀಕರಿಸಿದ ಸಂಭ್ರಮಾಚರಣೆಯಲ್ಲಿದ್ದ ಬಿಜೆಪಿ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲಾಗಿದೆ. 'ಭಾರತ್ ಮಾತಾ ಕೀ ಜೈ' ಘೋಷಣೆ ಕೂಗಿದ್ದಾರೆ, ಇದೇ ಕಾರಣಕ್ಕೆ ಹಲ್ಲೆ ಮಾಡಿದ್ದು ನಿಂದನೆ. ಹಲ್ಲೆಕೋರರು 'ಪಾಕಿಸ್ತಾನ್ ಜಿಂದಾಬಾದ್' ಕೂಗಿದ್ದಾರೆ," ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು. "ಬೋಳಿಯಾರ್ ಘಟನೆಯನ್ನು ಹಿಂದೆಯೇ ಬಿಟ್ಟು ಬಿಡುವುದಿಲ್ಲ. ಅದು ಸ್ಪೀಕರ್ ಅವರ ಕ್ಷೇತ್ರ. ವಿಧಾನಸಭೆ ಒಳಗೆ ಸ್ಪೀಕರ್ ಎದುರೇ ಪ್ರತಿಭಟನೆ ಮಾಡುತ್ತೇವೆ. ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆಗೆ ಸ್ಪೀಕರ್ ಮತ್ತು ಆರೋಗ್ಯ ಸಚಿವರು ಬೇರೆಯವರಿಗೆ ಭೇಟಿಗೆ ಬಂದಿದ್ದರೂ, ಸೌಜನ್ಯಕ್ಕಾದರೂ ಗಾಯಾಳುಗಳನ್ನು ನೋಡಿ ಸಾಂತ್ವನ ಹೇಳುವ ಮನುಷ್ಯತ್ವ ತೋರಿಲ್ಲ," ಎಂದು ಟೀಕಿಸಿದರು.

"ಹಲ್ಲೆ ನಡೆದ ಮರುದಿನ ಗಾಯಾಳುಗಳ ಸಹಿತ ಐದು ಮಂದಿ ಬಿಜೆಪಿ ಕಾರ್ಯಕರ್ತರ ಮೇಲೆ ಕೇಸ್ ದಾಖಲಿಸಿದ್ದು, ಇದು ಹಲ್ಲೆಕೇಸ್ ಕ್ರಿಟಾಗಳಿಸಲು ಕಾಂಗ್ರೆಸ್ ಮಾಡಿರುವ ಷಡ್ಯಂತ್ರ. ಇಲ್ಲಿಯ ನಾಲ್ಕು ಮಂದಿ ಶಾಸಕರ ಮೇಲೂ ಕೇಸ್ ದಾಖಲಿಸಲಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ," ಎಂದು ಆರೋಪಿಸಿದರು.

ಮೈತ್ರಿ ಮುಂದುವರಿಕೆ: "ರಾಜ್ಯದಲ್ಲಿ 136 ಮಂದಿ ಕಾಂಗ್ರೆಸ್ ಶಾಸಕರಿದ್ದರೂ 9 ಸ್ಥಾನ ಗೆದ್ದಿದ್ದಾರೆ. ಉಚಿತ ಗ್ಯಾರಂಟಿಗಳು ಲಾಭ ತರದಿದ್ದರೂ ಕೊಟ್ಟಿಲ್ಲ. ಜನ ಕಾಂಗ್ರೆಸ್‌ಗೆ ಪಾಠ ಕಲಿಸಿದ್ದಾರೆ. ಈ ಮೈತ್ರಿ ಮುಂದಿನ ದಿನಗಳಲ್ಲಿ ಜೆಡಿಎಸ್, ಹಿಂದುಳಿದ ಚುನಾವಣೆಗಳಲ್ಲಿಯೂ ಮುಂದುವರಿಯಲಿದೆ," ಎಂದು ಅಶೋಕ್ ಹೇಳಿದರು.

ಮತ್ತೆ 7 ಬಂಧನ

ಕೊಕ್ಕೊಟ್ಟು (ದ.ಕ.): ಪ್ರಧಾನಿ ನರೇಂದ್ರ ಮೋದಿ ಪದಗ್ರಹಣ ಕಾರ್ಯಕ್ರಮದ ವಿಜಯೋತ್ಸವ ಬಳಿಕ ರಾತ್ರಿ ಬೋಳಿಯಾರಿನಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿ ಮತ್ತೆ ಏಳು ಮಂದಿಯನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ. ತಾಜುದ್ದೀನ್ ಯಾನೆ ಸಾದಿಕ್, ಸರ್ಫಾನ್, ಮುಬಾರಕ್, ಆಶ್ರಫ್, ತೌಫಿಕ್, ಇಮ್ರಾನ್, ಶೌಕತ್ ಅಲಿ ಶರೀಫ್ ಬಂಧಿತರು. ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಈವರೆಗೂ ಒಟ್ಟು ಮಂದಿಯನ್ನು ಬಂಧಿಸಲಾಗಿದೆ.

ರಾಜ್ಯ ಬಿಜೆಪಿಗೆ ಸಂಘಟನಾತ್ಮಕ ಸರ್ಜರಿ

■ ವಿಕ ಸುದ್ದಿಲೋಕ ಬೆಂಗಳೂರು

ಲೋಕಸಭೆ ಚುನಾವಣೆಯಲ್ಲಿ ನಿರೀಕ್ಷಿತ ಫಲಿತಾಂಶ ಸಿಗದ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿಗೆ ಸರ್ಜರಿಯಾಗುವುದು ಖಚಿತವಾಗಿದೆ. ಪಕ್ಷಕ್ಕೆ ಹೊಸ ರಾಜ್ಯಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಬಳಿಕ ಸಂಘಟನಾತ್ಮಕ ಬದಲಾವಣೆ ನಿರೀಕ್ಷಿಸಲಾಗಿದೆ.

ಬಿಜೆಪಿ-ಜೆಡಿಎಸ್ ಸೇರಿ ರಾಜ್ಯದಲ್ಲಿ 19 ಸ್ಥಾನ ಗೆದ್ದಿವೆ. ಇದರಲ್ಲಿ ಬಿಜೆಪಿಯ ಗಳಿಕೆ 17 ಸೀಟು. ರಾಜ್ಯದಲ್ಲಿ ಪ್ರಬಲ ಕಾಂಗ್ರೆಸ್ ಸರಕಾರ ಇರುವುದರಿಂದ ಮಿತ್ರಪಕ್ಷಗಳು ಇಷ್ಟು ಸ್ಥಾನ ಗೆದ್ದಿರುವುದು ಸಾಧನೆಯೇ ಆಗಿದ್ದರೂ, ಬಿಜೆಪಿ ಗೆಲ್ಲಬಹುದಾಗಿದ್ದ 3-4 ಸ್ಥಾನಗಳನ್ನು ಆಂತರಿಕ ಕಲಹದಿಂದ ಕಳೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿ ಹೈಕಮಾಂಡ್ ಪ್ರಕ್ರಿಯೆ ಆರಂಭಿಸಲು ಚಿಂತನೆ ನಡೆಸಿದೆ.

4 ಕ್ಷೇತ್ರ ಅಂತಃ ಕಲಹದಿಂದ ಸೋಲು, ಹೈಕಮಾಂಡ್‌ಗೆ ಆಂತರಿಕ ವರದಿ

ಹೈಕಮಾಂಡ್ ಬಳಿ ವರದಿ: ಇದನ್ನು ಸಮರ್ಥನೆ ಮಾಡಲು ಪ್ರಯತ್ನಿಸಿದರೂ ಕೆಲವು ಮಿತ್ರರಿಂದ ಕೇಳಿ ಬಂದ ಚಾಮರಾಜನಗರ, ದಾವಣಗೆರೆ, ಚಿಕ್ಕೋಡಿ, ಕೊಪ್ಪಳ, ಕಲಬುರಗಿ, ಬೀದರ್ ಕ್ಷೇತ್ರಗಳಲ್ಲಿ ಬಿಜೆಪಿ ಯಶಸ್ಸು ಗಳಿಸಬಹುದಿತ್ತು. ಆದರೆ, ಚಾಮರಾಜನಗರ, ದಾವಣಗೆರೆ, ಚಿಕ್ಕೋಡಿ, ಕೊಪ್ಪಳ, ಬೀದರ್‌ನಲ್ಲಿ ಒಳಗಿನ ಮಿತಿಮೀರಿತು. ಕಲುಬುರಗಿಯಲ್ಲಿ ಕೊನೆಯ ಹಂತದಲ್ಲಿ ಪ್ರಯತ್ನ ಸಾಕಾಗಲಿಲ್ಲ. ಈ ಬಗ್ಗೆ ವರದಿ ಹೈಕಮಾಂಡ್ ಕೈಸೇರಿದೆ.

ನಿರೀಕ್ಷಿತ ಬದಲಾವಣೆಗಳು: ಪಕ್ಷದ ರಾಷ್ಟ್ರಾಧ್ಯಕ್ಷರ ಆಯ್ಕೆ ನಡೆಯುತ್ತಿದ್ದು, ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಹೊಸಬರ ನೇಮಕ ಮಾಡಲಾಗುತ್ತದೆ. ಹಾಲಿ ಇದ್ದವರನ್ನು ಈ ಜವಾಬ್ದಾರಿಯಿಂದ ಬೇರೆ ಹೊಣೆ ನೀಡಲಾಗುತ್ತದೆ. ಈ ಜಾಗಕ್ಕೆ ದಕ್ಷ ಮತ್ತು ಪಕ್ಷದ ಹಿನ್ನೆಲೆ ಕಾರ್ಯಕರ್ತರನ್ನು ತರುವ ನಿರೀಕ್ಷೆಯಿದೆ. ರಾಜ್ಯದಲ್ಲೂ ಸಂಘಟನಾತ್ಮಕ ಬದಲಾವಣೆಯಾಗಲಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರನ್ನು ಉಳಿಸಿ ಉಳಿದ ಪ್ರಮುಖ ಹುದ್ದೆಗಳ ಬದಲಾವಣೆಗೆ ಹೈಕಮಾಂಡ್ ಕ್ರಮ ಕೈಗೊಳ್ಳಬಹುದು. ರಾಜ್ಯ ಉಸ್ತುವಾರಿ ಹೊಣೆಯಲ್ಲಿರುವ ಅರುಣ್ ಸಿಂಗ್ ಇದ್ದರೂ ವಿಧಾನಸಭೆ ಚುನಾವಣೆ ಬಳಿಕ ಅವರ ಬಗ್ಗೆ ಅಸಮಾಧಾನ ಕೇಳಿ ಬಂದಿದೆ. ಈ ಬಗ್ಗೆ ಕೋರ್ ಕಮಿಟಿ ಕೂಡ ಪುನರ್‌ರಚನೆಯಾಗಲಿದ್ದು, ಹೊಸಬರಿಗೆ ಅವಕಾಶ ಶಿಸ್ತುಪಾಲನೆ ಮತ್ತು ಚರ್ಚೆಗೆ ಕಾರಣವಾಗಲಿದೆ.

Published for the Proprietors, Metropolitan Media Company Limited, by R. J. Prakashan at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011 (Ph: 080-40877666) and printed by him at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011 (Ph: 080-40877666). Editor: Sudarshan Channangihalli - responsible for selection of news under PRB Act. © All Rights Reserved. Reproduction in whole or in part without written permission is prohibited.
RNI No. 71653/99
Vol. 25 Issue No. 159


KP
GROUP
Quality Since 1965
KAMLA PASAND
SILVER COATED ELAICHI
KAMLA PASAND
Anokha Swad
KP
GROUP
SILVER COATED ELAICHI
Anokha Swad
THIS CONTAINS SODIUM SACCHARIN (INS 954) or Sucralose (INS 955) and Neotame(INS 961)
NOT RECOMMENDED FOR CHILDREN, NO SUGAR ADDED IN THE PRODUCT.
CONTAINS ARTIFICIAL SWEETENER AND FOR CALORIE CONSCIOUS.
Watch at: f YouTube

ಸಚಿವ ಹರ್ದೀಪ್ ಸಿಂಗ್‌ಪುರಿ ಬೆಂಬಲ | ಹಣಕಾಸು ಮೂಲಕ್ಕೆ ಧಕ್ಕೆ ಎಂದು ರಾಜ್ಯಗಳ ವಿರೋಧ

ಜಿಎಸ್ಟಿ ವ್ಯಾಪ್ತಿಗೆ ಪೆಟ್ರೋಲ್, ಡೀಸೆಲ್?

ಹೊಸದಿಲ್ಲಿ: ಪೆಟ್ರೋಲ್, ಡೀಸೆಲ್ ಮತ್ತು ನೈಸರ್ಗಿಕ ಅನಿಲಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಲು ಪ್ರಯತ್ನಿಸುವುದಾಗಿ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ.

ಎರಡನೇ ಬಾರಿಗೆ ಪೆಟ್ರೋಲಿಯಂ ಖಾತೆ ಹೊಣೆ ವಹಿಸಿಕೊಂಡ ನಂತರ ಮಾಧ್ಯಮಗಳ ಜತೆ ಮಾತನಾಡಿದ ಅವರು, ''ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ತೆಕ್ಕೆಗೆ ತರಬೇಕಾದರೆ ರಾಜ್ಯಗಳ ಒಪ್ಪಿಗೆ ಅಗತ್ಯ. ಇದನ್ನು ದೊರಕಿಸಿಕೊಳ್ಳಲಾಗುವುದು,'' ಎಂದರು.

''2020ರಲ್ಲೇ ಈ ಕುರಿತು ಪ್ರಸ್ತಾವನೆ ಸಲ್ಲಿಕೆಯಾಗಿದೆ. ಒಂದು ವೇಳೆ ಇದು ಸಾಧ್ಯವಾದರೆ ಪೆಟ್ರೋಲ್, ಡೀಸೆಲ್ ಬೆಲೆ ಗಣನೀಯವಾಗಿ ಇಳಿಕೆಯಾಗುತ್ತದೆ. ಜಾಗತಿಕವಾಗಿ ಕಚ್ಚಾ ತೈಲದ ಬೆಲೆಗಳು ಇಳಿಕೆಯಾದರೆ ಮಾತ್ರ ನಾವು ಪೆಟ್ರೋಲ್, ಡೀಸೆಲ್ ಬೆಲೆ ಇಳಿಕೆಗೆ ಕ್ರಮ ತೆಗೆದುಕೊಳ್ಳಬಹುದು,'' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಈ ಹಿಂದೆ ಇದೇ ಖಾತೆಯನ್ನು ಹರ್ದೀಪ್ ಸಿಂಗ್ ಪುರಿ ನಿರ್ವಹಿಸುತ್ತಿದ್ದು ಆಗಲೂ ಇದೇ ಮಾತನ್ನು ಹೇಳಿದ್ದರು. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಇದಕ್ಕೆ ಸಹಮತ ವ್ಯಕ್ತಪಡಿಸಿರಲಿಲ್ಲ. ಇದು ಕೇಂದ್ರ ಮತ್ತು ರಾಜ್ಯಗಳ ಪಾಲಿಗೆ ಆದಾಯದ ವರದಾನವಾಗಿರುವುದರಿಂದ ಇದನ್ನು ಬಿಟ್ಟುಕೊಡುವುದಕ್ಕೆ ಯಾರಿಗೂ ಇಷ್ಟವಿಲ್ಲ.

ಜಿಎಸ್‌ಟಿ ವ್ಯಾಪ್ತಿಗೆ ಪೆಟ್ರೋಲ್, ಡೀಸೆಲ್ ಸೇರಿಸಲು ಸಾಧ್ಯವೇ?

- ''ನಾವು ಸಿದ್ಧ ಆದರೆ ರಾಜ್ಯಗಳು ಸಿದ್ಧವಿಲ್ಲ'' ಎಂಬುದು ಕೇಂದ್ರದ ಹಳೆಯ ವಾದ. ಇದು ವಾಸ್ತವ. ಏಕೆಂದರೆ ರಾಜ್ಯಗಳ ಆದಾಯದ ಮೂಲ ಇರುವುದು ತೈಲ, ಮದ್ಯ ಹಾಗೂ ವಿದ್ಯುತ್‌ನಲ್ಲಿ ಮಾತ್ರ ಎಂಬುದನ್ನು ಮರೆಯುವಂತಿಲ್ಲ.

- ಪೆಟ್ರೋಲ್ ಮತ್ತು ಡೀಸೆಲ್‌ನಿಂದ ಕೇಂದ್ರ ಮತ್ತು ರಾಜ್ಯಗಳಿಗೆ ತೆರಿಗೆ ಮೂಲಕ 6 ಲಕ್ಷ ಕೋಟಿ ರೂ. ಸಂದಾಯವಾಗುತ್ತದೆ.
- ಇದನ್ನು ಜಿಎಸ್‌ಟಿ ಸ್ಲ್ಯಾಬ್‌ನ ಗರಿಷ್ಠ ಮಟ್ಟವಾದ ಶೇ.28ರ ವ್ಯಾಪ್ತಿಗೆ ತಂದರೂ ಇಷ್ಟು ಆದಾಯ ಕ್ರೋಡೀಕರಣವಾಗುವುದಿಲ್ಲ.
- ಇದಕ್ಕೆ ಜಿಎಸ್‌ಟಿ ಅನ್ವಯಿಸಿದರೆ ರಾಜ್ಯಗಳು ಹಣಕಾಸು ವಿಷಯದಲ್ಲಿ ಈಗಿರುವ ಸೀಮಿತ ಸ್ವಾತಂತ್ರ್ಯವನ್ನೂ ಕಳೆದುಕೊಳ್ಳುತ್ತವೆ.
- ದಿಲ್ಲಿಯಲ್ಲಿ ಪೆಟ್ರೋಲ್ ಬೆಲೆಯ ಸುಮಾರು ಶೇ.55.5 ಮತ್ತು ಡೀಸೆಲ್ ಮೇಲೆ ಸುಮಾರು ಶೇ.46 ತೆರಿಗೆ ವಿಧಿಸಲಾಗಿದೆ. ಉಳಿದ ರಾಜ್ಯಗಳಲ್ಲಿ ಇದರ ವ್ಯಾಪ್ತಿ ಶೇ.20ರಿಂದ 35ರ ತನಕ ಇದೆ.
- ಜಿಎಸ್‌ಟಿ ವ್ಯಾಪ್ತಿಗೆ ತೈಲವನ್ನು ಸೇರಿಸಿದರೆ ನಮಗೆ ವಾರ್ಷಿಕವಾಗಿ 8 ಸಾವಿರ ಕೋಟಿ ರೂ. ನಷ್ಟ ಎಂದು ಕೇರಳ ಹೇಳಿದೆ.
- ತೈಲ ಬೆಲೆಗೆ ಇದನ್ನು ಅನ್ವಯಿಸಿದರೆ ಲಾಭವಾಗುವುದು ಗ್ರಾಹಕರಿಗೆ ಮಾತ್ರ. ತೈಲ ಬೆಲೆ ಈಗ ಇರುವುದಕ್ಕಿಂತ ಶೇ.50ರಷ್ಟು ಕಡಿಮೆಯಾಗುತ್ತದೆ.



ಪುಣೆಯ ಪಿಂಪ್ರಿಯಲ್ಲಿ ಇತ್ತೀಚೆಗೆ ಜೋಯಾಲುಕ್ಕಾಸ್‌ನ ನೂತನ ಆಭರಣ ಮಳಿಗೆಯನ್ನು ಕೊಹಿನೂರ್ ಸಮೂಹದ ಎಂಡಿ ಕೃಷ್ಣಕುಮಾರ್ ಗೋಯಲ್ ಮತ್ತು ನಟಿ ಸೋನಾಲಿ ಕುಲಕರ್ಣಿ ಅನಾವರಣಗೊಳಿಸಿದರು. ಕೊಹಿನೂರ್ ಸಮೂಹದ ಜಂಟಿ ವ್ಯವಸ್ಥಾಪಕ ವಿನೀತ್ ಗೋಯಲ್, ಜೋಯಾಲುಕ್ಕಾಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಥಾಮಸ್ ಮ್ಯಾಥ್ಯೂ, ಕಾರ್ಯಾಚರಣೆ ಮುಖ್ಯಾಧಿಕಾರಿ ಹೆನ್ರಿ ಜಾರ್ಜ್, ರಿಟೇಲ್ ಮ್ಯಾನೇಜರ್ ರಾಜೇಶ್ ಕೃಷ್ಣನ್, ಮಾರ್ಕೆಟಿಂಗ್ ಡಿಜಿಎಂ ಅನೀಶ್ ವರ್ಗೀಸ್, ಪ್ರಾಂತೀಯ ಮ್ಯಾನೇಜರ್ ಪಿ.ಎಸ್. ಸುನೀಲ್ ಹಾಗೂ ಇತರ ಗಣ್ಯರು ಹಾಜರಿದ್ದರು.

ಜೆಇಇಯಲ್ಲಿ ನಾರಾಯಣ ವಿದ್ಯಾರ್ಥಿಗಳ ಸಾಧನೆ

ಹೈದರಾಬಾದ್: ಜೆಇಇ ಅಡ್ವಾನ್ಸ್ ಫಲಿತಾಂಶ ಪ್ರಕಟವಾಗಿದ್ದು ಇದರಲ್ಲಿ ನಾರಾಯಣ ಎಜುಕೇಶನ್ ಇನ್‌ಸ್ಟಿಟ್ಯೂಷನ್ಸ್‌ನಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಅಖಿಲ ಭಾರತ ಮುಕ್ತ ವಿಭಾಗದಲ್ಲಿ ಟಾಪ್ 20 ರ‍್ಯಾಂಕ್‌ಗಳಲ್ಲಿ 7, ಟಾಪ್ 50 ರ‍್ಯಾಂಕ್‌ಗಳಲ್ಲಿ 14, ಟಾಪ್ 100 ರ‍್ಯಾಂಕ್‌ಗಳಲ್ಲಿ 31, ಅದು ಪ್ರತಿಭಾವಂತ ವಿದ್ಯಾರ್ಥಿಗಳು ಅಖಿಲ ಭಾರತ ಮಟ್ಟದಲ್ಲಿ ಮೊದಲ ರ‍್ಯಾಂಕ್ ಗಳಿಸಿದ್ದಾರೆ.

ತೆಲಂಗಾಣದ ನಾರಾಯಣ ಶಾಲೆಯ ಸಂದೇಶ್ ಭೋಗಲಪಲ್ಲಿ - 3 , ರಾಜಸ್ಥಾನದ ರಿಷಿ ದೀಪ್ ಮಿಶ್ರಾ - 6, ಆಂಧ್ರಪ್ರದೇಶದ ಬಾಲಾದಿತ್ಯ -11, ರಾಜಸ್ಥಾನದ ರಾಘವ್ ಶರ್ಮಾ - 12, ಒಡಿಶಾದ ಬಿಶ್ವಾಸ್ ಸಾಹೂ -16, ಮಹಾರಾಷ್ಟ್ರದ ಆರ್ಯನ್ ಪ್ರಕಾಶ್ - 17 ಮತ್ತು ಕರ್ನಾಟಕದ ಅಮೋಘ್ ಅಗರ್ವಾಲ್ -20ನೇ ರ‍್ಯಾಂಕ್ ಪಡೆದಿದ್ದಾರೆ. ''ನಾರಾಯಣ ಶಿಕ್ಷಣ ಸಂಸ್ಥೆಗಳಲ್ಲಿ ಪಡೆದ ತರಬೇತಿ, ಕಲಿಕೆ, ಅಭ್ಯಾಸ ಕ್ರಮಗಳು ಇವರ ಸಾಧನೆಗೆ ಉತ್ತೇಜನ ನೀಡಿವೆ. ಪ್ರವೇಶ ಪರೀಕ್ಷೆ ನಡೆಸುವುದು, ದೋಷಗಳನ್ನು ಕಂಡು ಹಿಡಿದು ಅದನ್ನು ಸುಧಾರಿಸುವುದು, ವೈಯಕ್ತಿಕ ಕಾಳಜಿ, ಬೋಧಕರ ನೈಪುಣ್ಯತೆಯ ಬೋಧನೆಯಿಂದ ಈ ಸಾಧನೆ ಸಾಧ್ಯವಾಗಿದೆ,'' ಎಂದು ನಾರಾಯಣ ಶಿಕ್ಷಣ ಸಂಸ್ಥೆಗಳ ನಿರ್ದೇಶಕರಾದ ಡಾ.ಪಿ.ಸಿಂಧೂರ ಹೇಳಿದ್ದಾರೆ.

ವೇಗವಾಗಿ ಬೆಳೆಯುತ್ತಿದೆ ಭಾರತದ ಆರ್ಥಿಕತೆ

ಜಿಡಿಪಿ ದರ ನಿರೀಕ್ಷೆಗಿಂತಲೂ ಹೆಚ್ಚು

ಹೊಸದಿಲ್ಲಿ: ಪ್ರಸಕ್ತ ಹಣಕಾಸು ವರ್ಷ ಸೇರಿದಂತೆ ಮುಂದಿನ ಮೂರು ವರ್ಷಗಳಲ್ಲಿ ಭಾರತದ ಜಿಡಿಪಿ ಶೇ.6.7 ರಷ್ಟು ಇರಲಿದೆ ಎಂದು ವಿಶ್ವಬ್ಯಾಂಕ್ ಅಂದಾಜಿಸಿದೆ. ಇದೇ ವಿಶ್ವದಲ್ಲೇ ಭಾರತದ ಆರ್ಥಿಕತೆ ವೇಗವಾಗಿ ಬೆಳೆಯುತ್ತಿದೆ ಎಂದು ಪ್ರತಿಪಾದಿಸಿದೆ.

ವಿಶ್ವಬ್ಯಾಂಕ್ ವರದಿ

ಇತ್ತೀಚೆಗೆ ಬಿಡುಗಡೆ ಮಾಡಿರುವ ವಿಶ್ವ ಆರ್ಥಿಕತೆಯ ನಿರೀಕ್ಷೆ (ಗ್ಲೋಬಲ್ ಎಕನಾಮಿಕ್ ಪ್ರಾಸ್‌ಪೆಕ್ಟ್) ವರದಿಯಲ್ಲಿ ಭಾರತದ ಆರ್ಥಿಕತೆಯ ವೇಗದ ಓಟವನ್ನು ದಾಖಲಿಸಿದೆ. 2023-24ರ ಹಣಕಾಸು ವರ್ಷದಲ್ಲಿ ಜಿಡಿಪಿ ದರ ಶೇ. 8.2ಕ್ಕೆ ಏರಿದೆ. ಇದು ಜನವರಿಯಲ್ಲಿ ಅಂದಾಜು ಮಾಡಿದ್ದಕ್ಕಿಂತಲೂ ಶೇ. 1.9ರಷ್ಟು ಹೆಚ್ಚಿದೆ. 2023-24ರ ಹಣಕಾಸು ವರ್ಷದಲ್ಲಿ ಜಾಗತಿಕ ಆರ್ಥಿಕ ಬೆಳವಣಿಗೆ ದರ ಶೇ. 2.6ರಷ್ಟಿದೆ. ಇದು ಸ್ಥಿರವಾಗಿ ಉಳಿಯಲಿದೆ. 2025ರಲ್ಲಿ ಇದು 2.7 ಆಗಬಹುದು ಎಂದು ನಿರೀಕ್ಷಿಸಲಾಗಿದೆ. ಆರ್‌ಬಿಐ ಕೂಡ ಜಿಡಿಪಿಯನ್ನು ಪರಿಷ್ಕರಿಸಿತ್ತು. ಇದೀಗ ಹಾದಿಯನ್ನು ವಿಶ್ವಬ್ಯಾಂಕ್ ಕೂಡ ಹಿಡಿದಿದೆ ಎಂಬುದು ಗಮನಾರ್ಹ.

ಭಾರತದಲ್ಲಿ ಉತ್ಪಾದನೆ ಮತ್ತು ನಿರ್ಮಾಣ ವಲಯದ ಕಾರ್ಯಾಚರಣೆಗಳು ನಿರೀಕ್ಷೆಗಿಂತಲೂ ಹೆಚ್ಚುತ್ತಿದೆ. ಇದು ಮುಂಗಾರು ಕೊರತೆಯಿಂದ ಕೃಷಿ ಉತ್ಪಾದನೆಯ ಕೊರತೆಯಿಂದ ಉಂಟಾದ ಪ್ರತಿಕೂಲ ಪರಿಣಾಮಗಳನ್ನು ಕೊಂಚ ತಗ್ಗಿಸಿದೆ. ಇದಲ್ಲದೆ ದೇಶೀಯ ಬೇಡಿಕೆ ಏರಿಕೆಯಾಗುತ್ತಿದ್ದು ಇದೇ ಚಿತ್ರಣ ಮುಂದುವರಿದಲ್ಲಿ ಇಳಿಕೆ ಕಂಡು ಬರಲಿದೆ. ಈ ಬಾರಿ ಮುಂಗಾರು ನಿರೀಕ್ಷಿತ ಪ್ರಮಾಣದಲ್ಲಿ ಇರುವುದರಿಂದ ಹೂಡಿಕೆದಾರರು ಮತ್ತಷ್ಟು ಇಳುವರಿ ನಿರೀಕ್ಷೆ ಇದೆ ಎಂದು ವರದಿಯಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಕಿರು ಸಾಲ ನೀಡಿಕೆಯಲ್ಲಿ 27% ಹೆಚ್ಚಳ

ಹೊಸದಿಲ್ಲಿ: 2023-24ರ ಹಣಕಾಸು ವರ್ಷದಲ್ಲಿ ಕಿರು ಹಣಕಾಸು ಸಂಸ್ಥೆಗಳಿಂದ ಚಿಕ್ಕ ಸಾಲ ನೀಡಿಕೆ ಪ್ರಮಾಣ ಶೇ. 27ರಷ್ಟು ಹೆಚ್ಚಿದೆ ಎಂದು ಕ್ರೆಡಿಟ್ ಬ್ಯೂರೋ ಕ್ರಿಫ್ ಹೈಮಾರ್ಕ್ (ಕ್ರೆಡಿಟ್ ಮಾಹಿತಿ ನೀಡುವ ಕಂಪನಿ) ತಿಳಿಸಿದೆ. ಮಾರ್ಚ್ ತ್ರೈಮಾಸಿಕದಲ್ಲಿ 4.42 ಲಕ್ಷ ಕೋಟಿ ರೂ. ಸಾಲ ನೀಡಲಾಗಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಈ ಪ್ರಮಾಣ ಶೇ.8.5ರಷ್ಟು ಮಾತ್ರ ಇತ್ತು. ಒಟ್ಟಾರೆ ಸಾಲದಲ್ಲಿ ಎಲ್ಲ ರಾಜ್ಯಗಳ ಪಾಲು ಏಕರೂಪವಾಗಿಲ್ಲ. 10 ರಾಜ್ಯಗಳೇ ಶೇ. 83.5ರಷ್ಟು ಸಾಲವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿವೆ. ಪಶ್ಚಿಮ ಬಂಗಾಳ, ಬಿಹಾರ, ಉತ್ತರ ಪ್ರದೇಶ ಮುಂಚೂಣಿಯಲ್ಲಿವೆ.

ಕೆಲವು ಹಿಂದಿನ ತ್ರೈಮಾಸಿಕಗಳಿಂದ ಸಾಲ ನೀಡಿಕೆ ಸ್ಥಿರವಾಗಿತ್ತು. ಮಾರ್ಚ್ ತ್ರೈಮಾಸಿಕದಲ್ಲಿ ಇದೇ ಅವಧಿಯಲ್ಲಿ ಸಾಲ ಬಾಕಿ ಕೂಡ ಏರಿದೆ. ಸಾಲ ಮಂಜೂರಾತಿಗೆ ಅನುಮೋದನೆ ಹಾಗೂ ಸಾಲಗಾರರ ಖಾತೆಗಳಿಗೆ ಹಣ ವರ್ಗಾವಣೆಯಾದ ಅವಧಿಯನ್ನು ಹೊಸ ಸಾಲ ಎನ್ನಲಾಗುತ್ತದೆ. ಗರಿಷ್ಠ ಸಾಲ ಪಡೆದಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವೇ ಮೊದಲ ಸ್ಥಾನದಲ್ಲಿದೆ.

210 ಶಾಲೆಗಳ ಉನ್ನತೀಕರಣ

ಬೆಂಗಳೂರು: ಕರ್ನಾಟಕದ ಶಿಕ್ಷಣ ವಲಯದಲ್ಲಿ 'ಕರ್ನಾಟಕದ ಮಾದರಿ ಶಾಲಾ ಕಾರ್ಯಕ್ರಮ (ಕೆಎಂಎಸ್‌ಪಿ)' ಸದ್ದಿಲ್ಲದೆ ಕ್ರಾಂತಿಯನ್ನು ಮಾಡುತ್ತಿದೆ. ರಾಜ್ಯ ಸರಕಾರದ ಬೆಂಬಲ ಹಾಗೂ ಸ್ವಸ್ವ ಸಂಸ್ಥೆ ನಿರ್ವಹಣೆಯೊಂದಿಗೆ 2025-26ರ ಶೈಕ್ಷಣಿಕ ವರ್ಷದೊಳಗೆ ತುಮಕೂರು, ದಾವಣಗೆರೆ, ಹಾವೇರಿ, ಯಾದಗಿರಿ ಮತ್ತು ಚಿತ್ರದುರ್ಗ ಜಿಲ್ಲೆಗಳ 210ಕ್ಕೂ ಹೆಚ್ಚು ಶಾಲೆಗಳನ್ನು ಮತ್ತು ಅಂಗನವಾಡಿಗಳನ್ನು ಅಭಿವೃದ್ಧಿಗೊಳಿಸಲಿದೆ.

ಜೆರೋಧಾ ಸಹಸಂಸ್ಥಾಪಕ ನಿಖಿಲ್ ಕಾಮತ್, ಯುವ ಅನ್‌ಸ್ಟಾಪಬಲ್ ಕಾರ್ಯಕ್ರಮದ ಸಂಸ್ಥಾಪಕ ಅಮಿತಾಭ್ ಶಾ ಅವರ ಪ್ರಯತ್ನದೊಂದಿಗೆ ಶಾಲೆಗಳ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಬೆಲ್ ಮತ್ತು ಮೆಲಿಂಡಾ ಗೇಟ್ಸ್ ಫೌಂಡೇಷನ್, ಜೆಎಸ್‌ಡಬ್ಲ್ಯು ಫೌಂಡೇಷನ್, ಸ್ಟೀರ್, ಪ್ರಥಮ್ ಪ್ರಕಾಶ್ ಮತ್ತು ಯುವ ಅನ್‌ಸ್ಟಾಪಬಲ್ ಪಾಲುದಾರರಾಗಿದ್ದು ಸ್ಟಾರ್ಟ್‌ಅಪ್ (YIPP) ಬೆಂಬಲದೊಂದಿಗೆ ಈ ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಇದು 45 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು, 1,100 ಶಿಕ್ಷಕರನ್ನು ತಲುಪಲಿದ್ದು ಕೆಳವರ್ಗದ ಸಮುದಾಯದ ವರ್ಗದಿಂದ ಶಾಲೆಗಳ ಅಭಿವೃದ್ಧಿ ಕೆಲಸಗಳನ್ನು ನಡೆಸುತ್ತಿದೆ.

ಈ ಕಾರ್ಯಕ್ರಮದ ಅಡಿಯಲ್ಲಿ ಶಾಲೆಗಳಲ್ಲಿ ಡಿಜಿಟಲ್ ಮತ್ತು ಭೌತಿಕ ಮೂಲಸೌಕರ್ಯಗಳ ಉನ್ನತೀಕರಣ, 21ನೇ ಶತಮಾನದ ಕೌಶಲ, ಆಧುನಿಕ ಶಿಕ್ಷಣದ ಮೇಲೆ ಒತ್ತು, ಪ್ರತಿ ಸಂಸ್ಥೆ, ವಿದ್ಯಾರ್ಥಿಗಳು ಮಾತ್ರವಲ್ಲದೆ ಶಿಕ್ಷಕರು ಹಾಗೂ ಶಿಕ್ಷಣಾಧಿಕಾರಿಗಳ ಸಾಮರ್ಥ್ಯ ವೃದ್ಧಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ.



ಕರ್ನಾಟಕ ಮಾದರಿ ಶಾಲಾ ಕಾರ್ಯಕ್ರಮವು ಮೂಲ ಸೌಕರ್ಯ ಮಾತ್ರವಲ್ಲದೇ ಪೋಷಕರು, ಶಿಕ್ಷಕರು ಮತ್ತು ಶಿಕ್ಷಣಾಧಿಕಾರಿಗಳಲ್ಲಿ ಶಿಕ್ಷಣದ ಗ್ರಹಿಕೆಯನ್ನು ಹೆಚ್ಚಿಸುತ್ತಿದೆ. ನಾವು ಮಕ್ಕಳ ಮೇಲೆ ಬೀರುವ ಪ್ರಭಾವವು ಅವರ ದೀರ್ಘಕಾಲಿಕ ಯಶಸ್ಸಿಗೆ ಕಾರಣವಾಗಲಿದೆ.

- ನಿಖಿಲ್ ಕಾಮತ್ ಜೆರೋಧಾ ಮತ್ತು ಟ್ರೂಬೀಕನ್ ಸಹ ಸಂಸ್ಥಾಪಕ

ಮಂದಗತಿಯಲ್ಲಿ ಷೇರುಪೇಟೆ ವಹಿವಾಟು

ಮುಂಬಯಿ: ಸೋಮವಾರ ಭಾರಿ ಏರಿಕೆ ಕಂಡು ದಾಖಲೆ ಮಾಡಿದ್ದ ಷೇರುಪೇಟೆ, ಮಂಗಳವಾರ ಅಲ್ಪಚೇತರಿಕೆ ಮಾತ್ರ ಕಂಡಿತ್ತು. ಬುಧವಾರ ಮಂದಗತಿಯಲ್ಲೇ ಕಾಯ್ದುಕೊಂಡು, ಸೆನ್ಸೆಕ್ಸ್ 149. 98 ಅಂಕ(ಶೇ. 0.20) ಏರಿಕೆಯಾಗಿ 76,606.57ರಲ್ಲಿ ಸ್ಥಿರಗೊಂಡಿತು. ನಿಫ್ಟಿ 177.1 ಅಂಕ(ಶೇ. 0.76) ಹೆಚ್ಚಿ 23,441.95 ಅಂಕದಲ್ಲಿ ಸಮಾಪ್ತಿಗೊಂಡಿತು. ಬ್ರಿಟಾನಿಯಾ ಇಂಡಸ್ಟ್ರೀಸ್, ಎಂ ಅಂಡ್ ಎಂ, ಎಚ್‌ಯುಎಲ್, ಟೈಟಾನ್, ಲಾರ್ಸನ್ ಆ್ಯಂಡ್ ಟೂಬ್ರೊ, ಅದಾನಿ ಪೋರ್ಟ್ಸ್, ಎಕ್ಸಿಸ್ ಬ್ಯಾಂಕ್, ಬಜಾಜ್ ಫೈನಾನ್ಸ್ ಷೇರುಗಳು ಲಾಭ ಗಳಿಸಿದವು. ಪವರ್ ಗ್ರಿಡ್ ಷೇರುಗಳು ಶೇ. 2.54ರಷ್ಟು ಏರಿಕೆಯಾಗಿ ಗರಿಷ್ಠ ಲಾಭ ಪಡೆದವು. ಮಹಿಂದ್ರಾ ಆ್ಯಂಡ್ ಮಹಿಂದ್ರಾ, ಹಿಂದುಸ್ತಾನ್ ಯುನಿಲಿವರ್, ಇನ್ಫೋಸಿಸ್, ಟೈಟಾನ್ ಷೇರುಗಳು ನಷ್ಟವನ್ನನುಭವಿಸಿದವು.

ಮಾರುಕಟ್ಟೆಗೆ ಹೊಸ ಚೇತಕ್

ಬೆಂಗಳೂರು: ಬಜಾಜ್ ಆಟೋ ಲಿಮಿಟೆಡ್ ಎಲ್ಲರಿಗೂ ಲಭ್ಯವಾಗುವ ಅಗ್ಗದ ದರದಲ್ಲಿ ಚೇತಕ್ 2901 ಅನ್ನು ಅನಾವರಣಗೊಳಿಸಿದೆ. ಇದು ಸುಧಾರಿತ ತಂತ್ರಜ್ಞಾನ, ದೃಢವಾದ ಲೋಹದೊಂದಿಗೆ ಹೊಂದಿದೆ. ಇದು ಎಲೆಕ್ಟ್ರಿಕ್ ಸ್ಕೂಟರ್ ಮಾರುಕಟ್ಟೆಯಲ್ಲಿ ದೃಢವಾಗಿ ಹೆಜ್ಜೆ ಹಾಕಿದೆ ಎಂದು ಕಂಪನಿ ಪ್ರಕಟಣೆ ತಿಳಿಸಿದೆ. ಇದು ಕೆಂಪು, ಕಪ್ಪು,ಹಳದಿ, ಬಿಳಿ ಬಣ್ಣಗಳಲ್ಲಿ ಲಭ್ಯವಿದೆ.

ಇದು ಬೆಂಗಳೂರು ಮತ್ತು ಪುಣೆ ಎಕ್ಸ್ ಶೋರೂಂಗಳಲ್ಲಿ ಲಭ್ಯವಿದೆ.ಚೇತಕ್ 2901 ಆವೃತ್ತಿಯ ಬೆಲೆ 95,998 ರೂ.. ಇದರಲ್ಲಿ ಬ್ಯಾಟರಿ ಕೆಪಾಸಿಟಿ ಇದೆ. 123 ಕಿ.ಮೀ. ಮೈಲೇಜ್ ನೀಡುತ್ತದೆ. ಜೂನ್ 15ರ ನಂತರ ದೇಶಾದ್ಯಂತ 500ಕ್ಕೂ ಹೆಚ್ಚು ಶೋರೂಂಗಳಲ್ಲಿ ಸಿಗುತ್ತದೆ. ''ಚೇತಕ್ 2901 ಆವೃತ್ತಿ ಧೈರ್ಯ, ಬಾಳಿಕೆ, ಕ್ಷಮತೆ, ನವೀನ ನೋಟದಿಂದ ಎಲ್ಲರನ್ನೂ ಆಕರ್ಷಿಸುತ್ತದೆ,'' ಎಂದು ಬಜಾಜ್ ಆಟೋದ ಅರ್ಬನೈಟ್ ಬಿಸಿನೆಸ್ ಯೂನಿಟ್ ಅಧ್ಯಕ್ಷ ಎರಿಕ್ ವಾಸ್ ಹೇಳಿದ್ದಾರೆ. ''ಗ್ರಾಹಕರು ಸಮೀಪದ ಶೋರೂಂಗಳಿಗೆ ತೆರಳಿ ಟೆಸ್ಟ್ ರೈಡ್ ಕೂಡ ಮಾಡಬಹುದು,'' ಎಂದು ತಿಳಿಸಿದ್ದಾರೆ.

TIMES interact

Connecting People, Connecting Needs.

ವಾದ ಆಲಿಸಿದ ಬಳಿಕ ನ್ಯಾಯಾಲಯ, "ಅರ್ಜಿದಾರರು ಆಕ್ಷೇಪಿಸಿರುವ ದೇವಾಲಯಗಳು ರಾಜ್ಯ ಧಾರ್ಮಿಕ ದತ್ತಿ ಇಲಾಖೆಯ ಅಧೀನದಲ್ಲಿದ್ದು, ಮಾಹಿತಿ ಹಕ್ಕು ಕಾಯಿದೆಯಲ್ಲಿ ಸಾರ್ವಜನಿಕ ಪ್ರಾಧಿಕಾರಗಳಾಗಿವೆ. ಅಲ್ಲದೆ, ಸರಕಾರದ ಸುತ್ತೋಲೆ ಪ್ರಶ್ನಿಸಿರುವುದು ಸಾರ್ವಜನಿಕ ಹಿತಾಸಕ್ತಿ ಅಡಿಯಲ್ಲಿ ಬರುವುದಿಲ್ಲ. ಆದ್ದರಿಂದ ಮಾಹಿತಿ ಹಕ್ಕು ಕಾಯಿದೆಯಡಿ ಮಾಹಿತಿ ಕೇಳುವುದು ಅರ್ಚಕರಿಗೆ ತೊಂದರೆ ನೀಡಿದಂತಾಗುವುದಿಲ್ಲ," ಎಂದು ಅಭಿಪ್ರಾಯಪಟ್ಟು ಅರ್ಜಿ ವಜಾಗೊಳಿಸಿತು.

ರದ್ದು ಪಡಿಸಲಾಗಿಲ್ಲ: "ಸ್ಥಿರಾಸ್ತಿ ನೋಂದಣಿ, ದತ್ತಿ ಇಲಾಖೆ ಅಧೀನದ ದೇವಾಲಯಗಳಿಗೆ ಅದೇಶಿಸಿರುವ ಸುತ್ತೋಲೆ ರದ್ದುಪಡಿಸಲಾಗದು," ಎಂದು ನ್ಯಾಯಪೀಠ ಹೇಳಿದೆ.

ಅರ್ಜಿದಾರರ ಪರ ವಕೀಲರು, "ಪ್ರಸಾದ ಸಿದ್ಧಪಡಿಸುವ ಸಂದರ್ಭದಲ್ಲಿ ಎಷ್ಟು ಪ್ರಮಾಣದ ಸಕ್ಕರೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಎಷ್ಟು ಅಕ್ಕಿ ಬಳಸಲಾಗುತ್ತಿದೆ ಎಂಬ ಪ್ರಶ್ನೆ ಕೇಳಲಾಗುತ್ತಿದೆ. ಆ ಮೂಲಕ ಅರ್ಚಕರಿಗೆ ಹಿಂಸೆ ನೀಡುತ್ತಿದ್ದಾರೆ," ಎಂದು ಪೀಠಕ್ಕೆ ವಿವರಿಸಿದರು. ಆದ್ದರಿಂದ ದೇವಾಲಯಗಳನ್ನು ಮಾಹಿತಿ ಹಕ್ಕು ಕಾಯಿದೆಯಿಂದ ಹೊರಗಿಡಬೇಕು," ಎಂದು ಅರ್ಜಿಯಲ್ಲಿ ಕೋರಿದ್ದರು.

ರಾಷ್ಟ್ರೀಯ ವಿದ್ಯುತ್ ತರಬೇತಿ ಸಂಸ್ಥೆ

ವಿದ್ಯುತ್ ಸಚಿವಾಲಯ, ಭಾರತ ಸರ್ಕಾರ



ಪ್ರವೇಶಾತಿ ಪ್ರಕಟಣೆ

ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್
ನವೀಕರಿಸಬಹುದಾದ ಇಂಧನ & ಗ್ರಿಡ್ ಇಂಟರ್‌ಫೇಸ್ ಟೆಕ್ನಾಲಜೀಸ್

ನೋಂದಣಿಗೆ ಕೊನೆಯ ದಿನಾಂಕ: 28ನೇ ಜುಲೈ 2024

ಈಗಲೇ ಅರ್ಜಿ ಸಲ್ಲಿಸಿ

ಮಹಿಳಾ ಅಭ್ಯರ್ಥಿಗಳಿಗೆ 10% ವಿಶೇಷ ರಿಯಾಯಿತಿ

CBC 34107/12/0007/2425

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್
HINDUSTAN AERONAUTICS LIMITED
SOAR TO GREAT HEIGHTS WITH HAL

ಸೂಚನೆ

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್, ಹೆಲಿಕಾಪ್ಟರ್ ಎಂಆರ್‌ಒ ವಿಭಾಗ, ವಿಮಾನಪುರ ಅಂಚೆ, ಬೆಂಗಳೂರು - 560 017 ನಲ್ಲಿ ಉದ್ಯೋಗಿಯಾಗಿರುವ ಶ್ರೀ ಮಂಜುನಾಥ್ ಎನ್., ಇಲಾಖೆ/ಪಿನಿ ಸಂಖ್ಯೆ 354/73368, ವಿರುದ್ಧ ಇಲಾಖಾ ವಿಚಾರಣೆ

[illegible]

ಎಚ್‌ಎಎಲ್, ಹೆಲಿಕಾಪ್ಟರ್ ಎಮ್ ಆರ್ ಓ ವಿಭಾಗದ ಪರವಾಗಿ
ಸಹಿ/-
(ಎಸ್.ವಿ.ಸುಬ್ಬಾ ರೆಡ್ಡಿ)
ಎಜಿಎಂ (ಎಚ್‌ಎಂ-ಎಚ್‌ಎಸ್) - ಎಮ್ ಆರ್ ಓ & ಶಿಸ್ತು ಪ್ರಾಧಿಕಾರ

ನಮ್ಮ ಉಚಿತ ವರ್ಚುವಲ್ ಸೆಮಿನಾರ್‌ಗಾಗಿ ಈಗಲೇ ನೋಂದಾಯಿಸಿ.
ಕರೆಮಾಡಿ: 1800 3096 208 ಅಥವಾ ಭೇಟಿ ನೀಡಿ: toirsvp.com/33
ದಿನಾಂಕ: 26 ರಿಂದ 28ನೇ ಜೂನ್
ನೋಂದಣಿಗೆ ಸ್ಕ್ಯಾನ್ ಮಾಡಿ
THE TIMES OF INDIA | THE ECONOMIC TIMES | ವಿಜಯ ಕರ್ನಾಟಕ | Bangalore Times

ಹೊಸದಾಗಿ ಸಹಕಾರಿಗಳ ಮತದಾರರ ಪಟ್ಟಿ ಸಿದ್ಧಪಡಿಸಲು ಸೂಚನೆ

ಚುನಾವಣೆ 7 ತಿಂಗಳು ವಿಳಂಬ

■ ಸಂತೋಷ್ ಕಾಚಿಹಳ್ಳಿ ಶಿವಮೊಗ್ಗ
lakshmikanthakumar.boraiah@timesgroup.com

ರಾಜ್ಯದೆಲ್ಲೆಡೆ ಲೋಕಸಭೆ ಚುನಾವಣೆ ಬಳಿಕ ನಡೆಯಬೇಕಿದ್ದ ಹಾಲು ಒಕ್ಕೂಟಗಳು, ಡಿಸಿಸಿ ಬ್ಯಾಂಕ್‌ಗಳು, ಪ್ಯಾಕ್ಸ್ ಸೇರಿದಂತೆ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕ್‌ಗಳ ಚುನಾವಣೆ ರಾಜ್ಯ ಸರಕಾರದ ಹೊಸ ಆದೇಶದಿಂದ ಏಳು ತಿಂಗಳು ತಡವಾಗಲಿದೆ. ಹೊಸದಾಗಿ ಮತದಾರರ ಪಟ್ಟಿ ಸಿದ್ಧ ಮಾಡುವಂತೆ ಜೂನ್ 7ರಂದು ಸರಕಾರ ಆದೇಶ ಹೊರಡಿಸಿದೆ. ಈ ಪ್ರಕ್ರಿಯೆಗೆ ಆರೇಳು ತಿಂಗಳು ಹಿಡಿಯುವ ಕಾರಣ ಚುನಾವಣೆ ಮುಂದೂಡಿಕೆ ಆಗಲಿದೆ.

ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಮೂರ್ನಾಲ್ಕು ವರ್ಷದಿಂದ ಚುನಾವಣೆ ನಡೆಸದೆ ಅಧಿಕಾರಿಗಳ ಆಡಳಿತದಲ್ಲಿ ಉಳಿಸಿರುವಂತೆ ಸಹಕಾರ ಕ್ಷೇತ್ರವನ್ನೂ ಅಧಿಕಾರಿಗಳ ಆಡಳಿತದಲ್ಲಿ ಉಳಿಸುವ ಹುನ್ನಾರವನ್ನು ರಾಜ್ಯ ಸರಕಾರ ಈ ಆದೇಶದ ಮೂಲಕ ನಡೆಸಿದೆ. ಅವಧಿ ಮುಗಿದ ಸಹಕಾರ ಸಂಘಗಳಿಗೆ ಚುನಾವಣೆ ನಡೆಸಲು ಸಹಕಾರ ಇಲಾಖೆ ಅವಕಾಶ ನೀಡಿತ್ತು. ಇದಕ್ಕೆ ಪೂರಕವಾಗಿ ಸಂಘಗಳು ವೇಳಾಪಟ್ಟಿಯನ್ನೂ ಪ್ರಕಟಿಸಿದ್ದವು. ಆದರೆ, ಲೋಕಸಭಾ ಚುನಾವಣೆ ಘೋಷಣೆಯಾದ ಕಾರಣ ಎಲ್ಲ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸಿ ಚುನಾವಣೆ ನೀತಿ ಸಂಹಿತೆ ಬಳಿಕ ಯಥಾ ಪ್ರಕಾರ ಪ್ರಕ್ರಿಯೆ ಮುಂದುವರಿಸುವಂತೆ ಸರಕಾರ ಆದೇಶ ಹೊರಡಿಸಿತ್ತು.

ಚುನಾವಣಾ ನೀತಿ ಸಂಹಿತೆ ತೆರವುಗೊಂಡ ನಂತರ ಸಹಕಾರ ಕ್ಷೇತ್ರದ ಚುನಾವಣಾ ಪ್ರಕ್ರಿಯೆ ಆರಂಭವಾಗಿತ್ತು. ಆದರೆ, ಸಹಕಾರ ಇಲಾಖೆಯು ಹೊಸ ಆದೇಶ ಶಾಕ್ ನೀಡಿದೆ. ನ್ಯಾಯಾಲಯದ ಮೊರೆ ಹೋಗಿ ಚುನಾವಣೆ ನಡೆಸಲು ಆದೇಶ ಪಡೆದುಕೊಂಡ ಸಂಘಗಳು ಮತ್ತು ಬ್ಯಾಂಕ್‌ಗಳಿಗೆ ಮಾತ್ರ ಈಗ ಚುನಾವಣೆ ಪ್ರಕ್ರಿಯೆ ಆರಂಭವಾಗಿದೆ. ಉಳಿದವುಗಳ ಚುನಾವಣೆ ಏಳು ತಿಂಗಳು ಮುಂದೂಡಿಕೆ ಆಗಲಿದೆ.

ಸಂಘಗಳು 2020-21ರಿಂದ 2022-23ನೇ ಸಾಲಿನಲ್ಲಿ ಚಾಲ್ತಿಯಲ್ಲಿದ್ದಂತೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸಿದ್ದವು. ಇಲಾಖೆಯು ಈಗ 2023-24ನೇ ಸಾಲಿನ ಆರ್ಥಿಕ ವರ್ಷಕ್ಕೆ ಅನ್ವಯವಾಗುವಂತೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಂತೆ ಆದೇಶಿಸಿದೆ. ಇದರಿಂದಾಗಿ ಮತದಾರರ ಪಟ್ಟಿ ತಯಾರಿಸಲು ಅಧಿಕಾರಿ ಮತ್ತು ಸಿಬ್ಬಂದಿ ಆರು ತಿಂಗಳ ಕಾಲ ನಡೆಸಿದ ಪ್ರಕ್ರಿಯೆಯು ನೀರಿನಲ್ಲಿ ಹೋಮ ಮಾಡಿದಂತಾಗಿದೆ. ಈಗ ಹೊಸದಾಗಿ ಪ್ರಕ್ರಿಯೆ ಆರಂಭಿಸಿ ಪೂರ್ಣಗೊಳಿಸಲು 192 ದಿನ ಅಂದರೆ ಆರೂವರೆ ತಿಂಗಳು ಹಿಡಿಯುತ್ತದೆ.

ಮೀಸಲು ಉದ್ದೇಶ

ಪ್ರಾಥಮಿಕ, ಮಾಧ್ಯಮಿಕ, ಒಕ್ಕೂಟ ಮತ್ತು ಅಪೆಕ್ಸ್ ಹಂತದಲ್ಲಿ ಬರುವ ಸಹಕಾರ ಸಂಘಗಳು ಮತ್ತು ಬ್ಯಾಂಕ್‌ಗಳಿಗೆ ರಾಜ್ಯ ಸರಕಾರ ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ವರ್ಗ, ಮಹಿಳಾ ಮೀಸಲು ಕಲ್ಪಿಸಲು ಸರಕಾರ ಉದ್ದೇಶಿಸಿದೆ. ಈ ಸಂಬಂಧ ಕಳೆದ ಅಧಿವೇಶನದಲ್ಲಿ ಮಂಡಿಸಿದ ವಿಧೇಯಕಕ್ಕೆ ವಿಧಾನಸಭೆಯಲ್ಲಿ ಅನುಮೋದನೆ ಸಿಕ್ಕರೂ ಪರಿಷತ್‌ನಲ್ಲಿ ಬಹುಮತದ ಕೊರತೆಯಿಂದ ಸೋಲಾಗಿತ್ತು. ಜುಲೈ 8ರಿಂದ ಆರಂಭವಾಗಲಿರುವ ಮುಂಗಾರು ಅಧಿವೇಶನದಲ್ಲಿ ಮತ್ತೊಮ್ಮೆ ವಿಧೇಯಕ ಮಂಡಿಸಿ ಅನುಮೋದನೆ ಪಡೆದುಕೊಂಡು ಮೀಸಲು ಜಾರಿಗೊಳಿಸುವುದು ಸರಕಾರದ ಉದ್ದೇಶವಾಗಿದೆ ಎಂದು ಖಚಿತ ಮೂಲಗಳು ತಿಳಿಸಿವೆ. ಹೊಸ ಮೀಸಲು ಜಾರಿಯಾಗಿ ಸ್ಥಳೀಯ ಸಂಸ್ಥೆಗಳಂತೆ ಕ್ಷೇತ್ರವಾರು ಮೀಸಲಿಗೆ ಯಾರಾದರೂ ಆಕ್ಷೇಪ ವ್ಯಕ್ತಪಡಿಸಿ ನ್ಯಾಯಾಲಯದ ಮೊರೆ ಹೋದರೆ ಚುನಾವಣೆ ಮತ್ತಷ್ಟು ಮುಂದೂಡಿಕೆಯಾದರೂ ಅಚ್ಚರಿ ಇಲ್ಲ.

ಹೊಸದಾಗಿ ಮತದಾರರ ಕರಡು ಸಿದ್ಧಮಾಡುವಂತೆ ಆದೇಶ ನೀಡಿರುವುದರ ಹಿಂದೆ ರಾಜಕೀಯ ಗಿಮಿಕ್ ಇದೆ. ಈಗ ನೀಡಿರುವ ಆದೇಶವನ್ನು 8 ತಿಂಗಳ ಮೊದಲೇ ನೀಡಬಹುದಿತ್ತು. ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಂತೆ ಸಹಕಾರ ಕ್ಷೇತ್ರದಲ್ಲೂ ಅಧಿಕಾರಿಗಳ ಆಡಳಿತ ತರುವ ಹುನ್ನಾರ ನಡೆದಿದೆ.

-ಡಿ.ಆನಂದ್ ನಿರ್ದೇಶಕರು, ಶಿಮುಲ್, ಶಿವಮೊಗ್ಗ

ಆಡಳಿತ ಮಂಡಳಿ ಲೆಕ್ಕಕ್ಕಿಲ್ಲ

ಚುನಾವಣೆಗಳನ್ನು ಮುಂದೂಡಿದರೂ ಹೊಸ ಆಡಳಿತ ಮಂಡಳಿ ಬರುವವರೆಗೆ ಚಾಲ್ತಿಯಲ್ಲಿರುವ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳು ಮುಂದುವರಿಯಲು ಅವಕಾಶ ನೀಡಲಾಗಿದೆ. ಆದರೆ, ದೈನಂದಿನ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಬಹುದೆ ಹೊರತು ಹೊಸ ನಿರ್ಣಯಗಳನ್ನು ಕೈಗೊಳ್ಳುವಂತಿಲ್ಲ. ಇದರ ಮಧ್ಯೆ ಲೋಕಸಭೆ ಚುನಾವಣೆ ಪೂರ್ವದಲ್ಲೇ ಅವಧಿ ಮುಗಿದು ಆಡಳಿತಾಧಿಕಾರಿ ಅಥವಾ ವಿಶೇಷಾಧಿಕಾರಿ ನೇಮಕಗೊಂಡಿದ್ದಲ್ಲಿ, ಹೊಸ ಆಡಳಿತ ಮಂಡಳಿ ಬರುವವರೆಗೆ ಅಧಿಕಾರಿಯೇ ಮುಂದುವರಿಯುತ್ತಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸಹಕಾರಿಗಳಿಂದ ಆಕ್ಷೇಪ

ಮೀಸಲು ಜಾರಿಗೆ ಯಾರಿಂದಲೂ ಆಕ್ಷೇಪ ಬಂದಿಲ್ಲ. ಆದರೆ, ಈ ಪ್ರಕ್ರಿಯೆಯನ್ನು ಮೊದಲೇ ಕೈಗೊಳ್ಳಬಹುದಿತ್ತು. ಸಹಕಾರ ಸಂಘಗಳು ಮತ್ತು ಬ್ಯಾಂಕ್‌ಗಳ ಚುನಾವಣೆಯನ್ನು ಉದ್ದೇಶಪೂರ್ವಕವಾಗಿ ಮುಂದೂಡಲು ಅವಸರದಲ್ಲಿ ಮೀಸಲು ಜಾರಿಗೊಳಿಸುವ ಅವಶ್ಯಕತೆ ಇರಲಿಲ್ಲ ಎಂದು ಸಹಕಾರ ಕ್ಷೇತ್ರದ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

395 ಕೋಟಿ ರೂಪಾಯಿ ಕಬ್ಬಿನ ಬಿಲ್ ಬಾಕಿ

■ ಗುರುದತ್ತ ಭಟ್ ಬೆಳಗಾವಿ
gurudatta.bhat@timesgroup.com

ಬರದಿಂದ ತತ್ತರಿಸಿರುವ ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳು ಗಾಯದ ಮೇಲೆ ಬರೆ ಎಳೆಯುತ್ತಿವೆ. ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ಒಟ್ಟು 395 ಕೋಟಿ ರೂ. ಕಬ್ಬಿನ ಬಿಲ್ ಬಾಕಿ ಉಳಿಸಿಕೊಂಡಿದ್ದು ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕಳೆದ ಸಾಲಿನಲ್ಲಿ ಮಳೆ ಕೊರತೆಯಿಂದ ಕಬ್ಬಿನ ಇಳುವರಿ ನಿರೀಕ್ಷಿತ ಪ್ರಮಾಣದಲ್ಲಿ ಬಂದಿಲ್ಲ. ಕಬ್ಬು ಬೆಳೆಯಲು ಲಕ್ಷಾಂತರ ರೂ. ಖರ್ಚು ಮಾಡಿರುವ ರೈತರಿಗೆ ಸಕ್ಕರೆ ಕಾರ್ಖಾನೆಗಳು ನಿಗದಿತ ವೇಳೆಯಲ್ಲಿ ಬಿಲ್ ಪಾವತಿಸಿದರೆ ನಷ್ಟ ಕಡಿಮೆಯಾಗುತ್ತಿತ್ತು. ಮಾರ್ಚ್‌ನಲ್ಲಿ ಎಲ್ಲ ಕಾರ್ಖಾನೆಗಳು ಹಂಗಾಮು ಮುಗಿಸಿವೆ. ರೈತರು ಕಬ್ಬು ಪೂರೈಸಿದ 14 ದಿನದೊಳಗೆ ಕಾರ್ಖಾನೆಗಳಿಗೆ ಬಿಲ್ ಪಾವತಿಸಬೇಕು. ಆದರೆ, ಹಲವು ಕಾರ್ಖಾನೆಗಳು ಇದುವರೆಗೂ ಜನವರಿ, ಫೆಬ್ರವರಿ ತಿಂಗಳ ಕಬ್ಬಿನ ಬಿಲ್ ಪಾವತಿಸಿಲ್ಲ.

ಕಬ್ಬು ನುರಿಸಿದ್ದೆಷ್ಟು?: ರಾಜ್ಯದಲ್ಲಿ 78 ಸಕ್ಕರೆ ಕಾರ್ಖಾನೆಗಳಿದ್ದು ಪ್ರಸಕ್ತ ಹಂಗಾಮಿನಲ್ಲಿ 2024ರ ಮಾರ್ಚ್‌ವರೆಗೆ ಒಟ್ಟು 5.86 ಕೋಟಿ ಟನ್ ಕಬ್ಬು ನುರಿಸಲಾಗಿದೆ. ಶೇ.9.04 ರಿಕವರಿ ಬಂದಿದೆ. ಬೆಳೆಗಾರರಿಗೆ ಒಟ್ಟು 19,900 ಕೋಟಿ ರೂ. ಪಾವತಿಸಬೇಕಿದ್ದು, ಮೇ ಅಂತ್ಯದವರೆಗೆ 19,505 ಕೋಟಿ ರೂ. ಪಾವತಿಸಲಾಗಿದೆ. ಕಳೆದ ಹಂಗಾಮಿನಲ್ಲಿ ಎಫ್‌ಆರ್‌ಪಿ 2,920 ರೂ. ಇತ್ತು. ಈ ಬಾರಿ ಎಫ್‌ಆರ್‌ಪಿ 3,150 ರೂ.ಗೆ ಏರಿಸಲಾಗಿದೆ. ಆದರೆ, ಬಿಲ್ ಬಾಕಿ ಉಳಿಸಿಕೊಂಡಿರುವ ಕಾರಣ ರೈತರಿಗೆ ಎಫ್‌ಆರ್‌ಪಿ ಹೆಚ್ಚಳದ ಲಾಭ ಸಿಗದಂತಾಗಿದೆ.

ಪ್ರೋತ್ಸಾಹ ಧನ ಘೋಷಣೆ: ರಾಜ್ಯದಲ್ಲಿ ಸುಮಾರು 10 ಲಕ್ಷ ರೈತರು ಕಬ್ಬು ಬೆಳೆಯುತ್ತಾರೆ. ಕಳೆದ ಹಂಗಾಮಿನಲ್ಲಿ ಎದುರಾದ ಬರಗಾಲ, ಸಕ್ಕರೆ ಕಾರ್ಖಾನೆಗಳು ಬಿಲ್ ಪಾವತಿಸುವಲ್ಲಿ ವಿಳಂಬ ಮಾಡುತ್ತಿರುವ ಕಾರಣಗಳಿಂದ ನಷ್ಟ ಎದುರಿಸುತ್ತಿರುವ ರೈತರು ಈ ಬಾರಿ ಇತರ ಬೆಳೆಗಳಿಗೆ ಮೊರೆ ಹೋಗುತ್ತಿದ್ದಾರೆ. ಇದರಿಂದ ಪ್ರಸಕ್ತ ಸಾಲಿನಲ್ಲಿ ಕಬ್ಬಿನ ಬೆಳೆ ಶೇ.30ರಷ್ಟು ಕಡಿಮೆಯಾಗಲಿದೆ. ಕಬ್ಬಿನ ಬೆಳೆ ಕಡಿಮೆಯಾದರೆ ಕಾರ್ಖಾನೆಗಳಿಗೆ ಈ ವರ್ಷ ಕಬ್ಬು ಪೂರೈಕೆಯೂ ಕಡಿಮೆಯಾಗುವ ಆತಂಕವಿದೆ. ಹಾಗಾಗಿ ಗಡಿಗೆ ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಸಕ್ಕರೆ ಕಾರ್ಖಾನೆಗಳು ರೈತರಿಗೆ ಪ್ರತಿ ಎಕರೆ ಕಬ್ಬಿಗೆ 8 ಸಾವಿರ ರೂ. ಪ್ರೋತ್ಸಾಹ ಧನ ಘೋಷಣೆ ಮಾಡಿವೆ.

ಹೋರಾಟಕ್ಕೆ ಸಿದ್ಧತೆ: ಸಕ್ಕರೆ ಕಾರ್ಖಾನೆಗಳು ಹೆಚ್ಚಿನ ಪ್ರಮಾಣದಲ್ಲಿ ಬಿಲ್ ಬಾಕಿ ಇಟ್ಟುಕೊಂಡಿರುವುದರಿಂದ ಕಬ್ಬು ಬೆಳೆಗಾರರು ರೈತ ಸಂಘಟನೆಗಳ ನೇತೃತ್ವದಲ್ಲಿ ಮತ್ತೊಂದು ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ. ಬಹುಪಾಲು ಸಕ್ಕರೆ ಕಾರ್ಖಾನೆಗಳು ರಾಜಕಾರಣಿಗಳ ಒಡೆತನ ಅಥವಾ ಸುಪರ್ದಿಯಲ್ಲಿವೆ. ಹೀಗಾಗಿ, ಸರಕಾರದ ಮೇಲೆ ಒತ್ತಡ ಬೀಳುವ ಸಾಧ್ಯತೆ ಇದೆ.

ಕಬ್ಬಿನ ಬಿಲ್ ಬಾಕಿ ಉಳಿಸಿಕೊಂಡಿರುವ ಕಾರ್ಖಾನೆಗಳನ್ನು ಸರಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು. ಮಾಲೀಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು.

- ಕುರುಬೂರು ಶಾಂತಕುಮಾರ್ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ

ವಿವಿಧ ಸಕ್ಕರೆ ಕಾರ್ಖಾನೆಗಳಿಂದ ಒಟ್ಟು 300 ಕೋಟಿ ರೂ.ಗೂ ಹೆಚ್ಚು ಕಬ್ಬಿನ ಬಿಲ್ ಬಾಕಿ ಇದೆ. ಬಿಲ್ ಬಾಕಿ ಉಳಿಸಿಕೊಂಡಿರುವ ಕಾರ್ಖಾನೆಗಳಿಗೆ ನೋಟಿಸ್ ನೀಡಲಾಗಿದೆ.

- ಎಂ.ಆರ್. ರವಿಕುಮಾರ್ ಸಕ್ಕರೆ ಆಯುಕ್ತ

ನಿತ್ಯ ಭವಿಷ್ಯ — ರಾಜಗುರು ದ್ವಾರಕನಾಥ್

ಪ್ರಶ್ನೆ: ಪರಿಶ್ರಮಪಟ್ಟು ಕೆಲಸ ಮಾಡುತ್ತೇನೆ. ಆದರೆ, ಪ್ರತಿಫಲ ಮಾತ್ರ ಸಿಗುತ್ತಿಲ್ಲ ಗುರೂಜಿ.

ಜನ್ಮ ದಿನಾಂಕ: 01.06.1978 **ನಕ್ಷತ್ರ:** ಪುಬ್ಬಾ

ಪರಿಹಾರ: ಸಪ್ತಮ ಶನಿಯು ಕೊಟ್ಟ ಆಗುಹೋಗುಗಳನ್ನು ನಿವಾರಿಸಿ ದಶ ಮುಟ್ಟಿಸುತ್ತಾನೆ. 10ರ ಗುರುವಿಗೆ ಪ್ರಾರ್ಥನೆ ಬೇಕು. ಅತಿಯಾದ ಒತ್ತಡದ ಜೀವನವನ್ನು ದೂರವಿಟ್ಟು, ಜಾಣ್ಮೆಯಿಂದ ಕೆಲಸವನ್ನು ಮಾಡಿಕೊಳ್ಳಬೇಕು. ಮನಸ್ಸಿಗೆ ಉದ್ವೇಗ, ಶರೀರಕ್ಕೆ ಆಯಾಸ ಬೇಡ. ನಿತ್ಯ ದತ್ತಾತ್ರೇಯ ಗುರುಚರಿತ್ರೆಯ ಒಂದು ಅಧ್ಯಾಯವನ್ನು ಪಾರಾಯಣ ಮಾಡಿರಿ.

ನೀವೂ ಪ್ರಶ್ನೆ ಕೇಳಬಹುದು...

ನೀವೂ ನಿಮ್ಮ ವೈಯಕ್ತಿಕ ಪ್ರಶ್ನೆಯನ್ನು ಇಲ್ಲಿ ಕೇಳಬಹುದು. **ರಾಜಗುರು ಬಿ.ಎಸ್. ದ್ವಾರಕನಾಥ್** ಅವರು ನಿಮ್ಮ ಒಂದು ಪ್ರಶ್ನೆಗೆ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಯನ್ನು ಜನ್ಮದಿನಾಂಕ, ಸಮಯ (ಬೆಳಗ್ಗೆ/ಮಧ್ಯಾಹ್ನ/ರಾತ್ರಿ), ಹುಟ್ಟಿದ ಸ್ಥಳ, ರಾಶಿ-ನಕ್ಷತ್ರದೊಂದಿಗೆ ಈ ಕೆಳಗಿನ ನಂಬರ್‌ಗೆ ವಾಟ್ಸ್ಆ್ಯಪ್ ಮಾಡಿ. ದಿನಕ್ಕೊಬ್ಬರ ಪ್ರಶ್ನೆಗೆ ಉತ್ತರ ಪ್ರಕಟಿಸಲಾಗುವುದು.

ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ

ಕ್ರೋಧಿ ನಾಮ ಸಂವತ್ಸರ
ಆಯನ: ಉತ್ತರಾಯಣ.
ಋತು: ಗ್ರೀಷ್ಮ. ಮಾಸ: ಜ್ಯೇಷ್ಠ.
ಪಕ್ಷ: ಶುಕ್ಲ. ಮಳೆ ನಕ್ಷತ್ರ: ಮೃಗಶಿರ.
ನಿತ್ಯ ನಕ್ಷತ್ರ: ಪೂರ್ವಫಾಲ್ಗುಣಿ.
ತಿಥಿ: ಸಪ್ತಮಿ. ಯೋಗ: ವಜ್ರ.
ಕರಣ: ಗರಜ.
ವಾರ: ಗುರುವಾರ.

ರಾಹು ಕಾಲ: ಮ. 1.30 - 3.00
ಗುಳಿಕ ಕಾಲ: ಬೆ. 9.00-10.30
ಯಮಗಂಡ ಕಾಲ: ಬೆ. 6.00-7.30
ಸೂರ್ಯ ಉದಯ: ಬೆ.5.54
ಸೂರ್ಯ ಅಸ್ತ: ಸಂ.6.45

ಮೂರನೇ ಸಾಕ್ಷಿ ವಿಚಾರಣೆ

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ಮೇಲಿನ ಮೊದಲ ಪೋಕ್ಸೊ ಪ್ರಕರಣ ಕುರಿತು ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬುಧವಾರ ಮೂರನೇ ಮುಖ್ಯ ಸಾಕ್ಷಿ ವಿಚಾರಣೆ ನಡೆಸಿತು. ಮುಖ್ಯ ಸಾಕ್ಷಿದಾರರ ವಿಚಾರಣೆಯನ್ನು ಜೂನ್ 20ಕ್ಕೆ ಮುಂದೂಡಿತು. ಇನ್ ಕ್ಯಾಮರಾ ಮುಖಾಂತರ ಪ್ರಕರಣದಲ್ಲಿ ಮುಖ್ಯ ಸಾಕ್ಷಿಯಾಗಿರುವ ಬಾಲಕಿಯರಿಂದಲೂ ವಿಚಾರಣೆ ನಡೆಸಿ, ಸಂತ್ರಸ್ತರಿಂದ ಹೇಳಿಕೆ ದಾಖಲಿಸಿಕೊಳ್ಳಲಾಯಿತು. ಕೋರ್ಟ್‌ನಲ್ಲಿ ಆರೋಪಿ ಶಿವಮೂರ್ತಿ ಮುರುಘಾ ಶರಣರು, ರಶ್ಮಿ, ಪರಮಶಿವಯ್ಯ ಹಾಜರಾದರು.

ಮುಂದುವರಿದ ಮುಂಗಾರು ಅಬ್ಬರ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕಾಗಿದ್ದು, ಕರಾವಳಿಯ ಬಹುತೇಕ ಕಡೆ ಹಾಗೂ ಉತ್ತರ ಒಳನಾಡು ಮತ್ತು ಕರಾವಳಿಯಲ್ಲಿ ಕೆಲವೆಡೆ ಮಳೆಯಾಗಿದೆ.

ಜೂನ್ 12ರಂದು ಉತ್ತರ ಕನ್ನಡ ಜಿಲ್ಲೆಯ ಶಿರಾಲಿಯಲ್ಲಿ 11 ಸೆಂ.ಮೀ., ಮಂಕಿಯಲ್ಲಿ 9 ಸೆಂ.ಮೀ., ಉಡುಪಿ ಜಿಲ್ಲೆಯ ಕುಂದಾಪುರ, ಗೇರುಸೊಪ್ಪ, ಮಹಾಳದಲ್ಲಿ ತಲಾ 7 ಸೆಂ.ಮೀ. ಮಳೆಯಾಗಿದೆ. ಜೂನ್ 13ರಂದು ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಹಾಗೂ ಉತ್ತರ ಕನ್ನಡ, ಗದಗ, ಕೊಪ್ಪಳ, ರಾಯಚೂರು, ಯಾದಗಿರಿ, ಬಳ್ಳಾರಿ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ನೀಡಲಾಗಿದೆ. ಉಳಿದ ಜಿಲ್ಲೆಗಳಲ್ಲೂ ಸಾಮಾನ್ಯ ಮಳೆಯಾಗಲಿದೆ. ಜೂನ್ 14ರಂದು ಕರಾವಳಿಯ ಎಲ್ಲಾ ಜಿಲ್ಲೆ ಹಾಗೂ ದಕ್ಷಿಣ ಒಳನಾಡಿನ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ನೀಡಲಾಗಿದೆ.

ಕೆಐಎಡಿಬಿ ಕಚೇರಿ ಜಪ್ತಿ

ದಾವಣಗೆರೆ: ಕೈಗಾರಿಕಾ ಉದ್ದೇಶಗಳಿಗಾಗಿ ಸ್ವಾಧೀನ ಪಡಿಸಿಕೊಂಡಿರುವ ಜಮೀನಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ನೀಡದ ಹಿನ್ನೆಲೆಯಲ್ಲಿ ರೈತರೇ ದಾವಣಗೆರೆಯ ಕೆಐಎಡಿಬಿ ಕಚೇರಿಯನ್ನು ಜಪ್ತಿ ಮಾಡಿರುವ ಘಟನೆ ನಡೆದಿದೆ.

ಕೈಗಾರಿಕೆ ಸ್ಥಾಪನೆಯ ಹೆಸರಿನಲ್ಲಿ 2010ರಲ್ಲಿ ಬಳ್ಳಾರಿ ಜಿಲ್ಲೆಯ ಕುಡುತಿನಿ ಸೇರಿದಂತೆ ಇತರ ಭಾಗದಲ್ಲಿ ಕೆಐಎಡಿಬಿ ಭೂ ಸ್ವಾಧೀನಕ್ಕೆ ಪಡೆದುಕೊಂಡಿತ್ತು. ಕಡಿಮೆ ಪರಿಹಾರ ನಿಗದಿ ಪಡಿಸಲಾಗಿದೆ ಎಂದು ಜಮೀನು ಕಳೆದುಕೊಂಡಿರುವ ರೈತರು, ನ್ಯಾಯಾಲಯದ ಮೊರೆ ಹೋಗಿದ್ದರು.

ಈ ಹಿನ್ನೆಲೆಯಲ್ಲಿ ಸೂಕ್ತ ಪರಿಹಾರ ನೀಡುವಂತೆ ಬಳ್ಳಾರಿಯ ಸಿವಿಲ್ ನ್ಯಾಯಾಲಯವು ಕೆಐಎಡಿಬಿಗೆ ಆದೇಶಿಸಿತ್ತು. ಕಳೆದ ಡಿಸೆಂಬರ್‌ನಲ್ಲಿ ನಿಗದಿತ ಪರಿಹಾರ ನೀಡುವುದಾಗಿ ಕೆಐಎಡಿಬಿ ನ್ಯಾಯಾಲಯಕ್ಕೆ ತಿಳಿಸಿತ್ತು. ಆದರೂ, ಪರಿಹಾರ ನೀಡಿರಲಿಲ್ಲ. ಪರಿಹಾರದ ಹಣ ನೀಡದೇ ಸತಾಯಿಸುತ್ತಿರುವ ಕೆಐಎಡಿಬಿ ಕಚೇರಿಯನ್ನು ಕೋರ್ಟ್ ಆದೇಶದಂತೆ ಜಪ್ತಿ ಮಾಡಿರುವ ರೈತರು, ಕಚೇರಿಯಲ್ಲಿದ್ದ ಖುರ್ಚಿ, ಟೇಬಲ್, ಬೀರು ಸೇರಿದಂತೆ ಇತರ ಪೀಠೋಪಕರಣಗಳನ್ನು ಲಾರಿಯಲ್ಲಿ ತುಂಬಿಕೊಂಡು ಹೋಗಿದ್ದಾರೆ.

ರಾಜೀವ್ ತಾರಾನಾಥ್ ವಿಧಿರಹಿತ ಅಂತ್ಯಕ್ರಿಯೆ

■ ವಿಕ ಸುದ್ದಿಲೋಕ ಮೈಸೂರು

ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಅವರ ಅಂತ್ಯಕ್ರಿಯೆ ಬುಧವಾರ ಮೈಸೂರಿನಲ್ಲಿ ನೆರವೇರಿತು.

ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದ ತಾರಾನಾಥ್ ಅವರ ಪಾರ್ಥಿವ ಶರೀರವನ್ನು ಕುವೆಂಪು ನಗರದ ಪಂಚಮಂತ್ರ ರಸ್ತೆಯಲ್ಲಿರುವ ಅವರ ನಿವಾಸದಲ್ಲಿ ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಗಿತ್ತು.

ತಾರಾನಾಥರ ಬಂಧು ಬಳಗ, ಸ್ನೇಹಿತರು, ಕಲೆ, ಸಾಹಿತ್ಯ, ಸಂಗೀತ ಕ್ಷೇತ್ರದ ಒಡನಾಡಿಗಳು ಹಾಗೂ ಇತರರು ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಅಭಿಮಾನಿಗಳು ದರ್ಶನ ಪಡೆದು ಅಂತಿಮ ನಮನ ಸಲ್ಲಿಸಿದರು.

ಬಳಿಕ 1 ಗಂಟೆ ಸುಮಾರಿಗೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಆನಿಲ ಚಿತಾಗಾರಕ್ಕೆ ಪಾರ್ಥಿವ ಶರೀರವನ್ನು ಸಾಗಿಸಲಾಯಿತು. ಅಲ್ಲಿ ಪೊಲೀಸರು ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸುವ ಮೂಲಕ ರಾಜೀವ್ ತಾರಾನಾಥ್ ಅವರಿಗೆ ಸರಕಾರಿ ಗೌರವ ಸಲ್ಲಿಸಿದರು. ಬಳಿಕ ರಾಷ್ಟ್ರಗೀತೆ ಹಾಡಲಾಯಿತು.

ಕುಟುಂಬದವರ ಸೂಚನೆಯಂತೆ ಯಾವುದೇ ಧಾರ್ಮಿಕ ಸಂಪ್ರದಾಯಗಳನ್ನು ಅನುಸರಿಸದೇ ಅಂತ್ಯಕ್ರಿಯೆ ನೆರವೇರಿಸಲಾಯಿತು.

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸಹಕಾರನಗರ, ನೆಲಮಂಗಲ-562123. ಇ-ಮೇಲ್: nelamangala.pa@gmail.com
ಸಂಖ್ಯೆ: ನೆಯೋಪ್ರಾ:CLU:56:2023-24 ದಿನಾಂಕ: 14-03-2024

ಸಾರ್ವಜನಿಕ ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರಂತೆ)

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂಮಪ್ರಾ 2006 ದಿನಾಂಕ: 13-02-2007 ರನ್ವಯ ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ವಿಶ್ವೇಶ್ವರಪುರ ಗ್ರಾಮವು "ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ" ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬೆಮಂಪ್ರಾ 2013, ದಿನಾಂಕ: 01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಪ್ರದೇಶವನ್ನು "ಕೃಷಿ" ವಲಯದಲ್ಲಿ ಕಾಯ್ದಿರಿಸಲಾಗುತ್ತದೆ. ಮಹಾಯೋಜನೆ ಅನುಮೋದನೆಗೊಂಡು ಐದು ವರ್ಷಗಳ ಅವಧಿಯು ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರನ್ವಯ "ಕೃಷಿ" ವಲಯದಲ್ಲಿ ಕಾಯ್ದಿರಿಸಲಾದ ಭೂ ಉಪಯೋಗ ರದ್ದಾಗುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರನ್ವಯ ಈ ಕೆಳಕಂಡಂತೆ "ವಾಣಿಜ್ಯ" ಉದ್ದೇಶಕ್ಕೆ ಭೂ ಉಪಯೋಗ ನಿಗದಿ ಪಡಿಸಲು ಅರ್ಜಿದಾರರು ಕೋರಿರುವಂತೆ ಸದರಿ ಕಲಂ 69 (4) ರ ಅಡಿಯಲ್ಲಿ "ವಾಣಿಜ್ಯ" ಭೂ ಉಪಯೋಗ ನಿಗದಿ ಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು ಶ್ರೀ / ಶ್ರೀಮತಿ	ತಾಲ್ಲೂಕು/ ಹೋಬಳಿ/ ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗುಂ)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
ಲಕ್ಷ್ಮೀದೇವಿ.ಪಿ.ಕೆ. ಕೋಂ ಲೇಟ್ ಎಸ್.ಆರ್.ಪಾರ್ಶ್ವನಾಥ್	ನೆಲಮಂಗಲ/ ಕಸಬಾ/ ವಿಶ್ವೇಶ್ವರಪುರ	11/4	01-11	ಕೃಷಿ	ವಾಣಿಜ್ಯ
		ಒಟ್ಟು	01-11		

ಷರಾ:- ಪ್ರಸ್ತಿತ ಜಮೀನಿನ ಸುತ್ತಮುತ್ತಲಿನಲ್ಲಿ ವಾಣಿಜ್ಯ ಸಮುಚ್ಚಯ ಇಲ್ಲದೆ ಇರುವುದರಿಂದ ಪ್ರಸ್ತಿತ ಜಮೀನಿನಲ್ಲಿ ಉತ್ತಮ ಸೌಲಭ್ಯಗಳೊಳಗೊಂಡ ವಾಣಿಜ್ಯ ಸಮುಚ್ಚಯ ಸ್ಥಾಪನೆಯಲ್ಲಿ ಸ್ಥಳೀಯ ಉದ್ದಿಮೆದಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ಸುಮಾರು 25 ಜನ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು "ಕೃಷಿ" ವಲಯದಿಂದ "ವಾಣಿಜ್ಯ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.
ವಾಅಇಮ/ಮಾಪ್ರ/193/ಕ್ಲಾಸ್/2024-25

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.

ಚರಾಸ್ತಿಯ ವಸ್ತುಗಳ ಇ-ಹರಾಜಿಗೆ ಆಹ್ವಾನ / ಸೂಚನೆ

Pursuant to attachment of movable properties by the Government under the provisions of the Karnataka Protection of Interest of Depositors in Financial Establishments Act, 2004(KPIDFE Act) and pursuant to the absolute attachment order by the Hon'ble Special Court the Special Officer & Competent Authority(under KPIDFE-IMA and other Scam), is issuing notice for e-auction of the movables attached through e-auction on 'as is where is and whatever there is basis'.

"SPLOCA" hereby invites bids from the intending bidders along with a bid deposit as mentioned in the table below as Earnest Money for MOVABLE ITEMS- Crafts & Textile items to be paid through DD drawn in favor of "Special Officer and Competent Authority (EMD)" or through RTGS/ NEFT to the Account number 41506340119, IFSC Code: SBIN0040277 STATE BANK OF INDIA, VIDHANA SOUDHA Branch.

Short Description of the Movable items

Sl. No.	Description of Items	Reserve Price (Rs)	EMD (Rs)	Bid Increase Value (Rs)
	Craft Items			
1.	Wood Items	6,52,055/-	33,000/-	4,000/-
2.	Marble Items	4,31,554/-	22,000/-	3,000/-
3.	Art Jewellery & Bangles	1,11,876/-	6,000/-	1,000/-
4.	Silver Items	7,33,216/-	37,000/-	4,000/-
5.	Sandal Soap & Powder	40,118/-	2,000/-	200/-
6.	Orissa Painting	91,557/-	5,000/-	500/-
7.	Leather Shoes & Ladies Bags	21,438/-	1,000/-	100/-
	Textile Items			
1.	Gents & Common Clothing	6,84,000/-	35,000/-	4,000/-

ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ : 08ನೇ ಜುಲೈ 2024, ಸಂಜೆ 5.00 ಗಂಟೆ ಒಳಗೆ.
ಪರಿಶೀಲನೆಯ ದಿನಾಂಕ ಮತ್ತು ಸಮಯ : 10ನೇ ಜುಲೈ 2024, ಬೆಳಗ್ಗೆ 11.00 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ.
ಪ್ರಿ-ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : 10ನೇ ಜುಲೈ 2024, ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ.
ಇ-ಹರಾಜಿನ ದಿನಾಂಕ ಮತ್ತು ಸಮಯ : 12ನೇ ಜುಲೈ 2024 ಬೆಳಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯ ಒಳಗೆ.

For Registration & Online Auction, you can login to: **https://www.bankeauctions.com.** The interested bidders who require auction related information can contact Joint Secretary, Office of the Special Officer & Competent Authority, 3rd Floor, Podium Block, Visveswariah Towers, Dr.Ambedkar Veedi, Bengaluru-560 001, e-mail ID: **splocaeauction@gmail.com** or Contact Mob. No 6364403715.

ಸ್ಥಳ: ಬೆಂಗಳೂರು
ದಿನಾಂಕ: 12.06.2024
DIPR/CP/298/Zen/2024-25

ಸಹಿ/-
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
(ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ-ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಇಂಡೆಂಟ್ ಸಂಖ್ಯೆ	ಟೆಂಡರ್‌ಗಳ್ಳ ಮೊತ್ತ ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
	ಮುಖ್ಯ ಅಭಿಯಂತರರ ಕಚೇರಿ (ಕಾವೇರಿ-ಕಾ.ಪಿ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560009				
1	ಕಾವೇರಿ (ಕಾ.ಪಿ)-2	ಬೆಂಜಮಂ/ಕಾನಿಅ(ಕಾ-ಕಾ.ಪಿ)-2/	ರೂ.39.16 ಲಕ್ಷಗಳು / ರೂ.79,100/-	12.07.2024ರ ಸಂಜೆ 4:00 ಗಂಟೆಯವರೆಗೆ	15.07.2024ರ ಸಂಜೆ 4:00 ಗಂಟೆಯ ನಂತರ
		155/2024-25, ದಿನಾಂಕ: 10.06.2024			
2		ಬೆಂಜಮಂ/ಕಾನಿಅ(ಕಾ-ಕಾ.ಪಿ)-2/ಟಿಪಿ/153/2024-25, ದಿನಾಂಕ: 10.06.2024	ರೂ.59.37 ಲಕ್ಷಗಳು / ರೂ.1,19,000/-		
	ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಕಾವೇರಿ-ಕಾ.ಪಿ)-2				
	ಮುಖ್ಯ ಅಭಿಯಂತರರ ಕಚೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560009				
3	ದಕ್ಷಿಣ ಪಶ್ಚಿಮ-1	ಬೆಂಜಮಂ/ಕಾನಿಅ(ದ.ಪ.-1)/ತಾಂಸ/ಟಿಪಿ/272/2024-25, ದಿನಾಂಕ: 07.06.2024	ರೂ.10,77,152/- / ರೂ.31,800/-	27.06.2024ರ ಸಂಜೆ 4:00 ಗಂಟೆಯವರೆಗೆ	29.06.2024ರ ಮಧ್ಯಾಹ್ನ 3:00 ಗಂಟೆಯ ನಂತರ
	ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ ಪಶ್ಚಿಮ-1)				
4	ದಕ್ಷಿಣ-2	ಬೆಂಜಮಂ/ಕಾನಿಅ(ದ2)/ತಾಂಸ/ಟಿಪಿ/209/2024-25, ದಿನಾಂಕ: 10.06.2024	ರೂ.80,89,829/- / ರೂ.1,91,000/-	25.06.2024ರ ಸಂಜೆ 4:00 ಗಂಟೆಯವರೆಗೆ	27.06.2024ರ ಸಂಜೆ 4:00 ಗಂಟೆಯ ನಂತರ
5		ಬೆಂಜಮಂ/ಕಾನಿಅ(ದ2)/ತಾಂಸ/ಟಿಪಿ/213/2024-25, ದಿನಾಂಕ: 10.06.2024	ರೂ.62,98,662/- / ರೂ.1,48,700/-		
6		ಬೆಂಜಮಂ/ಕಾನಿಅ(ದ2)/ತಾಂಸ/ಟಿಪಿ/216/2024-25, ದಿನಾಂಕ: 10.06.2024	ರೂ.19,03,622/- / ರೂ.47,600/-	25.06.2024ರ ಸಂಜೆ 4:00 ಗಂಟೆಯವರೆಗೆ	27.06.2024ರ ಮಧ್ಯಾಹ್ನ 3:00 ಗಂಟೆಯ ನಂತರ
	ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ-2)				
	ಮುಖ್ಯ ಅಭಿಯಂತರರ ಕಚೇರಿ (ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560009				
7	ಕೇಂದ್ರ	ಬೆಂಜಮಂ/ಕಾನಿಅ(ಕೇಂದ್ರ)/ಟಿಪಿ/195/2024-25, ದಿನಾಂಕ: 10.06.2024	ರೂ.14,10,454/- / ರೂ.41,650/-	20.06.2024ರ ಸಂಜೆ 5:00 ಗಂಟೆಯವರೆಗೆ	21.06.2024ರ ಸಂಜೆ 5:01 ಗಂಟೆಯ ನಂತರ
8		ಬೆಂಜಮಂ/ಕಾನಿಅ(ಕೇಂದ್ರ)/ಟಿಪಿ/197/2024-25, ದಿನಾಂಕ: 10.06.2024	ರೂ.20,13,665/- / ರೂ.50,000/-		
	ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ)				
9	ಉತ್ತರ-1	ಬೆಂಜಮಂ/ಕಾನಿಅ(ಉ)-1/ಟಿಪಿ/235/2024-25, ದಿನಾಂಕ: 11.06.2024	ರೂ.64,72,055/- / ರೂ.1,52,750/-	27.06.2024ರ ಸಂಜೆ 5:00 ಗಂಟೆಯವರೆಗೆ	28.06.2024ರ ಸಂಜೆ 5:30 ಗಂಟೆಯ ನಂತರ
	ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ-1)				
	ಮುಖ್ಯ ಅಭಿಯಂತರರ ಕಚೇರಿ (ತ್ಯಾ.ನೀ.ಸಂ-ಪೂರ್ವ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560009				
10	(ತ್ಯಾ.ನೀ.ಸಂ-ಎನ್) ಕೆಸಿ ವ್ಯಾಲಿ	ಬೆಂಜಮಂ/ಕಾನಿಅ/ತ್ಯಾನೀ-ಎನ್/ಟಿಪಿ/107/2024-25, ದಿನಾಂಕ: 12.06.2024	ರೂ.71.66 ಲಕ್ಷಗಳು / ರೂ.1.691 ಲಕ್ಷಗಳು	19.06.2024ರ ಸಂಜೆ 4:30 ಗಂಟೆಯವರೆಗೆ	20.06.2024ರ ಸಂಜೆ 4:45 ಗಂಟೆಗೆ
	ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ತ್ಯಾ.ನೀ.ಸಂ-ಎನ್) ಕೆಸಿ ವ್ಯಾಲಿ				
	ಮುಖ್ಯ ಅಭಿಯಂತರರ ಕಚೇರಿ, (ವಿದ್ಯುತ್ ಮತ್ತು ಗುಣ ಆಶ್ವಾಸನೆ) 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560009				
11	ಡಿಡಬ್ಲ್ಯೂ ಪಿಎಸ್	ಬೆಂಜಮಂ/ಇಇ/ಡಿಡಬ್ಲ್ಯೂಪಿಎಸ್/ಟಿಪಿ/98/2024-25, ದಿನಾಂಕ: 11.06.2024	ರೂ.13,62,040/- / ರೂ.38,750/-	28.06.2024ರ ಬೆಳಗ್ಗೆ 11:00 ಗಂಟೆಯವರೆಗೆ	29.06.2024ರ ಬೆಳಗ್ಗೆ 11:15 ಗಂಟೆಯ ನಂತರ
12		ಬೆಂಜಮಂ/ಇಇ/ಡಿಡಬ್ಲ್ಯೂಪಿಎಸ್/ಟಿಪಿ/99/2024-25, ದಿನಾಂಕ: 11.06.2024	ರೂ.13,51,431/- / ರೂ.38,500/-		
	ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು (ಡಿಡಬ್ಲ್ಯೂಪಿಎಸ್)				
	ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560009				
13	ದಕ್ಷಿಣ ಪೂರ್ವ-1	ಬೆಂಜಮಂ/ಕಾನಿಅ(ದ.ಪೂ.)-1/ಟಿಪಿ/186/2024-25, ದಿನಾಂಕ: 10.06.2024	ರೂ.34,38,067/- / ರೂ.81,150/-	27.06.2024ರ ಸಂಜೆ 5:00 ಗಂಟೆಯವರೆಗೆ	28.06.2024ರ ಸಂಜೆ 5:30 ಗಂಟೆಯ ನಂತರ
	ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ ಪೂರ್ವ-1)				
14	ದಕ್ಷಿಣ ಪೂರ್ವ-2	ಬೆಂಜಮಂ/ಕಾನಿಅ(ದ.ಪೂ.)-2/ಟಿಪಿ/208/2024-25, ದಿನಾಂಕ: 12.06.2024 (2ನೇ ಕರೆ)	ರೂ.46,30,556.71 / ರೂ.1,09,300/-	24.06.2024ರ ಸಂಜೆ 4:00 ಗಂಟೆಯವರೆಗೆ	26.06.2024ರ ಮಧ್ಯಾಹ್ನ 3:00 ಗಂಟೆಯ ನಂತರ
	ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ ಪೂರ್ವ-2)				

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲೆ ನಮೂದಿಸಿರುವ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/BCPL/292/2024-25

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯದ ಕಂಪನಿ)
(CIN: U04010KA2002SGC030436)

ಸಂಕ್ಷಿಪ್ತ ಟೆಂಡರ್ ಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ)

ಬೆಸ್ಕಾಂ ಕೆಳಗಿನ ವಿಚಾರಣೆಗಳಿಗಾಗಿ: (1) ವಿಚಾರಣೆ ಸಂಖ್ಯೆ ಮತ್ತು ದಿನಾಂಕ: ಬೆಸ್ಕಾಂ/ಮುಪ್ರವ್ಯ(ಕಾ)/ಉಪ್ರವ್ಯ(ಇವಿ)/ಬಿಸಿ-53/2024-25/Enq-02 ರಿಂದ Enq-23 ದಿನಾಂಕ:12.06.2024. (2) ಕಾಮಗಾರಿ ವಿವರ: ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಸ್ವಾಮ್ಯದ ಸ್ಥಳಗಳಲ್ಲಿ ಪಿಪಿಪಿ ಮಾದರಿಯಲ್ಲಿ ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆ-22 ಲಾಟ್‌ಗಳಲ್ಲಿ. (3) ಬಿಡ್ ದಾಖಲೆಗಳ ಲಭ್ಯತೆ:20.06.2024 ರಂದು 11:00 ಗಂಟೆಯಿಂದ (4) ಬಿಡ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.07.2024 ರಂದು 17:00 ಗಂಟೆಯವರೆಗೆ (5) ಬಿಡ್ ದಾಖಲೆಗಳನ್ನು ತೆರೆಯುವುದು:12.07.2024 ರಂದು 11:00 ಗಂಟೆಗೆ. (6) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29.06.2024 ರಂದು 17:00 ಗಂಟೆಯವರೆಗೆ. (7) ಬಿಡ್-ಪೂರ್ವ ಸಭೆ: 02.07.2024 ರಂದು 11:00 ಗಂಟೆಗೆ. ಬಿಡ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಬೆಸ್ಕಾಂ ಆಹ್ವಾನಿಸಿದೆ. ಸಂಬಂಧಿಸಿದ ವಿಚಾರಗಳ ಬಗ್ಗೆ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟ್:https://kppp.karnataka.gov.inನಲ್ಲಿ ಲಾಗಿನ್ ಮಾಡಿ ಪಡೆಯಬಹುದು. ಇತರೆ ಯಾವುದೇ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/-
ಮುಖ್ಯ ಪ್ರಧಾನ ವ್ಯವಸ್ಥಾಪಕರು,
ಕಾರ್ಯಾಚರಣೆ, ಕಂಪನಿ ಕಾರ್ಯಾಲಯ, ಬೆಸ್ಕಾಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಆಕುಕ ಇಂಜಿನಿಯರಿಂಗ್ ವಿಭಾಗ,
ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
(E-mail:-khsdrp.divmys@gmail.com)
ಸಂಖ್ಯೆ: ಆಕುಕ/ಇಂ.ವಿ./ಕಾ.ಅ/ಮೈ/ಸಗ-3&4/ಟೆಂಡರ್-24(3ನೇ ಕರೆ), 27(2ನೇ ಕರೆ) &29(3ನೇ ಕರೆ)/2024-25 ದಿನಾಂಕ: 05.06.2024.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವ್ಯಾಪ್ತಿಗೆ ಒಳಪಡುವ ಮೈಸೂರು, ಚಾಮರಾಜನಗರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತಾಲ್ಲೂಕು ಮಟ್ಟದ ಆಸ್ಪತ್ರೆ/ಸಮುದಾಯ ಆರೋಗ್ಯ ಕೇಂದ್ರ/ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ದುರಸ್ತಿ ಮತ್ತು ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲಾದ ನಾಲ್ಕನೇ ದರ್ಜೆ & ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ನ 2ನೇ ಹಾಗೂ 3ನೇ ಕರೆಯನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 19.06.2024 ಸಂಜೆ 16.00 ಘಂಟೆಯವರೆಗೆ. 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 20.06.2024 ಸಂಜೆ 16.10 ಘಂಟೆಯವರೆಗೆ.

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp. karnataka.gov.in ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸೂಚನೆ: ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.
DIPR/DDMYS-62/KSMCA-51/2024-25

ಬ್ರೀಫ್ ಕಾರ್ನರ್

24ರಿಂದ ಸಂಸತ್ ಅಧಿವೇಶನ

ಹೊಸದಿಲ್ಲಿ: 18ನೇ ಲೋಕಸಭೆಯ ಮೊದಲ ಅಧಿವೇಶನ ಜೂನ್ 24 ರಿಂದ ಜುಲೈ 3ರವರೆಗೆ ನಡೆಯಲಿದೆ. ಮೊದಲ ಮೂರು ದಿನ ನೂತನ ಸಂಸದರ ಪ್ರಮಾಣ ವಚನ ಸ್ವೀಕಾರ ಹಾಗೂ ಸ್ಪೀಕರ್ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ. ರಾಜ್ಯಸಭೆಯ ಅಧಿವೇಶನವು ಜೂನ್ 27 ರಂದು ಪ್ರಾರಂಭವಾಗಿ ಜುಲೈ 3ರಂದು ಮುಕ್ತಾಯಗೊಳ್ಳಲಿದೆ. ಜೂನ್ 27ರಂದು ಜಂಟಿ ಸದನ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಷಣ ಮಾಡಲಿದ್ದಾರೆ. ಮುಂದಿನ 5 ವರ್ಷಗಳಿಗೆ ಸರಕಾರದ ನೀಲನಕ್ಷೆಯನ್ನು ಮುಂದಿಡಲಿದ್ದಾರೆ ಎಂದು ತಿಳಿಸಿದ್ದಾರೆ.

ಜುಲೈ ಅಂತ್ಯಕ್ಕೆ ಬಜೆಟ್: ಕೇಂದ್ರ ಬಜೆಟ್ ಮಂಡನೆಗಾಗಿ ಜುಲೈ ಮೂರನೇ ವಾರದಲ್ಲಿ ಮತ್ತೊಮ್ಮೆ ಉಭಯ ಸದನಗಳ ಅಧಿವೇಶನ ನಡೆಸುವ ಸಾಧ್ಯತೆಯಿದೆ.

ಜೋಶಿಮಠ ಇನ್ನು ಜ್ಯೋತಿರ್‌ಮಠ

ಹೊಸದಿಲ್ಲಿ: ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿರುವ ಪ್ರಸಿದ್ಧ ಯಾತ್ರಾಸ್ಥಳ ಜೋಶಿಮಠದ ಹೆಸರನ್ನು ಜ್ಯೋತಿರ್‌ಮಠ ಎಂದು ಮರುನಾಮಕರಣ ಮಾಡಿ ಸಿಎಂ ಪುಷ್ಕರ್ ಸಿಂಗ್ ಧಾಮಿ ಸರಕಾರ ಕಳುಹಿಸಿದ್ದ ಪ್ರಸ್ತಾವಕ್ಕೆ ಕೇಂದ್ರ ಸರಕಾರ ಅನುಮೋದನೆ ನೀಡಿದೆ. ಜೋಶಿಮಠವನ್ನು ಜ್ಯೋತಿರ್‌ಮಠ ಎಂದು ಬದಲಾಯಿಸಬೇಕೆಂಬುದು ಬಹಳ ಹಳೆಯ ಬೇಡಿಕೆಯಾಗಿತ್ತು. ಜನರ ಭಾವನೆಗಳನ್ನು ಗೌರವಿಸಿ ಪ್ರದೇಶದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಸ್ಮಿತೆಯನ್ನು ಬಲಪಡಿಸುವ ವಿಶ್ವಾಸದೊಂದಿಗೆ ಸಿಎಂ ಪುಷ್ಕರ್ ಸಿಂಗ್ ಧಾಮಿ ಅವರು ಜೋಶಿಮಠದ ಹೆಸರನ್ನು ಜ್ಯೋತಿರ್‌ಮಠ ಎಂದು ತಮ್ಮ ಸರಕಾರ ಬದಲಾಯಿಸಲಿದೆ ಎಂದು ಕಳೆದ ವರ್ಷ ಕಾರ್ಯಕ್ರಮವೊಂದರಲ್ಲಿ ಘೋಷಿಸಿದ್ದರು. ಇದಾದ ಬಳಿಕ ಹೆಸರು ಬದಲಿಸುವ ಪ್ರಸ್ತಾವವನ್ನು ಕೇಂದ್ರ ಸರಕಾರಕ್ಕೆ ಕಳುಹಿಸಿದ್ದರು. ನೂತನ ಎನ್‌ಡಿಎ ಸರಕಾರ ಈ ಪ್ರಸ್ತಾವಕ್ಕೆ ಅನುಮೋದನೆ ನೀಡಿದೆ. ಈ ವಿಚಾರವನ್ನು ಉತ್ತರಾಖಂಡ ಸಿಎಂ ಕಚೇರಿಯು 'ಎಕ್ಸ್' ಖಾತೆಯಲ್ಲಿ ಖಚಿತಪಡಿಸಲಾಗಿದೆ.

ಬಾಲ್ಯವಿವಾಹ ತಡೆಗೆ ಉನ್ನತ ವ್ಯಾಸಂಗಕ್ಕೆ ನೆರವು : ಅಸ್ಸಾಂ ಸಿಎಂ

ಗುವಾಹಟಿ: ಬಾಲ್ಯ ವಿವಾಹ ತಡೆಗೆ ಅಸ್ಸಾಂ ಸರಕಾರ ವಿನೂತನ ಕ್ರಮ ಕೈಗೊಂಡಿದೆ. "11ನೇ ತರಗತಿಯಿಂದ ಸ್ನಾತಕೋತ್ತರ ಪದವಿ ಕೈಗೊಳ್ಳುವ ವಿದ್ಯಾರ್ಥಿನಿಯರಿಗೆ ಮಾಸಿಕ ವೇತನ ನೀಡಲಿದೆ," ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಘೋಷಿಸಿದ್ದಾರೆ. ಬಾಲ್ಯ ವಿವಾಹ ತಡೆಯುವ ಉದ್ದೇಶದಿಂದ ಇಂಥದ್ದೊಂದು ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ. "'ನಿಜುತ್ ಮೊಯಿನಾ' ಎಂಬ ಯೋಜನೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಇದರಡಿ ಸುಮಾರು 10 ಲಕ್ಷ ಹೆಣ್ಣು ಮಕ್ಕಳಿಗೆ ಉನ್ನತ ವ್ಯಾಸಂಗ ಕೈಗೊಳ್ಳುವಂತೆ ಪ್ರೋತ್ಸಾಹಿಸಲು ಮಾಸಿಕ ವೇತನ ನೀಡಲಾಗುವುದು. ಇದಕ್ಕಾಗಿ ಮುಂದಿನ ಐದು ವರ್ಷಗಳಲ್ಲಿ 1,500 ಕೋಟಿ ರೂ.ಗಳ ಅಗತ್ಯವಿದೆ," ಎಂದು ಶರ್ಮಾ ತಿಳಿಸಿದ್ದಾರೆ.

ಇಟಲಿಯಲ್ಲಿ ಗಾಂಧೀಜಿ ಪುತ್ಥಳಿಗೆ ಖಲಿಸ್ತಾನಿಯರಿಂದ ಹಾನಿ

ರೋಮ್: ಜೂ.13ರಿಂದ ಇಟಲಿಯಲ್ಲಿ ಜರುಗುವ 50ನೇ ಅಧ್ಯಕ್ಷತೆಯ ಜಿ20 ಶೃಂಗಸಭೆಯಲ್ಲಿ ಭಾಗಿಯಾಗಲು ಪ್ರಧಾನಿ ನರೇಂದ್ರ ಮೋದಿ ಅವರು ಸಿದ್ಧತೆಯಲ್ಲಿರುವ ವೇಳೆಯೇ ಇಟಲಿಯ ನಗರವೊಂದರಲ್ಲಿ ಮಹಾತ್ಮ ಗಾಂಧೀಜಿ ಅವರ ಪುತ್ಥಳಿಯನ್ನು ಖಲಿಸ್ತಾನ ಬೆಂಬಲಿಗರು ಹಾನಿಗೊಳಿಸಿದ್ದಾರೆ. ಪುತ್ಥಳಿ ಅನಾವರಣಗೊಳಿಸಿದ ಕೆಲವೇ ಗಂಟೆಗಳಲ್ಲಿ ಈ ದುಷ್ಕೃತ್ಯ ಎಸಗಲಾಗಿದೆ. ಜತೆಗೆ ಪುತ್ಥಳಿ ಸುತ್ತ ವಿವಾದಾತ್ಮಕ ಘೋಷಣೆಗಳನ್ನು ಬರೆಯಲಾಗಿದೆ. "ಪುತ್ಥಳಿ ಹಾನಿಯ ವಿಚಾರವನ್ನು ಇಟಲಿ ಸರಕಾರದ ಗಮನಕ್ಕೆ ತರಲಾಗಿದೆ. ಈ ಬಗ್ಗೆ ತನಿಖೆ ನಡೆಸುವ ಭರವಸೆ ಸಿಕ್ಕಿದೆ," ಎಂದು ವಿದೇಶಾಂಗ ಸಚಿವಾಲಯ ಕಾರ್ಯದರ್ಶಿ ವಿನಯ್ ಮೋಹನ್ ಕ್ವಾತ್ರಾ ಹೇಳಿದ್ದಾರೆ.

ಪದಗ್ರಹಣ ಸಮಾರಂಭದಲ್ಲಿ ಪ್ರಧಾನಿ ಮೋದಿ, ಶಾ, ರಾಜನಾಥ್ ಸಿಂಗ್ ಭಾಗಿ
ಸಂಪುಟದಲ್ಲಿ ಜನಸೇನಾದ ಮೂವರಿಗೆ ಸ್ಥಾನ | ಪವನ್ ಕಲ್ಯಾಣ್ 'ಡಿಸಿಎಂ' ಪಕ್ಕಾ

4ನೇ ಬಾರಿಗೆ ನಾಯ್ಡು ಆಂಧ್ರ ಸಿಎಂ

ವಿಜಯವಾಡ: ತೆಲುಗು ದೇಶಂ ಪಕ್ಷದ (ಟಿಡಿಪಿ) ಮುಖ್ಯಸ್ಥ ಚಂದ್ರಬಾಬು ನಾಯ್ಡು ಅವರು ನಾಲ್ಕನೇ ಬಾರಿಗೆ ಆಂಧ್ರ ಪ್ರದೇಶದ ಮುಖ್ಯಮಂತ್ರಿಯಾಗಿ ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು. ಇದರೊಂದಿಗೆ ಆಂಧ್ರದಲ್ಲಿ ಮತ್ತೊಮ್ಮೆ 'ನಾಯ್ಡು ದರ್ಬಾರ್' ಶುರುವಾಗಿದೆ. ನಾಯ್ಡು ಸಂಪುಟ ಸೇರಿರುವ ಜನಸೇನಾ ಮುಖ್ಯಸ್ಥ ಪವನ್ ಕಲ್ಯಾಣ್ ಅವರು ಉಪಮುಖ್ಯಮಂತ್ರಿ ಆಗುವುದು ನಿಶ್ಚಿತವಾಗಿದೆ.

ವಿಜಯವಾಡ ಹೊರವಲಯದ ಗನ್ನವರಂ ವಿಮಾನ ನಿಲ್ದಾಣ ಬಳಿಯ ಕೇಸರಪಲ್ಲಿ ಐಟಿ ಪಾರ್ಕ್‌ನಲ್ಲಿ ಬುಧವಾರ ನಡೆದ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕೇಂದ್ರ ಸಚಿವರು, ಎನ್‌ಡಿಎ ಮಿತ್ರಪಕ್ಷಗಳ ನಾಯಕರು, ತೆಲುಗು ಮತ್ತು ತಮಿಳು ಚಿತ್ರರಂಗದ ತಾರೆಯರು ಸೇರಿದಂತೆ ನಾನಾ ಕ್ಷೇತ್ರಗಳ ಗಣ್ಯರು ಸಾಕ್ಷಿಯಾದರು.

ನಾಯ್ಡು ಅವರಿಗೆ ರಾಜ್ಯಪಾಲ ಎಸ್. ಅಬ್ದುಲ್ ನಜೀರ್ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ನಾಯ್ಡು ಅವರ ಜತೆಗೆ ಅವರ ಪುತ್ರ ನಾರಾ ಲೋಕೇಶ್, ಜನಸೇನಾ ಮುಖ್ಯಸ್ಥ ಹಾಗೂ ನಟ ಪವನ್ ಕಲ್ಯಾಣ್ ಸೇರಿದಂತೆ ಒಟ್ಟು 24 ಸಚಿವರು ಪ್ರಮಾಣ ವಚನ ಸ್ವೀಕರಿಸಿದರು. ನಾಯ್ಡು ಸಂಪುಟದಲ್ಲಿ 8 ನೂತನ ಶಾಸಕರಿಗೆ ಅವಕಾಶ ನೀಡಲಾಗಿದೆ. ಜನಸೇನಾ ಪಕ್ಷದಿಂದ ಮೂವರು, ಬಿಜೆಪಿಯಿಂದ ಒಬ್ಬರಿಗೆ ಸ್ಥಾನ ಕಲ್ಪಿಸಲಾಗಿದೆ. ಮೂವರು ಮಹಿಳಾ ಶಾಸಕರಿಗೆ ಅವಕಾಶ ಕಲ್ಪಿಸಲಾಗಿದೆ.

ನಾಯ್ಡುಗೆ ಶುಭಕೋರಿದ ಮೋದಿ: "ನಾಯ್ಡು ನೇತೃತ್ವದ ಟಿಡಿಪಿ-ಜನಸೇನಾ-ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವು ಆಂಧ್ರ ಪ್ರದೇಶವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವಲ್ಲಿ ಬದ್ಧವಾಗಿದೆ. ರಾಜ್ಯದ ಯುವ ಜನರ ಆಕಾಂಕ್ಷೆಗಳನ್ನು ಈಡೇರಿಸಲಿದೆ," ಎಂದು ಮೋದಿ 'ಎಕ್ಸ್'ನಲ್ಲಿ ಶುಭ ಕೋರಿದರು. "ಮೋದಿ ಅವರ ಆಶೀರ್ವಾದವು ನಮಗೆ ದೊಡ್ಡ ಶಕ್ತಿ ತುಂಬಿದೆ. ನಮ್ಮ ಸರಕಾರವು ಜನಸ್ನೇಹಿ ಆಡಳಿತ ನೀಡಲಿದೆ," ಎಂದು ನಾಯ್ಡು ಹೇಳಿದರು.

ರಜನಿಕಾಂತ್ ಭಾಗಿ: ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಮುಗಿಯುತ್ತಿದ್ದಂತೆಯೇ ಪ್ರಧಾನಿ ಮೋದಿ ಅವರು ನಾಯ್ಡು ಅವರನ್ನು ತಬ್ಬಿಕೊಂಡು ಶುಭ ಕೋರಿದರು. ನಂತರ ಮೋದಿ ಅವರು ವೇದಿಕೆ ಮೇಲಿದ್ದ ತೆಲುಗು ಮೆಗಾಸ್ಟಾರ್ ಚಿರಂಜೀವಿ ಮತ್ತು ಪವನ್ ಕಲ್ಯಾಣ್ ಅವರಕೈ ಕುಲುಕಿ ಮಾತನಾಡಿಸಿದರು. ತಮಿಳು ಸೂಪರ್ ಸ್ಟಾರ್ ರಜನೀಕಾಂತ್ ಮತ್ತು ಅವರ ಪತ್ನಿ ಲತಾ ಅವರೊಂದಿಗೆ ಸಂಕ್ಷಿಪ್ತ ಸಂಭಾಷಣೆ ನಡೆಸಿದರು.

ಗಣ್ಯರ ಹಾಜರಿ: ಕೇಂದ್ರ ಸಚಿವರಾದ ಅಮಿತ್ ಶಾ, ನಿತಿನ್ ಗಡ್ಕರಿ, ಜೆ.ಪಿ. ನಡ್ಡಾ, ಚಿರಾಗ್ ಪಾಸ್ವಾನ್, ಮಾಜಿ ಕೇಂದ್ರ ಸಚಿವ ವೆಂಕಯ್ಯ ನಾಯ್ಡು ಹಾಗೂ ಎನ್‌ಡಿಎ ಮಿತ್ರಪಕ್ಷಗಳ ನಾಯಕರಾದ ಎನ್‌ಸಿಪಿಯ ಪ್ರಫುಲ್ ಪಟೇಲ್, ಶಿಂಧೆ ಬಣದ ಶಿವಸೇನೆ ನಾಯಕ ಹಾಗೂ ಮಹಾರಾಷ್ಟ್ರ ಸಿಎಂ ಏಕನಾಥ್ ಶಿಂಧೆ, ನಿವೃತ್ತ ಸಿಜೆಐ ಎನ್.ವಿ. ರಮಣ ಸೇರಿದಂತೆ ಅನೇಕ ಗಣ್ಯರು ಭಾಗಿಯಾಗಿದ್ದರು.

ಆಂಧ್ರ ಪ್ರದೇಶದಲ್ಲಿ ಲೋಕಸಭಾ ಚುನಾವಣೆಯ ಜತೆಗೆ 175 ಸದಸ್ಯಬಲದ ವಿಧಾನಸಭೆಗೂ ಮತದಾನ ನಡೆದಿತ್ತು. ಎನ್‌ಡಿಎ ಮೈತ್ರಿಕೂಟವು 164 ಸ್ಥಾನಗಳಲ್ಲಿ ಗೆದ್ದಿದೆ. ಒಟ್ಟು 21 ಲೋಕಸಭೆ ಕ್ಷೇತ್ರಗಳಲ್ಲಿ ಜಯ ಸಾಧಿಸಿದೆ.

ಚಿರಂಜೀವಿ, ಪವನ್ ಕಲ್ಯಾಣ್ ಅವರ ಕೈ ಹಿಡಿದು ಜನರತ್ತ ಕೈ ಬೀಸಿದ ಪ್ರಧಾನಿ ನರೇಂದ್ರ ಮೋದಿ.


ಸಿಎಂ ಚಂದ್ರಬಾಬು ನಾಯ್ಡು ಅವರನ್ನು ಅಭಿನಂದಿಸಿದ ತಮಿಳು ಸೂಪರ್‌ಸ್ಟಾರ್ ರಜನಿಕಾಂತ್.

ಒಡಿಶಾ ಸಿಎಂ ಆಗಿ ಮಾಝಿ ಪ್ರಮಾಣ

ಭುವನೇಶ್ವರ: ಸಂಥಾಲ ಬುಡಕಟ್ಟು ನಾಯಕ ಮೋಹನ್ ಚರಣ್ ಮಾಝಿ ಅವರು ಬುಧವಾರ ಒಡಿಶಾದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಈ ಮೂಲಕ ಒಡಿಶಾದಲ್ಲಿ 24 ವರ್ಷಗಳ ಬಿಜೆಡಿಯ ಆಡಳಿತ ಕೊನೆಗೊಂಡಿದ್ದು, ಪೂರ್ಣ ಬಹುಮತದೊಂದಿಗೆ ಮೊದಲ ಬಾರಿಗೆ ಬಿಜೆಪಿ ಆಡಳಿತ ಶುರುವಾಗಿದೆ. ಭುವನೇಶ್ವರದ ಜನತಾ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಮೋಹನ್ ಚರಣ್ ಮಾಝಿ ಅವರಿಗೆ ರಾಜ್ಯಪಾಲ ರಘುಬರ್ ದಾಸ್ ಅವರು ಪ್ರಮಾಣ ವಚನ ಬೋಧಿಸಿದರು. ಇದೇ ವೇಳೆ ಉಪ ಮುಖ್ಯಮಂತ್ರಿಗಳಾಗಿ ಕೆ.ವಿ. ಸಿಂಗ್ ದಿಯೋ ಮತ್ತು ಪ್ರವತಿ ಪರಿಡಾ ಅವರು ಪ್ರಮಾಣ ವಚನ ಸ್ವೀಕರಿಸಿದರು. ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ ನಾಯಕರು ಹಾಗೂ ಒಡಿಶಾ ಮಾಜಿ ಸಿಎಂ ನವೀನ್ ಪಟ್ನಾಯಕ್ ಸೇರಿದಂತೆ ಹಲವು ಗಣ್ಯರು ಭಾಗಿಯಾಗಿದ್ದರು. ಒಡಿಶಾದಲ್ಲಿ ಬಿಜೆಪಿಯ ಮೊದಲ ಸಿಎಂ ಶ್ರೇಯಕ್ಕೆ ಭಾಜನರಾಗಿರುವ ಮಾಝಿ ಅವರು, "ರಾಜ್ಯದ ಅಭಿವೃದ್ಧಿ ಹಾಗೂ ಜನರ ಕಲ್ಯಾಣಕ್ಕೆ ಶ್ರಮಿಸಲಿದ್ದೇನೆ. ನಮ್ಮ ಸರಕಾರ ಮೊದಲ ದಿನದಿಂದಲೇ ಕಾರ್ಯ ಪ್ರವೃತ್ತವಾಗಲಿದೆ," ಎಂದು ಹೇಳಿದ್ದಾರೆ.

ಪೆಮಾ ಖಂಡು ಮತ್ತೆ ಅರುಣಾಚಲ ಸಿಎಂ?

ಇಟಾನಗರ: ಅರುಣಾಚಲ ಪ್ರದೇಶದ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಪೆಮಾ ಖಂಡು ಅವರನ್ನು ಬುಧವಾರ ಮರು ಆಯ್ಕೆ ಮಾಡಲಾಯಿತು. ಮತ್ತೊಂದು ಅವಧಿಗೆ ರಾಜ್ಯದ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ವೀಕ್ಷಕರಾಗಿ ಆಗಮಿಸಿದ್ದ ಬಿಜೆಪಿ ಹಿರಿಯ ನಾಯಕರಾದ ರವಿಶಂಕರ್ ಪ್ರಸಾದ್ ಮತ್ತು ತರುಣ್ ಚುಗ್ ಅವರ ಸಮ್ಮುಖದಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಪೆಮಾ ಖಂಡು ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅರುಣಾಚಲ ಪ್ರದೇಶದ 60 ಸದಸ್ಯಬಲದ ವಿಧಾನಸಭೆಯಲ್ಲಿ 46 ಸ್ಥಾನಗಳಲ್ಲಿ ಗೆದ್ದು ಬಿಜೆಪಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು.

ಆರೆಸ್ಸೆಸ್ ಈಗ ಅಪ್ರಸ್ತುತ ಎಂದು ಕುಟುಕಿದ ಕೈ

ಭಾರತೀಯ ಸಮಾಜವು ತನ್ನನ್ನು ರಕ್ಷಿಸಿಕೊಳ್ಳುವಷ್ಟು ಸಧೃಢವಾಗಿದೆ

ಹೊಸದಿಲ್ಲಿ: ದೇಶಕ್ಕೆ ಆರೆಸ್ಸೆಸ್ (ರಾಷ್ಟ್ರೀಯ ಸ್ವಯಂ ಸೇವಕ ಸಂಘ) ಅಕ್ಷರಶಃ ಅಪ್ರಸ್ತುತವಾಗಿದೆ ಎಂದು ಕಾಂಗ್ರೆಸ್ ಬುಧವಾರ ಟೀಕಿಸಿದೆ.

"ಸಂವಿಧಾನ, ಪ್ರಜಾಪ್ರಭುತ್ವ ಮತ್ತು ಸಮಾಜಕ್ಕೆ ಆರೆಸ್ಸೆಸ್ ಆಗಲೀ ಅಥವಾ ಅದರ ಮುಖ್ಯಸ್ಥ ಮೋಹನ್ ಭಾಗವತ್ ಅವರ ಅಗತ್ಯವಾಗಲಿ ಬೇಕಾಗಿಲ್ಲ. ಭಾರತದ ಸಮಾಜ ತನ್ನ ಪಾಡಿಗೆ ತಾನು ರಕ್ಷಿಸಿಕೊಳ್ಳುವಷ್ಟು ಸದೃಢವಾಗಿದೆ," ಎಂದು ಕಾಂಗ್ರೆಸ್ ಕುಟುಕಿದೆ.

ಪವನ್ ಖೇರಾ

ಮಣಿಪುರದ ಹಿಂಸಾಚಾರ ಮತ್ತು ಇತ್ತೀಚೆಗೆ ಮುಗಿದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅನುಭವಿಸಿದ ಹಿನ್ನಡೆ ಸೇರಿದಂತೆ ಹಲವು ವಿಷಯಗಳ ಕುರಿತು ಭಾಗವತ್ ನೀಡಿದ ಹೇಳಿಕೆಗಳ ಬೆನ್ನಲ್ಲೇ ಕಾಂಗ್ರೆಸ್ ಪ್ರತಿಕ್ರಿಯಿಸಿದೆ.

"ಮೋಹನ್ ಭಾಗವತ್ ಅವರೇ, ಏನು ಚಿತ್ತಕ್ಕೆಲ್ಲೋ ಅದರ ಫಲವನ್ನೇ ನೀವು ಕೊಯ್ಯು ಮಾಡುತ್ತೀರಿ. ತಪ್ಪು ಈ ನಾಡಿನ ಮಣ್ಣಿನದ್ದಲ್ಲ, ತೋಟಗಾರನದ್ದೇ ಮಹಾ ತಪ್ಪು. ರಾಷ್ಟ್ರ ರಾಜಧಾನಿ ದಿಲ್ಲಿ ಹೊರವಲಯದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಪೊಲೀಸರ ದಬ್ಬಾಳಿಕೆ ನಡೆದಾಗ ನೀವು ಮೌನವಾಗಿ ಉಳಿದಿರಿ. ಉತ್ತರ ಪ್ರದೇಶದ ಹಾಥರಸ್‌ನಲ್ಲಿ ದಲಿತ ಬಾಲಕಿಯ ಅತ್ಯಾಚಾರ ಮತ್ತು ಕೊಲೆ ನಡೆದಾಗ, ಬಿಲ್ಕಿಸ್ ಬಾನೋ ಅತ್ಯಾಚಾರಿಗಳ ಬಿಡುಗಡೆ ಯಾದಾಗ ನೀವು ಒಂದು ಮಾತೂ ಆಡಲಿಲ್ಲ," ಎಂದು ಕಾಂಗ್ರೆಸ್ ನಾಯಕ ಪವನ್ ಖೇರಾ ಅವರು ಸಂಘ ಪರಿವಾರ ಮತ್ತದರ ಮುಖ್ಯಸ್ಥರನ್ನು ಕುಟುಕಿದ್ದಾರೆ.

"ನಿಮ್ಮ ಈ ಮೌನವು ಹಾಗೂ ನರೇಂದ್ರ ಮೋದಿ ಅವರ ವರ್ತನೆಯು ನಿಮ್ಮನ್ನು (ಭಾಗವತ್) ಹಾಗೂ ಸಂಘವನ್ನು ಅಪ್ರಸ್ತುತಗೊಳಿಸಿದೆ. ಅಮಿತ್ ಶಾ ಹಾಗೂ ಬಿಜೆಪಿಯು ನಿಮ್ಮ ಮಾತಿಗೆ ಬೆಲೆ ನೀಡುತ್ತಿಲ್ಲ. ಬಿಜೆಪಿ ನಾಯಕರು ಸಂವಿಧಾನವನ್ನು ಬದಲಾಯಿಸುವ ಬಗ್ಗೆ ಮಾತನಾಡಿದಾಗಲೂ ನೀವು ಮೌನವಾಗಿದ್ದಿರಿ. ಈಗ ಮಾತನಾಡಿ ಏನು ಪ್ರಯೋಜನ?," ಎಂದು 'ಎಕ್ಸ್'ನಲ್ಲಿ ಪವನ್ ಖೇರಾ ಪ್ರಶ್ನಿಸಿದ್ದಾರೆ.

> ಒಂದು ವರ್ಷ ಕಳೆದರೂ ಮಣಿಪುರದಲ್ಲಿ ಶಾಂತಿ ನೆಲೆಸಿಲ್ಲ, ನೂತನ ಕೇಂದ್ರ ಸರಕಾರ ಆದಷ್ಟು ಬೇಗ ಈಶಾನ್ಯ ರಾಜ್ಯದಲ್ಲಿ ಶಾಂತಿ ನೆಲೆಗೊಳಿಸುವ ಸಂಬಂಧ ಬಗೆಹರಿಸಬೇಕು ಎಂದು ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಆಗ್ರಹಿಸಿದ್ದಾರೆ. ಈಗಲಾದರೂ ಪ್ರಧಾನಿ ಮೋದಿ ಮಣಿಪುರಕ್ಕೆ ಭೇಟಿ ನೀಡುವರೇ?
>
> - ಉದ್ಧವ್ ಠಾಕ್ರೆ ಶಿವಸೇನೆ(ಯುಬಿಟಿ) ಮುಖ್ಯಸ್ಥ

72 ಗಂಟೆಗಳಲ್ಲಿ 3 ಉಗ್ರ ದಾಳಿ
ಕಾಶ್ಮೀರದಲ್ಲಿ ಮಿಲಿಟರಿ ಕಾರ್ಯಾಚರಣೆ ಚುರುಕು

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ದೋಡಾ ಮತ್ತು ಕಠುವಾದಲ್ಲಿ ಪ್ರತ್ಯೇಕ ಉಗ್ರ ದಾಳಿಯ ಘಟನೆಗಳು ಸೇರಿದಂತೆ ಕಳೆದ 72 ಗಂಟೆಗಳಲ್ಲಿ ಕಣಿವೆಯಲ್ಲಿ ಮೂರು ಉಗ್ರ ದಾಳಿಗಳು ನಡೆದಿವೆ.

ದೋಡಾ ಜಿಲ್ಲೆಯಲ್ಲಿ ಚೆಕ್‌ಪೋಸ್ಟ್ ಗುರಿಯಾಗಿಸಿ ಪಾಕ್ ಮೂಲದ ಜೈಷ್ ಮೊಹಮ್ಮದ್ ಉಗ್ರ ಸಂಘಟನೆಯ ಅಂಗಸಂಸ್ಥೆ ಕಾಶ್ಮೀರ್ ಟೈಗರ್ಸ್ ದಾಳಿ ನಡೆಸಿದೆ. ಪ್ರತಿಯಾಗಿ ರಾಷ್ಟ್ರೀಯ ರೈಫಲ್ಸ್ ಭದ್ರತಾ ಪಡೆಗಳು ಕಾರ್ಯಾಚರಣೆ ನಡೆಸಿ ಇಬ್ಬರು ಉಗ್ರರನ್ನು ಹತ್ಯೆಗೈದಿವೆ. ಗುಂಡಿನ ಚಕಮಕಿಯಲ್ಲಿ ಸಿಆರ್‌ಪಿಎಫ್ ನ ಒಬ್ಬ ಯೋಧ ಹುತಾತ್ಮರಾಗಿದ್ದು, ಆರು ಮಂದಿ ಗಾಯಗೊಂಡಿದ್ದಾರೆ. ಕಠುವಾದ ಸೈದಾ ಸುಖಲ್ ಗ್ರಾಮದಲ್ಲಿ ಉಗ್ರ ದಾಳಿಗೆ ಸ್ಥಳೀಯರೊಬ್ಬರು ಗಾಯಗೊಂಡಿದ್ದಾರೆ.

ಕಳೆದೊಂದು ವಾರದಲ್ಲಿ ಪಾಕಿಸ್ತಾನದಿಂದ 70 ರಿಂದ 80 ಉಗ್ರರು ಗಡಿ ನುಸುಳಿರುವುದು ಕಣಿವೆಯಲ್ಲಿ ದಾಳಿಗಳು ಹೆಚ್ಚಲು ಕಾರಣ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.

ಕಳೆದ ಭಾನುವಾರ ಕತ್ರಾದಲ್ಲಿ ಯಾತ್ರಾರ್ಥಿಗಳ ಬಸ್ ಗುರಿಯಾಗಿಸಿ ಗುಂಡಿನ ದಾಳಿ ನಡೆಸಿದ್ದ ಉಗ್ರರು 9 ಮಂದಿಯನ್ನು ಹತ್ಯೆಗೈದಿದ್ದರು. ಈ ವೇಳೆ ಬಸ್ ಪ್ರಪಾತಕ್ಕೆ ಉರುಳಿತ್ತು.

ಭಾರತಕ್ಕೆ ಕಾಲಿಟ್ಟ ಹಕ್ಕಿಜ್ವರ?

ಕೋಲ್ಕೊತಾ: ಪಶ್ಚಿಮ ಬಂಗಾಳದಲ್ಲಿ 4 ವರ್ಷದ ಮಗುವಿನಲ್ಲಿ 'ಎಚ್9ಎನ್2' (ಹಕ್ಕಿಜ್ವರ) ಕಾಣಿಸಿಕೊಂಡಿದೆ. ಈ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ದೃಢೀಕರಿಸಿ, ಎಚ್ಚರಿಕೆಯ ಸಂದೇಶ ರವಾನಿಸಿದೆ.

ಪಶ್ಚಿಮ ಬಂಗಾಳದ ಮಗುವಿನ ಶ್ವಾಸಕೋಶದಲ್ಲಿ ತೀವ್ರ ಸೋಂಕು ಕಾಣಿಸಿಕೊಂಡಿದೆ. ಜತೆಗೆ, ಜ್ವರ ಹಾಗೂ ಇತರ ಲಕ್ಷಣಗಳು ಕೂಡ ಇವೆ.

2019ರ ಬಳಿಕ ವಿಶ್ವದಲ್ಲಿ ಕಾಣಿಸಿಕೊಂಡಿರುವ ಹಕ್ಕಿಜ್ವರದ ಮಾನವ ಸೋಂಕಿನ ಎರಡನೇ ಪ್ರಕರಣ ಇದಾಗಿದೆ ಎಂದು ಡಬ್ಲ್ಯುಎಚ್‌ಒ ತಿಳಿಸಿದೆ.

ಲಿಂಗತ್ವ ಸಮಾನತೆ: 129ನೇ ಸ್ಥಾನದಲ್ಲಿ ಭಾರತ

ಹೊಸದಿಲ್ಲಿ: ಜಾಗತಿಕ ಲಿಂಗತ್ವ ಸಮಾನತೆಗೆ ಸಂಬಂಧಿಸಿದ ಸೂಚ್ಯಂಕದಲ್ಲಿ ಭಾರತವು ಎರಡು ಸ್ಥಾನ ಕುಸಿತ ಕಂಡಿದ್ದು, 129ನೇ ಸ್ಥಾನ ಪಡೆದುಕೊಂಡಿದೆ. ಕಳೆದ ವರ್ಷ ಇದು 127ನೇ ಸ್ಥಾನದಲ್ಲಿತ್ತು. ಐಸ್‌ಲೆಂಡ್ ತನ್ನ ಅಗ್ರ ಸ್ಥಾನವನ್ನು ಉಳಿಸಿಕೊಂಡಿದೆ.

ವಿಶ್ವ ಆರ್ಥಿಕ ವೇದಿಕೆಯು (ಡಬ್ಲ್ಯುಇಎಫ್) ಬುಧವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ಫಿನ್‌ಲೆಂಡ್ ಎರಡನೇ ಸ್ಥಾನದಲ್ಲಿದ್ದರೆ, ನಾರ್ವೆ, ನ್ಯೂಜಿಲೆಂಡ್ ಮತ್ತು ಸ್ವೀಡನ್ ಕ್ರಮವಾಗಿ ಮೂರರಿಂದ ಐದನೇ ಸ್ಥಾನದಲ್ಲಿವೆ. ಬ್ರಿಟನ್ 14ನೇ ಸ್ಥಾನ ಮತ್ತು ಅಮೆರಿಕ 43ನೇ ಸ್ಥಾನ ಪಡೆದಿದೆ.

ದಕ್ಷಿಣ ಏಷ್ಯಾದಲ್ಲಿ ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಭೂತಾನ್ ಮತ್ತು ಭಾರತ ಕ್ರಮವಾಗಿ ಮೊದಲ ಐದು ಸ್ಥಾನಗಳನ್ನು ಪಡೆದಿದ್ದರೆ, ಪಾಕಿಸ್ತಾನ ಕೊನೆಯ ಸ್ಥಾನದಲ್ಲಿದೆ.

ಶಿಕ್ಷಣ, ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ಲಿಂಗತ್ವ ಸಮಾನತೆಯಲ್ಲಿ ಸಣ್ಣ ಪ್ರಮಾಣದಲ್ಲಿ ಇಳಿಕೆಯಾಗಿರುವುದರಿಂದ ಭಾರತವು ಕಳೆದ ಸಾಲಿಗಿಂತ ಎರಡು ಸ್ಥಾನಗಳಷ್ಟು ಕುಸಿತ ಕಂಡಿದೆ. ಅದರ ಆರ್ಥಿಕ ಭಾಗವಹಿಸುವಿಕೆ ಮತ್ತು ಅವಕಾಶಗಳಿಗೆ ಸಂಬಂಧಿಸಿದ ಅಂಕಗಳಲ್ಲಿ ಸುಧಾರಣೆ ಕಂಡು ಬಂದಿದೆ ಎಂದು ವರದಿ ಉಲ್ಲೇಖಿಸಿದೆ.

ಕ್ಷಮಾದಾನ ಅರ್ಜಿ ತಿರಸ್ಕರಿಸಿದ ರಾಷ್ಟ್ರಪತಿ
ಪಾಕ್ ಉಗ್ರನಿಗೆ ಗಲ್ಲು ಕಾಯಂ

ಹೊಸದಿಲ್ಲಿ: ಸುಮಾರು 24 ವರ್ಷಗಳ ಹಿಂದೆ ದಿಲ್ಲಿಯ ಕೆಂಪುಕೋಟೆ ಮೇಲೆ ದಾಳಿ ನಡೆಸಿದ್ದ ಪಾಕಿಸ್ತಾನದ ಉಗ್ರ ಮೊಹಮ್ಮದ್ ಆರಿಫ್ ಅಲಿಯಾಸ್ ಅಶ್ಫಾಕ್ ಕ್ಷಮಾದಾನ ಅರ್ಜಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತಿರಸ್ಕರಿಸಿದ್ದಾರೆ.

ಮುರ್ಮು ಅವರು 2022ರ ಜುಲೈ 25ರಂದು ಅಧಿಕಾರ ವಹಿಸಿಕೊಂಡ ನಂತರ ತಿರಸ್ಕರಿಸಿದ ಎರಡನೇ ಕ್ಷಮಾದಾನ ಅರ್ಜಿ ಇದಾಗಿದೆ.

ಕೆಂಪುಕೋಟೆ ಮೇಲೆ ದಾಳಿ ನಡೆಸಿದ್ದ ಪ್ರಕರಣದಲ್ಲಿ ನಿಷೇಧಿತ ಉಗ್ರ ಸಂಘಟನೆ ಲಷ್ಕರ್ ತಯ್ಬಾ ಸದಸ್ಯನಾಗಿದ್ದ ಆರಿಫ್‌ಗೆ 2005ರಲ್ಲಿ ವಿಚಾರಣಾ ಕೋರ್ಟ್ ಶಿಕ್ಷೆ ವಿಧಿಸಿತ್ತು. ಸೆಷನ್ಸ್ ಕೋರ್ಟ್ ಹಾಗೂ ದಿಲ್ಲಿ ಹೈಕೋರ್ಟ್ ಶಿಕ್ಷೆ ಎತ್ತಿ ಹಿಡಿದಿದ್ದವು. ನಂತರ ಅಪರಾಧಿ ಪರ ಸಲ್ಲಿಸಿದ್ದ ಅರ್ಜಿಯನ್ನು 2022ರಲ್ಲಿ ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು.

"ಕೆಂಪುಕೋಟೆ ಮೇಲಿನ ದಾಳಿಯು ದೇಶದ ಏಕತೆ, ಸಮಗ್ರತೆ ಹಾಗೂ ಸಾರ್ವಭೌಮತೆ ಮೇಲೆ ನಡೆದಿರುವ ದಾಳಿಯಾಗಿದೆ," ಎಂದು ಅಭಿಪ್ರಾಯಪಟ್ಟಿದ್ದ ಸುಪ್ರೀಂ ಕೋರ್ಟ್ ಶಿಕ್ಷೆಯನ್ನು ಎತ್ತಿ ಹಿಡಿದಿತ್ತು. ಇದಾದ ಬಳಿಕ ಕ್ಷಮಾದಾನ ಕೋರಿ ಆರಿಫ್ ರಾಷ್ಟ್ರಪತಿಯವರ ಮೊರೆ ಹೋಗಿದ್ದ.

ಡಿಸೆಂಬರ್ 22, 2000ರಂದು ಕೆಂಪುಕೋಟೆ ಮೇಲೆ ದಾಳಿ ನಡೆಸಿದ್ದ ಆರಿಫ್, ಭದ್ರತೆಗೆ ನಿಯೋಜನೆಗೊಂಡಿದ್ದ 7 ಯೋಧರ ಮೇಲೆ ಗುಂಡಿನ ಮಳೆಗರೆದಿದ್ದ. ದಾಳಿಯಲ್ಲಿ ಮೂವರು ಯೋಧರು ಹುತಾತ್ಮರಾಗಿದ್ದರು. ಅಪರಾಧಿ ಪರವಾಗಿ ನಡೆದ ಕೆಲ ದಿನಗಳ ಬಳಿಕ ದಿಲ್ಲಿ ಪೊಲೀಸರು ಬಂಧಿಸಿದ್ದರು.

ಮೋದಿ ನಿಂದನೆ ಬಿಟ್ಟು, ಮುಸ್ಲಿಮರು ಶಿಕ್ಷಣದ ಬಗ್ಗೆ ಹೆಚ್ಚು ಚಿಂತಿಸಲಿ



ಮುಂಬಯಿ: "ಪ್ರಧಾನಿ ನರೇಂದ್ರ ಮೋದಿ ಅವರನ್ನು ನಿಂದಿಸುವುದು ಬಹಳ ಸುಲಭ. ಆದರೆ ಮುಸ್ಲಿಮರು ಹಿಜಾಬ್ ವಿಚಾರ ಬಿಟ್ಟು ಟೆನಿಸ್ ತಾರೆ ಸಾನಿಯಾ ಮಿರ್ಜಾ ಅವರ ಸ್ಕರ್ಟ್‌ನ ಉದ್ದದ ಬಗ್ಗೆ ಫತ್ವಾ ಹೊರಡಿಸುವುದನ್ನು ಬಿಟ್ಟು ಶಿಕ್ಷಣದ ಕುರಿತು ಗಂಭೀರವಾಗಿ ಚಿಂತಿಸಲಿ," ಎಂದು ಹಿಂದಿ ಚಿತ್ರನಟ ನಾಸಿರುದ್ದೀನ್ ಷಾ ಹೇಳಿದ್ದಾರೆ.

ಖಾಸಗಿ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು, "ದೇಶದಲ್ಲಿರುವ ಎಲ್ಲ ಸಮಸ್ಯೆಗಳಿಗೂ ಮೋದಿ ಅವರೇ ಕಾರಣ ಎಂದು ಜನರು ದೂಷಿಸುತ್ತಾರೆ. ಆದರೆ ಮೋದಿ ಪ್ರಧಾನಿಯಾಗಿ ಅಧಿಕಾರಕ್ಕೆ ಬರುವ ಮೊದಲೇ ದೇಶದಲ್ಲಿ ಅನೇಕ ಸಮಸ್ಯೆಗಳಿದ್ದವು," ಎಂದು ಹೇಳಿದ್ದಾರೆ.

"ಕೆಲವು ವಿಚಾರಗಳ ಕುರಿತ ಮುಸ್ಲಿಂ ಮೌಲ್ವಿಗಳ ನಿಲುವುಗಳು ಸಮುದಾಯದ ಹಿತಕ್ಕೆ ಮಾರಕವಾಗಿವೆ. ಹಿಜಾಬ್ ಮತ್ತು ಸಾನಿಯಾ ಮಿರ್ಜಾ ಅವರ ಸ್ಕರ್ಟ್‌ನ ಉದ್ದದ ಕುರಿತು ಅನಗತ್ಯ ವಿಚಾರಗಳ ಕುರಿತು ಚರ್ಚಿಸುವ ಬದಲು ಶಿಕ್ಷಣದ ಬಗ್ಗೆ ಆದ್ಯತೆ ನೀಡಬೇಕು. ಮದರಸಾಗಳ ಬದಲು ಆಧುನಿಕ ಶಿಕ್ಷಣದ ಬಗ್ಗೆ ಗಮನಹರಿಸುವುದು ಒಳಿತು," ಎಂದು ಅಭಿಪ್ರಾಯಪಟ್ಟಿದ್ದಾರೆ.

ಚಂದ್ರನ ಕುಳಿಗೆ ಬಿಹಾರ ಮತ್ತು ಉತ್ತರ ಪ್ರದೇಶದ ಪಟ್ಟಣದ ಹೆಸರು

ಹೊಸದಿಲ್ಲಿ: ಚಂದ್ರನ ಮೇಲಿನ ಎರಡು ಕುಳಿಗಳಿಗೆ ಉತ್ತರ ಪ್ರದೇಶ ಮತ್ತು ಬಿಹಾರ ಮತ್ತು ಪಟ್ಟಣಗಳಾದ 'ಮುರ್ಸಾನ್' ಮತ್ತು 'ಹಿಲ್ಸಾ' ಹೆಸರನ್ನು ನಾಮಕರಣ ಮಾಡಲಾಗಿದೆ. ಇದೇ ವೇಳೆ, ಮತ್ತೊಂದು ಕುಳಿಗೆ ಅಹಮದಾಬಾದ್‌ನ 'ಭೌತಿಕ ಸಂಶೋಧನಾ ಪ್ರಯೋಗಾಲಯ'ದ (ಪಿಆರ್‌ಎಲ್) ಮಾಜಿ ನಿರ್ದೇಶಕ ದೇವೇಂದ್ರ ಲಾಲ್ ಹೆಸರನ್ನು ನಾಮಕರಣ ಮಾಡಲಾಗಿದೆ. ದೇವೇಂದ್ರ ಲಾಲ್ ಅವರು ಖಗೋಳಶಾಸ್ತ್ರಜ್ಞರಾಗಿದ್ದು ಅನೇಕ ಕೊಡುಗೆಯನ್ನು ನೀಡಿದ್ದಾರೆ. ಅಂತಾರಾಷ್ಟ್ರೀಯ ಖಗೋಳವಿಜ್ಞಾನ ಒಕ್ಕೂಟವು ಈ ಹೆಸರುಗಳಿಗೆ ಅನುಮೋದನೆ ನೀಡಿದೆ. ಇದುವರೆಗೂ ಹೆಸರಿಡದ ಕುಳಿಯೊಂದಕ್ಕೆ 'ಲಾಲ್ ಕುಳಿ' ಎಂದು ನಾಮಕರಣ ಮಾಡಲಾಗಿದೆ. ಲಾಲ್ ಅವರು 1972ರಿಂದ 1983ರವರೆಗೆ ಈ ಪ್ರಯೋಗಾಲಯದ ನಿರ್ದೇಶಕರಾಗಿದ್ದರು.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನಿನಿನಿ., ಹೇಮಾವತಿ ಆಣೆಕಟ್ಟು ವಿಭಾಗ, ಗೊರೂರು, ಹಾಸನ ಜಿಲ್ಲೆ

ಟೆಂಡರ್ ಪ್ರಕಟಣೆ ರದ್ದುಪಡಿಸಿರುವ ದಿನಾಂಕ: 11.06.2024

ಈ ಕಛೇರಿಯ ಮೂಲ ಟೆಂಡರ್ 'ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 01/2024-25, Date:06.06.2024 ರಲ್ಲಿ ಪ್ರಕಟಿಸಿರುವ ಕಾಮಗಾರಿಯನ್ನು ಟೆಂಡರ್ ಪ್ರಕಟಣೆಯನ್ನು ತಾಂತ್ರಿಕ ಕಾರಣಗಳಿಂದ ರದ್ದುಪಡಿಸಲಾಗಿರುತ್ತದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಆಣೆಕಟ್ಟು ವಿಭಾಗ, ಕಾನಿನಿನಿ., ಗೊರೂರು

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ Providing and Supplying Man Power to Chief Engineer, Superintending Engineer, Executive Engineer, Assistant Executive Engineer office, Sub-Division No.02, Assistant Executive Engineer office, Sub-Division No.03, Assistant Executive Engineer office, Sub-Division No.12, Maintainence, house keeping of VJNL campus Tumkur for the year 2022-23. AME of Block-I & Block-II in Yettinahole Project Officers and staff quarters for the year 2024-25, Providing Private Vehicle on Rental Basis to the office of Chief Engineer Office VJNL, Yettinahole Project Zone, tumkur for the year 2024-25, Providing Private Vehicle on Rental Basis to the office of Special Land Acquisition Office VJNL, Yettinahole Project Zone, tumkur for the year 2024-25 and Providing 4 seater vehicle to VJNL office Banglore on hire Basis for the year 2024-25 ಕಾಮಗಾರಿಯ ಟೆಂಡರ್ ಗಿಟ್ಟು ಮೊತ್ತ ರೂ.4.20 ರಿಂದ ರೂ.25.06 ಲಕ್ಷಗಳ ವರೆಗಿನ ಕಾಮಗಾರಿಗೆ "ಶೇಕಡಾವಾರು/ ರೂಪಾಯಿ ದರಗಳಲ್ಲಿ" ಏಕ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ, ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ-ಪೋರ್ಟಲ್‌ನಲ್ಲಿ ದಿ:14-06-2024 ರಿಂದ ದಿ: 29-06-2024 ರವರೆಗೆ ವೀಕ್ಷಿಸಬಹುದಾಗಿದೆ. ಟೆಂಡರ್‌ನ ಅಂದಾಜು ಮೊತ್ತ/ ಇ.ಎಂ.ಡಿ/ಟೆಂಡರ್ ಪ್ರೊಸೆಸಿಂಗ್ ಶುಲ್ಕ/ವೇಳಾ ಪಟ್ಟಿ/ ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ಟೆಂಡರ್ ಪ್ರಕಟಣೆ/ ಇತ್ಯಾದಿ ವಿವರಗಳನ್ನು https://kppp.karnataka.gov.in/ ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ-ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816-2201844, ಇಮೇಲ್ ವಿಳಾಸ- eeypd2tmk@gmail.com

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ-590018, ಕರ್ನಾಟಕ, ಭಾರತ

ಕ್ರಮ ಸಂಖ್ಯೆ: ವಿ.ತಾ.ವಿ./ಕೆ/ಸ್ಥಾ/2024-25/ಇ.ಎಸ್.ಟಿ/1130, ದಿನಾಂಕ: 12th June 2024

ಟೆಂಡರ್ ಪ್ರಕಟಣೆ-ದ್ವಿಲಕೋಟೆ ಪದ್ಧತಿ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕುಲಸಚಿವರು, ವಿ.ತಾ.ವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು-2 ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು:ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕಿನ ಕಳಿಯ ಗ್ರಾಮದಲ್ಲಿರುವ ಪ್ರಾದೇಶಿಕ ಕೇಂದ್ರ ಅಭಿವೃದ್ಧಿ ಮತ್ತು ತರಬೇತಿ ಕೇಂದ್ರದಲ್ಲಿ 10.30 ಎಕರೆ ಭೂಮಿಯ ಸರ್ವೆ ನಂ.221/8ರಲ್ಲಿ ಆರ್.ಸಿ.ಸಿ. ಪ್ರಿ-ಕ್ಯಾಸ್ಟ್ ಕಾಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ ಮೊತ್ತ ರೂ.93,79,452/ (ಕೆಲಸ ಸೇರಿ) ಈ ಕಾಮಗಾರಿಗೆ ಇದೇ ತರಹದ 50% ರಷ್ಟು ಕಾಮಗಾರಿಯನ್ನು ನಿರ್ವಹಿಸಿದ ಕುರಿತು ಪ್ರಮಾಣ ಪತ್ರವನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸುವುದು. ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ:12-06-2024 ರಿಂದ ಪಡೆದುಕೊಳ್ಳಬಹುದು.

ಸಹಿ/- ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ-573201
Ph:08172-261640 Email ID:eerdwsd.hsn@gmail.com

ದ್ವಿ-ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಮುಂದೂಡಿಕೆ-ಪ್ರಕಟಣೆ:01/2024-25 ದಿನಾಂಕ: 10.06.2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನರವರಿಂದ 2023-24ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯಡಿ ಅನುಮೋದನೆಯಾದ ಮಲ ತ್ಯಾಜ್ಯ ಸಂಸ್ಕರಣಾ (FSTP) ಘಟಕಗಳ ಕಾಮಗಾರಿಗಳಿಗೆ ಈ ಕೆಳಕಂಡಂತೆ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ದ್ವಿ-ಲಕೋಟೆ ಪದ್ಧತಿ ಕಾಮಗಾರಿಗಳು: ಹೊಳೆನರಸೀಪುರ ತಾಲ್ಲೂಕಿನ 01 ಕಾಮಗಾರಿ (ಸಾಮಾನ್ಯ-01) ಹಾಸನ ತಾಲ್ಲೂಕಿನ 01 ಕಾಮಗಾರಿ (ಸಾಮಾನ್ಯ-01) ಸಕಲೇಶಪುರ ತಾಲ್ಲೂಕಿನ 01 ಕಾಮಗಾರಿ (ಸಾಮಾನ್ಯ-01) ಬೇಲೂರು ತಾಲ್ಲೂಕಿನ 01 ಕಾಮಗಾರಿ (ಸಾಮಾನ್ಯ-01) ಚನ್ನರಾಯಪಟ್ಟಣ ತಾಲ್ಲೂಕಿನ 01 ಕಾಮಗಾರಿ (ಸಾಮಾನ್ಯ-01) ಅರಸೀಕೆರೆ ತಾಲ್ಲೂಕಿನ 01 ಕಾಮಗಾರಿ (ಸಾಮಾನ್ಯ-01) ಅರಕಲಗೂಡು ತಾಲ್ಲೂಕಿನ 01 ಕಾಮಗಾರಿ (ಸಾಮಾನ್ಯ-01) ಈ ಕಾಮಗಾರಿಗಳಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಸ್ಪರ್ಧಾತ್ಮಕ ದರಗಳಲ್ಲಿ e-procurement portal ಅಂತರ್ಜಾಲದಲ್ಲಿ ಕರೆಯಲಾಗಿದ್ದು, ಟೆಂಡರನ್ನು ನಿಗದಿತ ನಮೂನೆಗಳಲ್ಲಿ ದಿನಾಂಕ: 14.06.2024 ರ ಸಂಜೆ 5.30 ರೊಳಗೆ www.e-procurement.karnataka.gov.in ನಲ್ಲಿ Download ಮಾಡಿ ಅವಶ್ಯಕ ಮಾಹಿತಿಗಳೊಂದಿಗೆ ಆನ್‌ಲೈನ್ ಮುಖಾಂತರ ಸಲ್ಲಿಸಬಹುದಾಗಿದೆ. ದಿನಾಂಕ 19.06.2024 ರವರೆಗೆ ಗುತ್ತಿಗೆದಾರರು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 11.06.2024 ರಿಂದ ಪೂರ್ವಾಹ್ನ 11.00 ಗಂಟೆಗೆ ಈ ಕಛೇರಿಯಲ್ಲಿ ಸಮಯ ಪೂರ್ವ ಸಭೆಯನ್ನು ಏರ್ಪಡಿಸಲಾಗಿದೆ. ಆಸಕ್ತ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಸ್ಥಳ:- ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾಸನ ಜಿಲ್ಲಾ ಪಂಚಾಯತ್ ಕಟ್ಟಡ, ಎನ್.ಆರ್ ವೃತ್ತ ಹಾಸನ. ದಿನಾಂಕ: 20.06.2024 ರಂದು ಸಂಜೆ 16-30 ಘಂಟೆಯ ನಂತರ ತಾಂತ್ರಿಕ ಬಿಡ್ ತೆರೆಯಲಾಗುವುದು. ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ದಿನಾಂಕ: 21.06.2024 ರ ಸಂಜೆ 17.00 ಗಂಟೆಯ ನಂತರ ತೆರೆಯಲಾಗುವುದು. ಒಂದು ವೇಳೆ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದಾದರೂ ಒಂದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ

NATIONAL SEEDS CORPORATION LIMITED
(A Government of India Undertaking)
Regional Office: Bangalore - 24. (CIN No.: U 74899 DL 1963 GOI 003913)
Phone : 080 - 2341 5816. E-mail : rm.bangalore@indiaseeds.com, mktg.nscbangalore@gmail.com, Website : www.indiaseeds.com

No. : 7(4)/Tender/Mktg/NSC-BNG/2024-25 Date : 12-06-2024

NOTICE INVITING E-TENDER (NIT)

National Seeds Corporation Limited, Regional Office, Bangalore invites NIT through online for supply of Certified / Truthfully Labelled (TL) Seeds of Red Gram from reputed Seed Producers. For further details visit our Website : www.indiaseeds.com. Tender Document can be Downloaded from Website : https://indiaseeds.enivida.com from 13-06-2024, 13.00 hrs. Last Date for Submission of Online Tender is 23-06-2024 till 14.00 hrs.

Sd/- Regional Manager
National Seeds Corporation, Bangalore.

ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು. ದೂರವಾಣಿ: 080-22032275/22032290

ಸಂಖ್ಯೆ: ಅಪಜೀ 74 ಅಅಸೇ 2024 ದಿನಾಂಕ: 10.06.2024

ಪತ್ರಿಕಾ ಪ್ರಕಟಣೆ

ಕರ್ನಾಟಕ ಸರ್ಕಾರದ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯು 2023-24ನೇ ಸಾಲಿನ ಕರ್ನಾಟಕ ಪರಿಸರ ಪ್ರಶಸ್ತಿಗಳಿಗಾಗಿ ಅರ್ಜಿಗಳನ್ನು/ನಾಮನಿರ್ದೇಶನಗಳನ್ನು ಆಹ್ವಾನಿಸಿ ಸದರಿ ಅರ್ಜಿ/ನಾಮನಿರ್ದೇಶನವನ್ನು ಸಲ್ಲಿಸಲು 30.05.2024 ಅನ್ನು ಕೊನೆಯ ದಿನಾಂಕವನ್ನಾಗಿ ನಿಗದಿಪಡಿಸಲಾಗಿತ್ತು.

ಪ್ರಸ್ತುತ ರಾಜ್ಯದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಚುನಾವಣೆಯು ನಡೆಯುತ್ತಿದ್ದು, ಮಾದರಿ ಚುನಾವಣಾ ನೀತಿ ಸಂಹಿತೆಯು ಜಾರಿಯಲ್ಲಿರುವ ಕಾರಣ ಅರ್ಜಿಗಳನ್ನು ಸ್ವೀಕರಿಸಲು ಇರುವ ಕೊನೆಯ ದಿನಾಂಕವನ್ನು 15.06.2024ರ ಸಾಯಂಕಾಲ 5.00 ಗಂಟೆಯವರೆಗೆ ವಿಸ್ತರಿಸಲಾಗಿರುತ್ತದೆ.

ಸಹಿ/-
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ

ಕರ್ನಾಟಕ ಸರ್ಕಾರ
ಶಿವಮೊಗ್ಗ ಅರಣ್ಯ ವಿಭಾಗ, ಶಿವಮೊಗ್ಗ
ಸಂಖ್ಯೆ: ಎ6/ಜಿಟಿ/ಟೆಂಡರ್/ಸಿಆರ್-22/2024-25 ದಿ: 11.06.2024

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2024-25 ನೇ ಸಾಲಿನಲ್ಲಿ ಅನುದಾನ ನಿರೀಕ್ಷೆ ಮೇರೆಗೆ ಯಾವುದಾದರೂ ಲೆಕ್ಕಶೀರ್ಷಿಕೆಯ ಮತ್ತು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಕಾಮಗಾರಿ ನಿರ್ವಹಿಸಲು ಸ್ಥಳಗಳ ಬದಲಾವಣೆ ಒಳಗೊಂಡಂತೆ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ಎಂಟು ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಕಾಮಗಾರಿ ಮುಂದಿನ ಸಾಲಿನಲ್ಲಿ ನಿರ್ವಹಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2024-25 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೋಂದಾಯಿಸಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸಲು, ನಡುತೋಪು ಪೂರ್ವಭಾವಿ ಕಾಮಗಾರಿ ಹಾಗು ಟೆಂಡರುದಾರರಿಂದ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸಲು ಬೇಕಾದ ಯಂತ್ರೋಪಕರಣ ವಾಹನ ಸವಲತ್ತು ಹೊಂದಿರುವ ಅಗತ್ಯ ಅರಣ್ಯ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರು ಟೆಂಡರನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:18.06.2024 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆಯಬಹುದಾಗಿದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ

ಸಂಪಾದಕೀಯ
EDITORIAL

ನೀಟ್ ಅನ್ಯಾಯ ಸರಿಪಡಿಸಿ

ಎನ್‌ಟಿಎ ಪರೀಕ್ಷಾ ಪಾವಿತ್ರ್ಯತೆ ಕಾಪಾಡಲಿ

[illegible]

ಪಾಂಡವರಿಗೆ ಪ್ರೇರಣೆಯಾದ ಸಂಜಯ

[illegible]



ಅಕ್ಷಯ ಕಥಾ Timeless Tales

[illegible] ನಿರೂಪಣೆ: ಸತೀಶ್

ವಿಕ ಅನುದಿನ ಕಾವ್ಯ

ನೀವು ಜಲ ಫಿರಂಗಿ/ ಸಿಡಿಸಬಹುದು ನಮ್ಮ ಮೈಮೇಲೆ
ನಾವು ಮುಂಗಾರು ಮಳೆಯ/ ಅರ್ಘ್ಯವೆಂದು ಭಾವಿಸುತ್ತೇವೆ
ಏಕೆಂದರೆ ನೀರು ನಮ್ಮ ವೈರಿಯಲ್ಲ

[illegible]

ವ್ಯಾಖ್ಯಾನ: ಡಾ. ಎಚ್.ಎಸ್. ಸತ್ಯನಾರಾಯಣ

ಬತ್ತಲಿಕೆ



[illegible]

ಫೋಕ್ FALLS

ಅಭಿಮಾನಿಯ ಬರ್ಬರ ಹತ್ಯೆ ಆರೋಪದಲ್ಲಿ ಚಾಲೆಂಜಿಂಗ್ ಸ್ಟಾರ್ ನಟ ದರ್ಶನ್ ಬಂಧನವಾಗಿದೆ. ಕನ್ನಡ ಚಿತ್ರರಂಗದಲ್ಲೇ ಇಂಥದ್ದೊಂದು ಪ್ರಕರಣ ದಾಖಲಾಗಿದ್ದು ಇದೇ ಮೊದಲು. ಬಾಲಿವುಡ್ ತಾರೆಯರು ಹಾಗೂ ಉಳಿದ ಚಿತ್ರರಂಗದ ಅನೇಕ ಕಲಾವಿದರ ವಿರುದ್ಧ ಗಂಭೀರ ಪ್ರಕರಣಗಳು ದಾಖಲಾದ ನಿದರ್ಶನಗಳಿವೆ. ಹೀಗಾದಾಗಲೆಲ್ಲ ಆಯಾ ತಾರೆಗಳ ಅಭಿಮಾನಿಗಳಿಗೆ ಆಘಾತವೇ ಆಪ್ಪಳಿಸಿದೆ.

ನಟ ಭಯಂಕರರು

ವಿಕ ಫೋಕಸ್

ಅಚ್ಚುಮೆಚ್ಚಿನ ತಾರೆಗಳೇ ಅಪರಾಧ ಎಸಗಿದಾಗ...

• ಪ್ರಮೋದ ಮೋಹನ ಹೆಗಡೆ

[illegible]

ಕೇಸುಗಳ ಸಾಲು ಸಾಲು 'ದರ್ಶನ'

[illegible]

2011: [illegible]

2018: [illegible]

2023: [illegible]

2024: [illegible]

ಇವರೂ ಕ್ರಿಮಿನಲ್ ಬಲೆಗೆ ಸಿಲುಕಿದವರೇ...

[illegible]

ಸಲ್ಮಾನ್ ಖಾನ್

ಕ್ರಿಮಿನಲ್ ವಿವಾದ: ಕೃಷ್ಣಮೃಗ ಬೇಟೆ ಪ್ರಕರಣ, ಕಾರು ಅಪಘಾತ

[illegible]

ಶಾರುಖ್ ಖಾನ್

ಕ್ರಿಮಿನಲ್ ವಿವಾದ: ಆಸ್ತಿಪಾಸ್ತಿ ಹಾನಿ, ಹಲ್ಲೆ ಪ್ರಕರಣ

[illegible]

ಸಂಜಯ್ ದತ್

ಕ್ರಿಮಿನಲ್ ವಿವಾದ: ಅಕ್ರಮ ಶಸ್ತ್ರಾಸ್ತ್ರ ಹೊಂದಿದ್ದು ಮತ್ತು ಸಂಗ್ರಹ ಪ್ರಕರಣ

[illegible]

ಜಾನ್ ಅಬ್ರಹಾಂ

ಕ್ರಿಮಿನಲ್ ವಿವಾದ: ಅಪಘಾತ ಪ್ರಕರಣ

[illegible]

ಜಿತೇಂದ್ರ

ಕ್ರಿಮಿನಲ್ ವಿವಾದ: ಲೈಂಗಿಕ ದೌರ್ಜನ್ಯ

[illegible]

ಮಾರಿಯಾ ಸುಸೈರಾಜ್

ಕ್ರಿಮಿನಲ್ ವಿವಾದ: ಸಂಗಾತಿಯನ್ನು 300 ತುಣುಕುಗಳಾಗಿ ಕತ್ತರಿಸಿ ಹತ್ಯೆ

[illegible]

ಶೈನ್ ಟಾಮ್ ಚಾಕೊ

ಕ್ರಿಮಿನಲ್ ವಿವಾದ: ಮಾದಕ ವಸ್ತು ದಂಧೆ ಕೇಸ್

[illegible]

ಮೋನಿಕಾ ಬೇಡಿ

ಕ್ರಿಮಿನಲ್ ವಿವಾದ: ನಕಲಿ ಪಾಸ್‌ಪೋರ್ಟ್ ಕೇಸ್, ಭೂಗತ ಲೋಕದ ನಂಟು

[illegible]

ತಾರೆಗಳ ಬಗ್ಗೆ ಅಭಿಮಾನ ಹೇಗಿರಬೇಕು?

[illegible] ಡಾ. ಜಗದೀಶ್ [illegible]

- [illegible]
- [illegible]
- [illegible]
- [illegible]

pramod.hegde@timesgroup.com

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈಗ ನಡೆಯುತ್ತಿರುವುದು ಮತದಾನವಲ್ಲ; ಮತಗಳ ಮಾರಾಟ

ಮತ್ತೊಬ್ಬ ಟಿ.ಎನ್. ಶೇಷನ್‌ಗಾಗಿ ಭಾರತ ಕಾಯುತ್ತಿದೆ!

ಬಿಸಿಲು ಬೆಳದಿಂಗಳು

[illegible] "Through the Broken Glass" [illegible]

[illegible]

ವಿಜಯ ಕರ್ನಾಟಕ
ನಮ್ಮ ಬೆಂಗಳೂರು
ಗುರುವಾರ, 13 ಜೂನ್ 2024
ಇಂದಿನ ತಾಪಮಾನ 21° ಕನಿಷ್ಠ 27° ಗರಿಷ್ಠ
twitter.com/vijaykarnataka · facebook.com/vijaykarnataka · www.vijaykarnataka.com
ವಿಜಯ ಕರ್ನಾಟಕ 25 SINCE 1999 ರಜತ ಸಂಭ್ರಮ ವಿಕ ಸಮಸ್ತ ಕನ್ನಡಿಗರ ಹೆಮ್ಮೆ

ಚರಂಡಿ ಕಾಮಗಾರಿ: ಸಂಚಾರ ನಿರ್ಬಂಧ

ಬೆಂಗಳೂರು: ಚಿಕ್ಕಸಂದ್ರ ಮುಖ್ಯರಸ್ತೆಯ ಹೊಸರೋಡ್ ಜಂಕ್ಷನ್ ಸಮೀಪದ ವಿಜಯನಗರ ರಸ್ತೆಯಲ್ಲಿ ಬಿಬಿಎಂಪಿಯಿಂದ ಚರಂಡಿ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಈ ಭಾಗದಲ್ಲಿ ಜೂ.13ರಿಂದ 27ರವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಹೊಸರೋಡ್ ಜಂಕ್ಷನ್ ಕಡೆಯಿಂದ ವಿಜಯನಗರ ರಸ್ತೆಯ ಕಡೆಗೆ ವಾಹನ ಸಂಚಾರವನ್ನು ಸಂಪೂರ್ಣ ನಿರ್ಬಂಧಿಸಲಾಗಿದೆ. ಚಿಕ್ಕಸಂದ್ರ ಕಡೆಯಿಂದ ವಿಜಯನಗರ, ಎ.ಕೆ.ಕಾಲೋನಿ ಕಡೆಗೆ ಹೋಗುವ ವಾಹನಗಳು ಹೊಂಗೆ ಫಾರಂ, ವೈಟ್ ಫೀಲ್ಡ್ ಕಡೆಯಿಂದ ಸಂಚರಿಸಬಹುದು. ವಿಜಯನಗರ ಮತ್ತು ಎ.ಕೆ.ಕಾಲೋನಿಯಿಂದ ಬರುವ ವಾಹನಗಳು ವಿಜಯನಗರ ಮುಖ್ಯರಸ್ತೆ, ಮುನಿಸಿಂಗ್ ರಸ್ತೆ ಮೂಲಕ ಸಾಗಿ ಹೊಂಗೆ ಫಾರಂ, ವೈಟ್ ಫೀಲ್ಡ್ ಬಿಇಎಂಎಲ್ ಕಡೆಗೆ ಹೋಗಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

ವಿಶೇಷ ರೈಲು ಸಂಚಾರ ರದ್ದು

ಬೆಂಗಳೂರು: ಕೆಲವು ತಾಂತ್ರಿಕ ಕಾರಣಗಳಿಂದಾಗಿ ನೈರುತ್ಯ ರೈಲ್ವೆ 11 ವಿಶೇಷ ರೈಲು ಸೇವೆಯನ್ನು ಮುಂದಿನ ಆದೇಶದವರೆಗೂ ರದ್ದುಗೊಳಿಸಿದೆ. **ರದ್ದಾದ ವಿಶೇಷ ರೈಲುಗಳು:** ಜೂ.16ರಂದು ವಿಶಾಖಪಟ್ಟಣ - ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ (ಎಸ್ಎಂವಿಟಿ), ಬೆಂಗಳೂರು (ರೈ.ಸಂ 08543); ಜೂ.17ರಂದು ಎಸ್ಎಂವಿಟಿ ಬೆಂಗಳೂರು - ವಿಶಾಖಪಟ್ಟಣ (08544); ಜೂ. 21ರಂದು ಸಂತ್ರಗಾಚಿ - ಎಸ್ಎಂವಿಟಿ ಬೆಂಗಳೂರು (08845), ಜೂ. 23ರಂದು ಎಸ್ಎಂವಿಟಿ ಬೆಂಗಳೂರು - ಸಂತ್ರಗಾಚಿ (08846), ಜೂ.19ರಂದು ಎಸ್ಎಂವಿಟಿ ಬೆಂಗಳೂರು - ಮಾಲ್ಡಾ ಟೌನ್ (06565), ಜೂ.22ರಂದು ಮಾಲ್ಡಾ ಟೌನ್ - ಎಸ್ಎಂವಿಟಿ ಬೆಂಗಳೂರು (06566), ಜೂ.18 ಎಸ್ಎಂವಿಟಿ ಬೆಂಗಳೂರು - ಗುವಾಹಟಿ (06521) ಮತ್ತು ಜೂ.22ರಂದು ಗುವಾಹಟಿ - ಎಸ್ಎಂವಿಟಿ ಬೆಂಗಳೂರು (06522) ರೈಲನ್ನು ಮುಂದಿನ ಆದೇಶದವರೆಗೆ ರದ್ದುಪಡಿಸಲಾಗಿದೆ. ಉಳಿದಂತೆ ಗದಗ-ಯಶವಂತಪುರ (06218) ರೈಲನ್ನು ಜೂ.17ರಂದು ಒಂದು ಟ್ರಿಪ್ ಹಾಗೂ ಭಗತ್ ಕಿ ಕೋಠಿ - ಎಸ್ಎಂವಿಟಿ ಬೆಂಗಳೂರು ರೈಲನ್ನು ಜೂ.20, ಜೂ.23, ಜೂ.27 ಮತ್ತು ಜೂ.30 ರಂದು ರದ್ದುಪಡಿಸಲಾಗಿದೆ.

ಬಿಬಿಎಂಪಿ ಆಡಳಿತಾಧಿಕಾರಿಯಾಗಿ ಉಮಾಶಂಕರ್ ಅಧಿಕಾರ ಸ್ವೀಕಾರ

ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಅವರು ಉಮಾಶಂಕರ್ ಅವರಿಗೆ ಹೂಗುಚ್ಛ ನೀಡಿ ಸ್ವಾಗತಿಸಿದರು.

ಬೆಂಗಳೂರು: ಬಿಬಿಎಂಪಿಯಿಂದ ಕೈಗೊಳ್ಳುವ ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು. ಇದರಲ್ಲಿ ಯಾವುದೇ ಕಾರಣಕ್ಕೂ ರಾಜಿಯಾಗಬಾರದೆಂದು ಎಂಜಿನಿಯರ್‌ಗಳಿಗೆ ಸೂಚಿಸಲಾಗುವುದು ಎಂದು ಪಾಲಿಕೆಯ ನೂತನ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್ ಹೇಳಿದರು. ಪಾಲಿಕೆ ಕೇಂದ್ರ ಕಚೇರಿಯಲ್ಲಿ ಬುಧವಾರ 29ನೇ ಆಡಳಿತಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಂಡರೆ, ದೀರ್ಘಕಾಲ ಬಾಳಿಕೆ ಬರುತ್ತವೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಗಮನ ಹರಿಸಬೇಕಿದೆ," ಎಂದರು. "ವಿಶ್ವದ ಪ್ರಮುಖ ನಗರವಾಗಿ ಹೊರಹೊಮ್ಮಿರುವ ಬೆಂಗಳೂರಿನಲ್ಲಿ ಮೂಲಸೌಕರ್ಯಗಳ ಕೊರತೆ ಇದೆ. ನಗರಕ್ಕೆ ಅಗತ್ಯವಿರುವ ಮೂಲಭೂತ ಸೌಲಭ್ಯ ಕಲ್ಪಿಸಿ, ಸಮಸ್ಯೆಗಳನ್ನು ನಿವಾರಿಸಲು ಆದ್ಯತೆ ನೀಡಲಾಗುವುದು. ಇದಕ್ಕೆ ಕೇಂದ್ರ ಸರಕಾರದ ಸಹಕಾರ, ನೆರವು ಬೇಕಿದೆ," ಎಂದು ಹೇಳಿದರು. "ನಗರದ ಅಭಿವೃದ್ಧಿಗಾಗಿ ಹಲವು ಇಲಾಖೆಗಳು ಶ್ರಮಿಸುತ್ತಿವೆ. ಆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವುದು ಬಹಳ ಮುಖ್ಯ. ಆಗ ಪರಿಣಾಮಕಾರಿಯಾಗಿ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗಲಿದೆ. ಮಳೆಗಾಲದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗುತ್ತಿದ್ದು, ಜನರು ಸಮಸ್ಯೆಗಳನ್ನು ಎದುರಿಸುತ್ತಾರೆ. ಬಾಕಿ ಇರುವ 300 ಕಿ.ಮೀ. ಉದ್ದದ ರಾಜಕಾಲುವೆ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿದರೆ, ಪ್ರವಾಹ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬಹುದಾಗಿದೆ," ಎಂದು ತಿಳಿಸಿದರು. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಸುರಳ್ಕರ್ ವಿಕಾಸ್ ಕಿಶೋರ್, ಡಾ. ಕೆ.ಹರೀಶ್ ಕುಮಾರ್, ಶಿವಾನಂದ್ ಕಲ್ಕೆರೆ, ವಲಯ ಆಯುಕ್ತರಾದ ಸ್ನೇಹಲ್, ಆರ್.ಎಲ್.ದೀಪಕ್, ಕರೀಗೌಡ, ರಮೇಶ್, ಪ್ರೀತಿ ಗೆಹ್ಲೋಟ್ ಉಪಸ್ಥಿತರಿದ್ದರು.

ಗಾಂಜಾ ಮಾರಾಟ: ಬಂಧನ

ಬೆಂಗಳೂರು: ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಅರ್ಜುನ್ ಎಂಬ ಆರೋಪಿಯನ್ನು ಬಂಧಿಸಿರುವ ಗೋವಿಂದಪುರ ಠಾಣೆ ಪೊಲೀಸರು 2 ಲಕ್ಷ ರೂ. ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದಾರೆ. ಕೇರಳ ಮೂಲದ ಅರ್ಜುನ್, ಪ್ರೊಫೆಷನಲ್ ಲೇಔಟ್‌ನ ಕಾಲೇಜು ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ. ಚಿಕ್ಕ ಪ್ಯಾಕೆಟ್‌ಗಳಿಗೆ ಗಾಂಜಾ ತುಂಬಿಸಿ ಕಾಲೇಜು ವಿದ್ಯಾರ್ಥಿಗಳು ಹಾಗೂ ಐಟಿ ಬಿಟಿ ಉದ್ಯೋಗಿಗಳಿಗೆ ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ಕಲೆಹಾಕಿ ಅರ್ಜುನ್‌ನನ್ನು ಬಂಧಿಸಿ 6 ಕೆ.ಜಿ. ಗಾಂಜಾ ಜಪ್ತಿ ಮಾಡಲಾಗಿದೆ. ಆತನಿಗೆ ಗಾಂಜಾ ಪೂರೈಸಿದ್ದ ವ್ಯಕ್ತಿ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೊಸ ಕೊಳವೆಬಾವಿ ಪರಿಶೀಲಿಸಲು ಜಲಮಂಡಳಿ ನಿರ್ಧಾರ | ಸೂಚನೆ ಉಲ್ಲಂಘಿಸಿದಲ್ಲಿ ಬಳಕೆಗೆ ನಿರ್ಬಂಧ

ಇಂಗುಗುಂಡಿ ಇದ್ದರಷ್ಟೇ ಬೋರ್!

■ ಬಿ.ಎನ್.ಧನಂಜಯ ಬೆಂಗಳೂರು
dhananjaya.gowda@timesgroup.com

ಸಿಲಿಕಾನ್ ಸಿಟಿಯಲ್ಲಿ ಇನ್ನು ಮುಂದೆ ವೈಯಕ್ತಿಕ ಅಥವಾ ಇನ್ನಿತರೆ ಉದ್ದೇಶದ ಬಳಕೆಗಾಗಿ ಕೊಳವೆಬಾವಿ ಕೊರೆಸುವವರು, ಅವುಗಳಲ್ಲಿನ ನೀರಿನ ಸುಸ್ಥಿತಿ ಕಾಯ್ದುಕೊಳ್ಳಲು ಕಡ್ಡಾಯವಾಗಿ ಇಂಗುಗುಂಡಿ ನಿರ್ಮಿಸಬೇಕಿದೆ.

ಬೆಂಗಳೂರು ನಗರದ ನೀರಿನ ಭವಿಷ್ಯವನ್ನು ಸುಸ್ಥಿರವಾಗಿಸುವ ನಿಟ್ಟಿನಲ್ಲಿ ಮಳೆ ನೀರಿನ ಸಂರಕ್ಷಣೆಗೆ ನಾನಾ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿರುವ ಜಲಮಂಡಳಿ, ಕೊಳವೆಬಾವಿ ಕೊರೆಯಲು ಅನುಮತಿ ಕೋರುವವರಿಗೆ ಕಡ್ಡಾಯವಾಗಿ ಇಂಗುಗುಂಡಿ ನಿರ್ಮಿಸುವಂತೆ ಸೂಚನೆ ನೀಡಿ, ಅನುಮತಿ ನೀಡಲು ಮುಂದಾಗಿದೆ.

ಕಳೆದ ಫೆಬ್ರವರಿ, ಮಾರ್ಚ್, ಏಪ್ರಿಲ್‌ನ ತೀವ್ರ ಬರದಿಂದ ನಗರದಲ್ಲಿ ಅಂತರ್ಜಲ ಮಟ್ಟ ಕುಸಿತದಿಂದ ಸಾಕಷ್ಟು ಕೊಳವೆ ಬಾವಿಗಳು ಬತ್ತಿ ಹೋಗಿದ್ದವು. ಇಂತಹ ಸಮಯದಲ್ಲಿ ನಗರದ 1.40 ಕೋಟಿ ಜನಸಂಖ್ಯೆಗೆ ವ್ಯವಸ್ಥಿತವಾಗಿ ನೀರು ಸರಬರಾಜು ಮಾಡಲು ಬೆಂಗಳೂರು ಜಲಮಂಡಳಿ ಸಾಕಷ್ಟು ಹೆಣಗಾಡಿತು. ಅಲ್ಲದೆ, ಅನಗತ್ಯ ಮತ್ತು ಅನ್ಯ ಉದ್ದೇಶಕ್ಕೆ ಕುಡಿಯುವ ನೀರಿನ ಬಳಕೆ ತಪ್ಪಿಸಲು ಹಲವು ಕ್ರಮಗಳನ್ನೂ ಕೈಗೊಂಡಿತ್ತು.

ಅನುಮತಿ ಕಡ್ಡಾಯ: ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ಅನುಮತಿ ಪಡೆಯದೆ ಅವೈಜ್ಞಾನಿಕವಾಗಿ ಕೊಳವೆಬಾವಿಗಳನ್ನು ಕೊರೆಯುವುದರಿಂದ ಹಾಗೂ ನಿಯಮಗಳನ್ನು ಅನುಸರಿಸದೆ ಕೊರೆಯುವ ಕಾರಣ ನಗರದಲ್ಲಿ ಅಂತರ್ಜಲ ಮಟ್ಟ ಕಡಿಮೆಯಾಗುತ್ತಿದೆ. ಹಾಗಾಗಿ, ವೈಯಕ್ತಿಕ ಅಥವಾ ಇನ್ನಿತರೆ ಬಳಕೆಗೆ ಕೊಳವೆ ಬಾವಿಗಳನ್ನು ಕೊರೆಯುವ ಮುನ್ನ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮ ಹಾಗೂ ನಿಯಂತ್ರಣ) ಅಧಿನಿಯಮ 2011ರ ಕಂಡಿಕೆ 11ರಂತೆ ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ.

ನಗರದಲ್ಲಿ ಕೊಳವೆ ಬಾವಿಯನ್ನು ಕೊರೆಸುವ ಮಾಲೀಕರು ಬೆಂಗಳೂರು ಜಲಮಂಡಳಿ ಜಾಲತಾಣದಲ್ಲಿ ಅನುಮತಿ ಪಡೆಯಲು ಅರ್ಜಿ ಸಲ್ಲಿಸಬೇಕಿದೆ. ಇಂಗು ಗುಂಡಿ ನಿರ್ಮಿಸಲು ಒಪ್ಪಿಗೆ ಸೂಚಿಸಿದ ನಂತರ ಜಲಮಂಡಳಿ ಅನುಮತಿ ನೀಡಲಿದೆ. ಯಾವ ಜಾಗದಲ್ಲಿ ಕೊರೆಯಲು ಅನುಮತಿ ನೀಡಲಾಗುವುದೋ ಅದೇ ಜಾಗದಲ್ಲಿ ಕೊಳವೆಬಾವಿ ಕೊರೆಯಬೇಕಿದೆ. ನಿಯಮ ಉಲ್ಲಂಘಿಸುವವರ ವಿರುದ್ಧ ದೂರು ದಾಖಲಿಸಿ, ಕಾನೂನು ಕ್ರಮ ಜರುಗಿಸಬಹುದಾಗಿದೆ. ಒಂದು ವೇಳೆ ಕೊಳವೆಬಾವಿಗಳನ್ನು ಕೊರೆದ ನಂತರವೂ ಇಂಗು ಗುಂಡಿ ನಿರ್ಮಿಸದಿರುವುದು ಕಂಡು ಬಂದರೆ ಅಂತಹ ಕೊಳವೆಬಾವಿ ಬಳಕೆಗೆ ನಿರ್ಬಂಧ ವಿಧಿಸಲು ಜಲಮಂಡಳಿ ಚಿಂತಿಸಿದೆ.

ಮಳೆ ನೀರು ಸಂರಕ್ಷಣೆ ಮತ್ತು ನಗರದ ನೀರಿನ ಭವಿಷ್ಯವನ್ನು ಸುಸ್ಥಿರವಾಗಿಸುವ ಉದ್ದೇಶದಿಂದ ಕೊಳವೆಬಾವಿ ಕೊರೆಸಲು ಅನುಮತಿ ಕೋರಿದ ಅರ್ಜಿಗಳನ್ನು ಪರಿಶೀಲಿಸಿ, ಹಲವು ಸೂಚನೆ ನೀಡಲಾಗುತ್ತಿದೆ. ಇಂಗುಗುಂಡಿ ನಿರ್ಮಿಸಿಕೊಳ್ಳಬೇಕು, ಮಳೆ ನೀರು ಸಂರಕ್ಷಣೆ ಮಾಡಬೇಕು. ಅನ್ಯ ಉದ್ದೇಶಕ್ಕೆ ಸಂಸ್ಕರಣೆ ನೀರು ಬಳಕೆ ಮಾಡಬೇಕು ಎಂಬ ಸೂಚನೆ ಜತೆಗೆ ಅನುಮತಿ ನೀಡುತ್ತಿದ್ದೇವೆ. ಕೊಳವೆಬಾವಿ ಕೊರೆಸಿದ ನಂತರ ಪರಿಶೀಲನೆ ನಡೆಸಲಿದ್ದು, ಈ ವೇಳೆ ಇಂಗುಗುಂಡಿ ಕಂಡು ಬರದಿದ್ದರೆ ಕ್ರಮ ಕೈಗೊಳ್ಳಲಾಗುವುದು.

- ಡಾ.ವಿ.ರಾಮ್ ಪ್ರಸಾತ್ ಮನೋಹರ್ ಅಧ್ಯಕ್ಷ, ಜಲಮಂಡಳಿ

ಬೇಕಾಬಿಟ್ಟಿ ಬೋರ್‌ವೆಲ್ ಕೊರೆಯಲು ಕಡಿವಾಣ

ಅಂತರ್ಜಲ ಮಟ್ಟ ಹೆಚ್ಚಿಸಲು ಜಲಮಂಡಳಿ ಕ್ರಮ



ಅನಧಿಕೃತ ಫ್ಲೆಕ್ಸ್, ಬ್ಯಾನರ್ 12 ಎಫ್‌ಐಆರ್ ದಾಖಲು

ಜೂ.1ರಿಂದ ಈವರೆಗೆ 1259 ಫ್ಲೆಕ್ಸ್, ಬ್ಯಾನರ್, ಹೋರ್ಡಿಂಗ್ಸ್ ತೆರವು

■ ವಿಕ ಸುದ್ದಿಲೋಕ ಬೆಂಗಳೂರು

ನಗರದಲ್ಲಿ ಅನಧಿಕೃತವಾಗಿ ಅಳವಡಿಸಿರುವ ಫ್ಲೆಕ್ಸ್, ಬ್ಯಾನರ್, ಎಲ್ಇಡಿ ಪರದೆ ಹಾಗೂ ಹೋರ್ಡಿಂಗ್‌ಗಳ ತೆರವು ಕಾರ್ಯಾಚರಣೆಯನ್ನು ತೀವ್ರಗೊಳಿಸಿರುವ ಬಿಬಿಎಂಪಿ, ನಿಯಮ ಉಲ್ಲಂಘಿಸಿದವರ ವಿರುದ್ಧ 12 ಎಫ್‌ಐಆರ್‌ಗಳನ್ನು ದಾಖಲಿಸಿದೆ.

ಜೂ.1ರಿಂದ ಈವರೆಗೆ 1259 ಫ್ಲೆಕ್ಸ್, ಬ್ಯಾನರ್, ಹೋರ್ಡಿಂಗ್‌ಗಳನ್ನು ತೆರವುಗೊಳಿಸಿರುವ ಪಾಲಿಕೆ ಅಧಿಕಾರಿಗಳು, ಪೊಲೀಸ್ ಠಾಣೆಯಲ್ಲಿ 27 ದೂರುಗಳನ್ನು ದಾಖಲಿಸಿದ್ದಾರೆ. 12 ಎಫ್‌ಐಆರ್ ದಾಖಲಾಗಿದೆ.

ಬಿಬಿಎಂಪಿ ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶ ಬೈಲಾದನ್ವಯ ಅಂಗಡಿ-ಮುಂಗಟ್ಟುಗಳು, ವಾಹನ ಸ್ವ ಜಾಹೀರಾತು, ಇನ್ನಿತರೆ ಜಾಹೀರಾತುಗಳನ್ನು ಸೀಮಿತ ಅವಧಿ ಮತ್ತು ಅಳತೆಗೆ ಅನುಮತಿ ನೀಡಲಾಗಿದೆ. ಇದರಲ್ಲಿ ಪಿಪಿಪಿ ಯೋಜನೆಗಳ ಜಾಹೀರಾತುಗಳೂ ಸೇರಿವೆ. ಇವುಗಳನ್ನು ಹೊರತುಪಡಿಸಿ ಇತರೆ ಯಾವುದೇ ವಸತಿ ಪ್ರದೇಶಗಳು, ಖಾಸಗಿ ಸ್ವತ್ತುಗಳಲ್ಲಿ ಹೋರ್ಡಿಂಗ್ಸ್‌ಗಳನ್ನು ಅಳವಡಿಸಿ ವಾಣಿಜ್ಯ ಜಾಹೀರಾತು, ಎಲ್ಇಡಿ ಜಾಹೀರಾತು ಪ್ರದರ್ಶನ, ಸಾರ್ವಜನಿಕ ಮತ್ತು ವೈಯಕ್ತಿಕ ಜಾಹೀರಾತುಗಳು, ಶುಭಾಶಯಗಳು, ಸಭೆ-ಸಮಾರಂಭಗಳ ಕುರಿತ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್, ಭಿತ್ತಿಪತ್ರ, ಬಾವುಟಗಳ ಅಳವಡಿಕೆಯನ್ನು ನಿಷೇಧಿಸಲಾಗಿದೆ.

ಆದಾಗ್ಯೂ, ನಿಯಮ ಉಲ್ಲಂಘಿಸಿ ಫ್ಲೆಕ್ಸ್, ಬ್ಯಾನರ್‌ಗಳನ್ನು ಅಳವಡಿಸುತ್ತಿದ್ದು, ಸುಗಮ ಸಂಚಾರಕ್ಕೆ ಅಡ್ಡಿಯುಂಟಾಗುತ್ತಿದೆ. ಅಲ್ಲದೆ, ನಗರದ ಸೌಂದರ್ಯ, ಪರಿಸರವೂ ಹಾಳಾಗುತ್ತಿದೆ. ಸಾರ್ವಜನಿಕರು ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತುಗಳು ಕಂಡು ಬಂದರೆ 1533 ಅಥವಾ ಜಾಹೀರಾತು ವಿಭಾಗದ ವಾಟ್ಸ್‌ಆ್ಯಪ್ ಸಂಖ್ಯೆ 9480683939ಗೆ ಫೋಟೊ, ವಿಡಿಯೊಗಳನ್ನು ವಿಳಾಸ ಸಹಿತ ಕಳುಹಿಸಿದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಅಧಿಕಾರಿಗಳು ಮನವಿ ಮಾಡಿಕೊಂಡಿದ್ದಾರೆ.

ರೇವ್ ಪಾರ್ಟಿಗೆ ಡ್ರಗ್ಸ್ ಪೂರೈಸಿದ್ದ ನೈಜೀರಿಯಾ ಪೆಡ್ಲರ್

■ ವಿಕ ಸುದ್ದಿಲೋಕ ಬೆಂಗಳೂರು

ಎಲೆಕ್ಟ್ರಾನಿಕ್ ಸಿಟಿ ಸಮೀಪದ ಜಿ.ಆರ್.ಫಾರ್ಮ್‌ಹೌಸ್‌ನಲ್ಲಿ ಇತ್ತೀಚೆಗೆ ನಡೆದ ಡ್ರಗ್ಸ್ 'ರೇವ್ ಪಾರ್ಟಿ'ಗೆ ಡ್ರಗ್ಸ್ ಪೂರೈಸಿದ್ದ ನೈಜೀರಿಯಾ ಪ್ರಜೆಯನ್ನು ಸಿಸಿಬಿ ಪೊಲೀಸರು ಬುಧವಾರ ವಶಕ್ಕೆ ಪಡೆದಿದ್ದಾರೆ.

ಫಾರ್ಮ್‌ಹೌಸ್‌ನಲ್ಲಿ ಮೇ 19ರಂದು ರಾತ್ರಿ ನಡೆದ ರೇವ್ ಪಾರ್ಟಿಗೆ ಮಧ್ಯವರ್ತಿಗಳ ಮೂಲಕ ಸಿಂಥೆಟಿಕ್ ಡ್ರಗ್ಸ್ ಪೂರೈಸಿದ್ದ ಪುರಾವೆಗಳು ಸಿಕ್ಕ ಹಿನ್ನೆಲೆಯಲ್ಲಿ ನೈಜೀರಿಯಾ ಪ್ರಜೆಯನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿ ನೀಡಿದ್ದ ಡ್ರಗ್ಸ್ ಅನ್ನೇ ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ನಟಿ ಸೇರಿದಂತೆ ಹಲವರು ಸೇವಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಆರೋಪಿಗೆ ಆಂಧ್ರದ ಉದ್ಯಮಿ ವಾಸು, ಕೋರಮಂಗಲದ ವೈ.ಎಂ. ಅರುಣ್ ಕುಮಾರ್, ವಿಜಯವಾಡ ಮೂಲದ ನಾಗಬಾಬು, ರಣಧೀರ್ ಬಾಬು, ಮೊಹಮದ್ ಅಬೂಬಕರ್ ಸಿದ್ದಿಕ್ ಜತೆ ನಂಟಿರುವ ಬಗ್ಗೆ ಕೆಲ ಆಧಾರಗಳು ಸಿಕ್ಕಿವೆ. ಆರೋಪಿ ಎಷ್ಟು ಪ್ರಮಾಣದಲ್ಲಿ ಡ್ರಗ್ಸ್ ಪೂರೈಸಿದ್ದ ಎಂಬುದರ ಬಗ್ಗೆ ತನಿಖೆ ಮುಂದುವರಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಹೇಮಾಗೆ ಜಾಮೀನು

ರೇವ್ ಪಾರ್ಟಿಯಲ್ಲಿ ಪಾಲ್ಗೊಂಡು ಡ್ರಗ್ಸ್ ಸೇವಿಸಿ ಜೈಲು ಸೇರಿದ್ದ ತೆಲುಗು ನಟಿ ಹೇಮಾಗೆ ವಿಚಾರಣಾ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಹೇಮಾ ಜಾಮೀನು ಅರ್ಜಿ ಮಾನ್ಯ ಮಾಡಿರುವ ಬೆಂಗಳೂರು ಗ್ರಾಮಾಂತರ 8ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ, ತನಿಖೆಗೆ ಸಹಕರಿಸಬೇಕು. ಸಾಕ್ಷ್ಯಾಧಾರ ನಾಶಪಡಿಸಬಾರದು ಎಂಬ ಷರತ್ತು ವಿಧಿಸಿ ಜಾಮೀನು ನೀಡಿದೆ. ಜಿ.ಆರ್.ಫಾರ್ಮ್‌ನಲ್ಲಿ ಮೇ 19ರಂದು ರಾತ್ರಿ ವಾಸು ಬರ್ತ್ ಡೇ ಪಾರ್ಟಿ ನೆಪದಲ್ಲಿ 'ಸನ್ ಸೆಟ್ ಟು ಸನ್‌ರೈಸ್' ಹೆಸರಿನ ರೇವ್ ಪಾರ್ಟಿ ನಡೆದಿತ್ತು. ದಾಳಿ ವೇಳೆ ಆರೋಪಿಗಳಿಂದ ಒಂದೂವರೆ ಕೋಟಿ ರೂ. ಮೌಲ್ಯದ 15.56 ಗ್ರಾಂ ಎಂಡಿಎಂಎ, 6.2 ಗ್ರಾಂ ಕೊಕೇನ್, 6 ಗ್ರಾಂ ಹೈಡ್ರೊ ಗಾಂಜಾ, ಐದು ಮೊಬೈಲ್, 2 ಕಾರುಗಳನ್ನು ಜಪ್ತಿ ಮಾಡಲಾಗಿತ್ತು.

ಆರೋಪಿಗಳಿಗೆ ಬೇಲ್ ನಿರಾಕರಣೆ

ಹರ್ಷಿಕಾ ಪೂಣಚ್ಚ ಮೇಲೆ ಹಲ್ಲೆ ಪ್ರಕರಣ

ಬೆಂಗಳೂರು: ನಟಿ ಹರ್ಷಿಕಾ ಪೂಣಚ್ಚ, ಭುವನ್ ಮೇಲೆ ಹಲ್ಲೆ ಪ್ರಕರಣದಲ್ಲಿ ಬಂಧನ ಭೀತಿ ಎದುರಿಸುತ್ತಿರುವ ನಾಲ್ವರು ಆರೋಪಿಗಳ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೈಕೋರ್ಟ್ ಬುಧವಾರ ವಜಾಗೊಳಿಸಿದೆ.

ಆರೋಪಿಗಳಾದ ಪರ್ವೇಜ್ ಅಲಿ ಫಹೀಮ್, ದಾನಿಶ್ ಅಲಿ ಪರ್ವೇಜ್, ಅಬ್ದುಲ್ ಗಫೂರ್ ಖಾನ್, ಶಾಬಾಜ್ ಖಾನ್ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಗಳ ಕುರಿತು ನ್ಯಾ. ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ವಾದ-ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಲಯ, "ಪ್ರಕರಣದ ಬಗ್ಗೆ ಇನ್ನೂ ತನಿಖೆ ನಡೆಯುತ್ತಿದೆ. ಈ ಹಂತದಲ್ಲಿ ಆರೋಪಿಗಳಿಗೆ ಜಾಮೀನು ನೀಡಿದರೆ ಅದು ತನಿಖೆಯ ಮೇಲೆ ಪರಿಣಾಮ ಬೀರುತ್ತದೆ ಹಾಗೂ ಸಾಕ್ಷಿಗಳೂ ತೊಂದರೆಯಾಗಲಿದೆ," ಎಂದು ಅಭಿಪ್ರಾಯಪಟ್ಟು ಅರ್ಜಿಯನ್ನು ವಜಾಗೊಳಿಸಿತು.

ಅರ್ಜಿದಾರರ ಪರ ವಕೀಲರು, "ಪ್ರಕರಣದಲ್ಲಿ ಅರ್ಜಿದಾರರನ್ನು ಅನಗತ್ಯವಾಗಿ ಸಿಲುಕಿಸಲಾಗಿದೆ. ಹಾಗಾಗಿ, ನಿರೀಕ್ಷಣಾ ಜಾಮೀನು ಮಂಜೂರು ಮಾಡಬೇಕು. ಜಾಮೀನು ನೀಡಿದರೆ ಆರೋಪಿಗಳ ಮುಂದೆ ಹಾಜರಾಗಿ ತನಿಖೆಗೆ ಎಲ್ಲ ಸಹಕಾರ ನೀಡಲಿದ್ದಾರೆ," ಎಂದರು.

ಆದರೆ, ಅದಕ್ಕೆ ವಿರೋಧ ವ್ಯಕ್ತಪಡಿಸಿದ ಸರಕಾರಿ ವಕೀಲೆ ಕೆ.ಪಿ. ಯಶೋಧಾ, "ಆರೋಪಿಗಳು ನಟಿ ಹರ್ಷಿಕಾ ಪೂಣಚ್ಚ ಭುವನ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆ. ಹಾಗಾಗಿ, ಜಾಮೀನು ನೀಡಬಾರದು," ಎಂದು ಕೋರಿದರು.

ನಟಿ ಹರ್ಷಿಕಾ ಪೂಣಚ್ಚ ಭುವನ್ ಏ.2ರಂದು ರಾತ್ರಿ ವೇಳೆ ಕಾರಿನಲ್ಲಿ ಪುಲಿಕೇಶಿನಗರದ ರೆಸ್ಟೋರೆಂಟ್‌ಗೆ ಹೋದಾಗ ನಾಲ್ವರು ಯುವಕರು ಅಡ್ಡಗಟ್ಟಿ ಬೆದರಿಕೆ ಹಾಕಿದರು ಮತ್ತು ಹಲ್ಲೆ ನಡೆಸಿದ್ದರು ಎಂದು ಆರೋಪಿಸಿದ್ದರು. "ನಾವು ಬೆಂಗಳೂರಿನಲ್ಲಿ ಇದ್ದೇವೆಯೋ ಅಥವಾ ಪಾಕಿಸ್ತಾನದಲ್ಲಿದ್ದೇವೋ ಎಂಬುದು ಅರ್ಥವಾಗಲಿಲ್ಲ. ಕಾನೂನು ಸುವ್ಯವಸ್ಥೆ ಸರಿ ಇಲ್ಲ" ಎಂದು ಹರ್ಷಿಕಾ ಆರೋಪಿಸಿದ್ದರು. ಬಳಿಕ ಏ.15ರಂದು ನಗರದ ಪೊಲೀಸ್ ಆಯುಕ್ತರನ್ನು ಭೇಟಿ ಮಾಡಿ ದೂರು ಸಲ್ಲಿಸಿದ್ದರು.

ಬಿಟ್ ಕಾಯಿನ್ ಅಕ್ರಮ: ನಲಪಾಡ್ ವಿಚಾರಣೆ

■ ವಿಕ ಸುದ್ದಿಲೋಕ ಬೆಂಗಳೂರು

ಬಹುಕೋಟಿ ಬಿಟ್ ಕಾಯಿನ್ ಅಕ್ರಮದ ಸಂಬಂಧ ಎಸ್ಐಟಿ ಅಧಿಕಾರಿಗಳು ರಾಜ್ಯ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಮೊಹಮ್ಮದ್ ನಲಪಾಡ್ ವಿಚಾರಣೆ ನಡೆಸಿದರು.

ಬಿಟ್ ಕಾಯಿನ್ ಪ್ರಕರಣದ ಪ್ರಮುಖ ಆರೋಪಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯೊಂದಿಗೆ ನಂಟು ಹೊಂದಿದ್ದ ಆರೋಪದಡಿ ವಿಚಾರಣೆಗೆ ಬರುವಂತೆ ಎಸ್ಐಟಿ ಅಧಿಕಾರಿಗಳು ನಲಪಾಡ್‌ಗೆ ನೋಟಿಸ್ ಜಾರಿ ಮಾಡಿದ್ದರು. ಹೀಗಾಗಿ, ಬುಧವಾರ ಸಿಐಡಿ ಕಚೇರಿಗೆ ಬಂದ ನಲಪಾಡ್ ಅವರನ್ನು ಅಧಿಕಾರಿಗಳು ಎರಡು ತಾಸಿಗೂ ಹೆಚ್ಚು ಕಾಲ ವಿಚಾರಣೆ ಮಾಡಿದರು.

ಸಿಐಡಿಯ ಇ-ಪ್ರೊಕ್ಯೂರ್‌ಮೆಂಟ್ ಜಾಲತಾಣವನ್ನು ಹ್ಯಾಕ್ ಮಾಡಿ 1 ಕೋಟಿ ರೂ. ವಂಚಿಸಿದ್ದ ಆರೋಪದಡಿ ದಾಖಲಾಗಿರುವ ಪ್ರಕರಣ ಸಂಬಂಧ ನಲಪಾಡ್ ವಿಚಾರಣೆಗೆ ಹಾಜರಾಗಿದ್ದರು. ಬೆಂಗಳೂರಿನ ಕಾಟನ್‌ಪೇಟೆ ಠಾಣೆಯಲ್ಲಿ ದಾಖಲಾಗಿದ್ದ ಹ್ಯಾಕಿಂಗ್ ಪ್ರಕರಣದಲ್ಲಿ ಶ್ರೀಕಿ ಜತೆ ನಲಪಾಡ್ ವ್ಯವಹಾರಿಕ ಸಂಬಂಧ ಹೊಂದಿದ್ದ ಅನುಮಾನದಲ್ಲಿ ಅವರ ವಿಚಾರಣೆ ನಡೆಸಲಾಗಿದೆ ಎಸ್ಐಟಿ ಮೂಲಗಳು ಹೇಳಿವೆ.

2018ರಲ್ಲಿ ನಡೆದಿದ್ದ ವಿದ್ವತ್ ಎಂಬುವರ ಕೊಲೆ ಯತ್ನ ಪ್ರಕರಣದಲ್ಲಿ ನಲಪಾಡ್ ಜತೆ ಶ್ರೀಕಿ ಸಹ ಆರೋಪಿಯಾಗಿದ್ದ. ಆಗ ಈ ಇಬ್ಬರೂ ಪರಸ್ಪರ ಪರಿಚಿತರಾಗಿದ್ದರು. ಆಪ್ತಸ್ನೇಹಿತರಾದ ನಲಪಾಡ್ ಮತ್ತು ಶ್ರೀಕಿ ನಡುವೆ ಹಣಕಾಸು ವ್ಯವಹಾರವಿತ್ತಾ? ಸಿಐಡಿಯ ಜಾಲತಾಣ ಹ್ಯಾಕ್ ಮಾಡಿದ ಪ್ರಕರಣದಲ್ಲಿ ನಲಪಾಡ್ ಪಾತ್ರ ಇತ್ತಾ ಎಂಬ ಬಗ್ಗೆ ವಿಚಾರಣೆ ನಡೆಸಲಾಯಿತು. ಮತ್ತೆ ವಿಚಾರಣೆಯ ಅಗತ್ಯ ಎದ್ದರೆ ಬರಬೇಕೆಂದು ಅವರಿಗೆ ಸೂಚಿಸಿ ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಹಳದಿ ಮಾರ್ಗದಲ್ಲಿ ಇಂದು ಟ್ರಯಲ್ ರನ್?

■ ವಿಕ ಸುದ್ದಿಲೋಕ ಬೆಂಗಳೂರು

ಆರ್.ವಿ.ರಸ್ತೆ- ಬೊಮ್ಮಸಂದ್ರ (ಹಳದಿ ಮಾರ್ಗ) ನಡುವಿನ ನಮ್ಮ ಮೆಟ್ರೊ ಮಾರ್ಗದಲ್ಲಿ ಪೂರ್ಣ ಪ್ರಮಾಣದ ಪ್ರಾಯೋಗಿಕ ಸಂಚಾರ ಗುರುವಾರ ಆರಂಭವಾಗುವ ನಿರೀಕ್ಷೆ ಇದೆ.

ಜೂ.7ರಂದು ಆರ್. ವಿ. ರಸ್ತೆ-ಬೊಮ್ಮಸಂದ್ರ ಮಾರ್ಗದಲ್ಲಿ ಪ್ರಾಯೋಗಿಕ ಸಂಚಾರ ಆರಂಭಿಸಲು ಬಿಎಂಆರ್‌ಸಿಎಲ್ ಮುಂದಾಗಿತ್ತು. ಆದರೆ, ಹೊಸ ತಂತ್ರಾಂಶ ಅಪ್‌ಲೋಡ್ ಮಾಡುವುದು ತಡವಾದ ಕಾರಣ ಅದು ಸಾಧ್ಯವಾಗಲಿಲ್ಲ. ಇದೀಗ ಜೂ.13ರಂದು ಆರ್. ವಿ. ರಸ್ತೆ-ಬೊಮ್ಮಸಂದ್ರ ಸಂಪೂರ್ಣ ಮಾರ್ಗದಲ್ಲಿ ಪ್ರಾಯೋಗಿಕ ಸಂಚಾರ ಆರಂಭಿಸಲಿದೆ ಎಂದು ಬಿಎಂಆರ್‌ಸಿಎಲ್ ಮೂಲಗಳು ತಿಳಿಸಿವೆ.

"ಫೆ.20ರಂದು ಚೀನಾದಿಂದ ಚಾಲಕರಹಿತ ರೈಲಿನ ಆರು ಬೋಗಿಗಳ ಮೊದಲ ಸೆಟ್ ಹೆಬ್ಬಗೋಡಿ ಮೆಟ್ರೊ ಡಿಪೋ ತಲುಪಿತ್ತು. ಸದ್ಯ ಚಾಲಕ ರಹಿತ ರೈಲುಗಳ ಮುಖ್ಯ ಪರೀಕ್ಷೆಯಾದ ಸಿಗ್ನಲಿಂಗ್ ಪರೀಕ್ಷೆ ಮುಗಿದಿದೆ. ಇದೀಗ, ಕೋಚ್‌ಗಳು ಸ್ಟ್ಯಾಟಿಕ್ ಮತ್ತು ಎಲೆಕ್ಟ್ರಿಕಲ್ ನೆಟ್‌ವರ್ಕ್ ಪರೀಕ್ಷೆಗೆ ಒಳಗಾಗುತ್ತಿವೆ. ಅವುಗಳನ್ನು ಶೀಘ್ರದಲ್ಲೇ ಮುಖ್ಯ ಪರೀಕ್ಷೆಗೆ ಒಳಪಡಿಸಲಾಗುವುದು" ಎಂದು ಯೋಜನೆಯ ಭಾಗವಾಗಿರುವ ಅಧಿಕಾರಿಗಳು ತಿಳಿಸಿದ್ದಾರೆ. »12

ಬನಶಂಕರಿ ಹುಂಡಿಯಲ್ಲಿ 45 ಲಕ್ಷ ಹಣ ಸಂಗ್ರಹ

■ ವಿಕ ಸುದ್ದಿಲೋಕ ಬೆಂಗಳೂರು

ನಗರದ ಬನಶಂಕರಿ ದೇವಾಲಯದಲ್ಲಿ ಬುಧವಾರ ಹುಂಡಿಗಳ ಎಣಿಕೆ ಕಾರ್ಯ ನಡೆದಿದ್ದು, ಕೇವಲ 36 ದಿನಗಳಲ್ಲಿ 45.61 ಲಕ್ಷ ರೂ.ಗಳಿಗೂ ಅಧಿಕ ಕಾಣಿಕೆ ಸಂಗ್ರಹವಾಗಿದೆ.

ಇತ್ತೀಚೆಗೆ ಹಬ್ಬ ಹರಿದಿನಗಳಿಲ್ಲ. ಆದರೂ, ದೇವಾಲಯದಲ್ಲಿ ದಿನದಿಂದ ದಿನಕ್ಕೆ ಭಕ್ತರ ಸಂಖ್ಯೆ ಹೆಚ್ಚುತ್ತಿದ್ದು, ವಿಶೇಷ ದಿನಗಳು ಮಾತ್ರವಲ್ಲದೆ ಸಾಮಾನ್ಯ ದಿನಗಳಲ್ಲೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಈ ಬಾರಿ ಒಂದು ತಿಂಗಳು ಆರು ದಿನಗಳಲ್ಲೇ ದೇವಾಲಯದಲ್ಲಿನ ಎಲ್ಲಾ 13 ಹುಂಡಿಗಳು ತುಂಬಿದ್ದವು. ಈ ಹಿನ್ನೆಲೆಯಲ್ಲಿ ಹುಂಡಿಗಳನ್ನು ತೆರೆದು ಕಾಣಿಕೆ ಹಣ ಎಣಿಕೆ ಮಾಡಲಾಯಿತು.

ನೋಟುಗಳ ಮೂಲಕ 43,90,151 ರೂ. ಹಾಗೂ ನಾಣ್ಯಗಳ ಮೂಲಕ 1,71,115 ರೂ. ಸೇರಿ ಒಟ್ಟು 45,61,266 ರೂ. ಕಾಣಿಕೆ ಸಂಗ್ರಹವಾಗಿದೆ ಎಂದು ಬನಶಂಕರಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿ ತಿಳಿಸಿದ್ದಾರೆ. ಈ ಹಿಂದೆ ಮೇ 6ರಂದು ಹುಂಡಿಗಳನ್ನು ತೆರೆಯಲಾಗಿತ್ತು. ಆಗ 44.04 ಲಕ್ಷಕ್ಕೂ ಅಧಿಕ ಕಾಣಿಕೆ ಸಂಗ್ರಹವಾಗಿತ್ತು.

102 ಗ್ರಾಂ ಚಿನ್ನ: ದೇವಾಲಯದ ಹುಂಡಿಗಳಲ್ಲಿ 102 ಗ್ರಾಂ 180 ಮಿಲಿಗ್ರಾಂ ಚಿನ್ನ ಹಾಗೂ 501 ಗ್ರಾಂ ಬೆಳ್ಳಿ ಸಂಗ್ರಹವಾಗಿದೆ. 500 ರೂ. ಮುಖಬೆಲೆಯ 3274 ನೋಟುಗಳು, 200 ರೂ.ನ 1085 ನೋಟುಗಳು, 100 ರೂ. ಮುಖಬೆಲೆಯ 13,141 ನೋಟುಗಳು, 50 ರೂ. ಮುಖಬೆಲೆಯ 8334 ನೋಟುಗಳು ಬಂದಿವೆ. 20 ರೂ. ಮುಖಬೆಲೆಯ 22,808 ನೋಟುಗಳು, 10, 5, 2 ಹಾಗೂ 1 ರೂ. ನೋಟು ಹಾಗೂ ನಾಣ್ಯಗಳು ಸಂಗ್ರಹವಾಗಿವೆ.

ಬನಶಂಕರಿ ದೇಗುಲದಲ್ಲಿ ಹುಂಡಿ ಎಣಿಕೆ ಕಾರ್ಯ ನಡೆಯಿತು

ವಿದೇಶಿ ಕರೆನ್ಸಿಗಳು

ಕೇವಲ ನೋಟು, ನಾಣ್ಯಗಳಲ್ಲದೆ, ಈ ಬಾರಿ ಫಿಲಿಪ್ಪೈನ್ಸ್, ಅಮೆರಿಕದ ಕರೆನ್ಸಿಗಳು ಕೂಡ ಸಂಗ್ರಹವಾಗಿವೆ.

ಕಾರ್ಗೋ ಟ್ರಕ್‌ಗಳಿಂದ ವಾರ್ಷಿಕ 20 ಕೋಟಿ ರೂ. ಆದಾಯ ನಿರೀಕ್ಷೆ | 6 ತಿಂಗಳಲ್ಲಿ ನಿಗಮ ಗಳಿಸಿದ್ದು ಕೇವಲ 10 ಲಕ್ಷ ರೂ. ಆದಾಯ

ಆರಂಭದಲ್ಲಿಯೇ ಮುಗ್ಗರಿಸಿದ ನಮ್ಮ ಕಾರ್ಗೋ ಸೇವೆ

■ ರಾಯಸಾಬ್ ಅನಸಾರಿ ಬೆಂಗಳೂರು
c-rayasab.anasari@timesgroup.com

ಕೆಎಸ್ಆರ್‌ಟಿಸಿಯ ನಮ್ಮ ಕಾರ್ಗೋ ಸೇವೆ ನಿರೀಕ್ಷಿತ ಆದಾಯ ತಂದುಕೊಡುವಲ್ಲಿ ವಿಫಲವಾಗಿದೆ. ಮೊದಲ ಹಂತದಲ್ಲಿ 20 ಕಾರ್ಗೋ ಟ್ರಕ್‌ಗಳ ಸೇವೆಯಿಂದ ವಾರ್ಷಿಕವಾಗಿ 20 ಕೋಟಿ ರೂ. ಆದಾಯ ನಿರೀಕ್ಷಿಸಿದ್ದ ನಿಗಮಕ್ಕೆ ಮೊದಲ ಆರು ತಿಂಗಳಲ್ಲಿ 10.29 ಲಕ್ಷ ರೂ. ಆದಾಯ ಮಾತ್ರ ಸಿಕ್ಕಿದೆ.

ಈ ಹಿಂದೆ ಕೆಎಸ್ಆರ್‌ಟಿಸಿ ಬಸ್‌ಗಳಲ್ಲಿ ಸಣ್ಣ ಪ್ರಮಾಣದ ಕಾರ್ಗೋ ಸೇವೆ ಒದಗಿಸಲಾಗುತ್ತಿತ್ತು. ಇದರಿಂದ ನಿಗಮಕ್ಕೆ ಉತ್ತಮ ಆದಾಯವೂ ಸಿಗುತ್ತಿತ್ತು. ಆದ್ದರಿಂದ ಈ ಸೇವೆಯನ್ನು ಮತ್ತಷ್ಟು ವ್ಯವಸ್ಥಿತವಾಗಿ ಮತ್ತು ಸಮರ್ಪಕವಾಗಿ ಒದಗಿಸಿದರೆ ಹೆಚ್ಚಿನ ಆದಾಯ ಗಳಿಸಬಹುದು ಎಂದು ಯೋಚಿಸಿ, ಕಳೆದ ಡಿ. 23ರಂದು 6 ಟನ್ ಸಾಮರ್ಥ್ಯದ 23 ಕಾರ್ಗೋ ಟ್ರಕ್‌ಗಳೊಂದಿಗೆ 'ನಮ್ಮ ಕಾರ್ಗೋ' ಸೇವೆ ಆರಂಭಿಸಲಾಗಿತ್ತು. 2024ರ ಡಿ.23ರಿಂದ ಮೇ ಅಂತ್ಯದವರೆಗೆ 10,29,687 ರೂ. ಆದಾಯ ಗಳಿಸಲು ಸಾಧ್ಯವಾಗಿದೆ. ಆರಂಭದಲ್ಲಿಯೇ ಮುಗ್ಗರಿಸಿರುವ ಕಾರ್ಗೋ ಸೇವೆಯಿಂದ ಇನ್ನು ಆರು ತಿಂಗಳಲ್ಲಿ ನಿರೀಕ್ಷಿತ ಆದಾಯದ ಗುರಿ ತಲುಪಲು ಸಾಧ್ಯವೇ? ಎಂಬ ಪ್ರಶ್ನೆ ಮೂಡಿದೆ.

ಬೇಡಿಕೆ ಕಡಿಮೆ: ರಾಜ್ಯದಲ್ಲಿ ಖಾಸಗಿ ಕಂಪನಿಗಳ ಕಾರ್ಗೋ ಸೇವೆಗೆ ಹೆಚ್ಚಿನ ಬೇಡಿಕೆ ಇದೆ. ಈ ಹಿನ್ನೆಲೆಯಲ್ಲಿ ಕಾರ್ಗೋ ಸೇವೆಗೆ ಕೆಎಸ್ಆರ್‌ಟಿಸಿ ಪರ್ಯಾಯ ಆದಾಯ ಮೂಲ ಮಾಡಿಕೊಂಡಿದ್ದು, ಅದಕ್ಕಾಗಿ 6 ಟನ್ ಸಾಮರ್ಥ್ಯದ 20 ಟ್ರಕ್‌ಗಳನ್ನು ಖರೀದಿಸಿ ಕೊರಿಯರ್ ಮತ್ತು ಪಾರ್ಸಲ್ ಸೇವೆ ಆರಂಭಿಸಿತ್ತು. ಒಂದು ಟ್ರಕ್‌ಗೆ 22 ಲಕ್ಷ ರೂ. ನಷ್ಟು ವ್ಯಯಿಸಿದೆ. ಇದರಲ್ಲಿ 5 ಟ್ರಕ್‌ಗಳು ಬೆಂಗಳೂರು ಮತ್ತು ಉಳಿದವು ಜಿಲ್ಲೆಗಳಿಂದರಂತೆ ಸೇವೆ ಆರಂಭಿಸಿವೆ. ಆದರೆ, ಟ್ರಕ್‌ಗಳ ಸಾಮರ್ಥ್ಯ ಹೆಚ್ಚಿರುವ ಕಾರಣಕ್ಕೆ ಬೇಡಿಕೆ ಕಡಿಮೆಯಿದೆ ಎಂದು ಹೇಳಲಾಗುತ್ತಿದೆ.

ನಿಗಮದ ಆಂತರಿಕ ಕೆಲಸಕ್ಕೆ ಹೆಚ್ಚು ಬಳಕೆ: "ಕೆಎಸ್ಆರ್‌ಟಿಸಿಯ 14 ವಿಭಾಗಗಳಿಗೆ ಒಂದೊಂದು ಟ್ರಕ್‌ಗಳನ್ನು ಒದಗಿಸಲಾಗಿದ್ದು, ಆಯಾ ಜಿಲ್ಲೆಯಲ್ಲಿ ಬರುವ ಬೇಡಿಕೆಯಂತೆ ಕೊರಿಯರ್ ಮತ್ತು ಪಾರ್ಸಲ್ ಸೇವೆ ಒದಗಿಸುತ್ತಿವೆ. ಇದಕ್ಕಿಂತ ಹೆಚ್ಚಾಗಿ ಟ್ರಕ್‌ಗಳು ನಿಗಮದ ಆಂತರಿಕ ಕೆಲಸಕ್ಕೆ ಹೆಚ್ಚು ಬಳಕೆಯಾಗುತ್ತಿವೆ. ಪಾರ್ಸಲ್ ಸೇವೆ ಇಲ್ಲದ ಸಮಯದಲ್ಲಿ ನಿಗಮದ ಸ್ಟೋರ್‌ನಿಂದ ಬೇರೆ ಬೇರೆ ಪ್ರದೇಶಕ್ಕೆ ಟೈಯರ್‌ಗಳು, ಟ್ಯೂಬ್‌ಗಳು, ಸ್ಪ್ರಿಂಗ್, ಎಂಜಿನ್ ಆಯಿಲ್ ಸೇರಿದಂತೆ ವಿವಿಧ ಸಾಮಗ್ರಿಗಳನ್ನು ಸಾಗಿಸಲು ಬಳಸಿಕೊಳ್ಳಲಾಗುತ್ತಿದೆ. ಇನ್ನು ನಮ್ಮ ಕಾರ್ಗೋ ಸೇವೆ ಒದಗಿಸಲು ಗ್ರಂಥಾಲಯ ಇಲಾಖೆ, ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದೊಂದಿಗೆ ಮಾತುಕತೆ ನಡೆದಿದ್ದು, ಶೀಘ್ರ ತೀರ್ಮಾನವಾಗಲಿದೆ," ಎಂದು ಕೆಎಸ್ಆರ್‌ಟಿಸಿ ಅಧಿಕಾರಿಗಳು ತಿಳಿಸಿದರು.

ಎಲ್ಲೆಲ್ಲಿ ಬಳಕೆ?

"ಕಳೆದ ಆರು ತಿಂಗಳಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ), ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್), ಚುನಾವಣಾ ಆಯೋಗ (ಇಸಿಐ) ವಿವಿಧ ಕಾರ್ಯಕ್ಕೆ ಕೆಎಸ್ಆರ್‌ಟಿಸಿಯ ಕಾರ್ಗೋ ಸೇವೆಯನ್ನು ಬಳಸಿಕೊಂಡಿವೆ. ಪ್ರಶ್ನೆ ಪತ್ರಿಕೆ ಮತ್ತು ಪರೀಕ್ಷೆಗೆ ಸಂಬಂಧಿಸಿದ ಅಗತ್ಯ ವಸ್ತುಗಳನ್ನು ಸಾಗಿಸಲು ಕೆಇಎ ಈ ಸೇವೆ ಬಳಸಿಕೊಳ್ಳುತ್ತಿದೆ. ಕೆಎಂಎಫ್ ತನ್ನ ಹಾಲಿನ ಉತ್ಪನ್ನಗಳನ್ನು ಸಾಗಿಸಲು ಸೇವೆ ಬಳಸಿಕೊಂಡಿದೆ. ಲೋಕಸಭೆ ಚುನಾವಣೆ ಸಮಯದಲ್ಲಿ ಚುನಾವಣಾ ಆಯೋಗವು, ಇವಿಎಂ ಯಂತ್ರಗಳನ್ನು ಬೇರೆ ಬೇರೆ ಕಡೆಗೆ ಸಾಗಿಸಲು ಕಾರ್ಗೋ ಸೇವೆ ಪಡೆದಿದೆ. ಸದ್ಯ ಆರಂಭವಷ್ಟೇ, ಮುಂದೆ ಕಾರ್ಗೋ ಸೇವೆಗೆ ಹೆಚ್ಚಿನ ವೇಗ ಸಿಗಲಿದೆ," ಎಂದು ಕೆಎಸ್ಆರ್‌ಟಿಸಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ರಾತ್ರಿ 10ರವರೆಗೆ ಉದ್ಯಾನ ತೆರೆಯುವುದಕ್ಕೆ ವಿರೋಧ

ಬೆಂಗಳೂರು: ನಗರದ ಎಲ್ಲ ಉದ್ಯಾನಗಳನ್ನು ರಾತ್ರಿ 10 ಗಂಟೆಯವರೆಗೂ ತೆರೆಯುವುದಕ್ಕೆ ನಿವೃತ್ತ ಅಧಿಕಾರಿ, ಗಾಯಕ ವೈ.ಕೆ. ಮುದ್ದುಕೃಷ್ಣ ವಿರೋಧ ವ್ಯಕ್ತಪಡಿಸಿದ್ದಾರೆ. "2000–2002ರ ಅವಧಿಯಲ್ಲಿ ನಾನು ಮಹಾನಗರಪಾಲಿಕೆಯಲ್ಲಿ ಜಂಟಿ ಆಯುಕ್ತನಾಗಿ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ನಗರದ ಸುಮಾರು 161 ಉದ್ಯಾನಗಳನ್ನು ಅಭಿವೃದ್ಧಿಪಡಿಸಿ 'ಉದ್ಯಾನ ನಗರಿ' ಹೆಸರನ್ನು ಉಳಿಸುವ ಪ್ರಯತ್ನ ಮಾಡಿದ್ದೇನೆ. ಇದು ಅದು ಜನೋದ್ಯಾನ ಯೋಜನೆಯಾಗಿದೆ. ಇತ್ತೀಚೆಗೆ ಕಾನೂನುಬಾಹಿರ ಚಟುವಟಿಕೆಗಳು ಹೆಚ್ಚಾಗುತ್ತಿವೆ. ಹೀಗಿರುವಾಗ ರಾತ್ರಿ 10ರವರೆಗೆ ಉದ್ಯಾನಗಳನ್ನು ತೆರೆದರೆ ಅನೈತಿಕ ಚಟುವಟಿಕೆಗಳು, ಸಮಸ್ಯೆಗಳು ಮತ್ತಷ್ಟು ಹೆಚ್ಚಾಗುತ್ತವೆ" ಎಂದು ನಿವೃತ್ತ ಅಧಿಕಾರಿ, ಗಾಯಕರಾದ ವೈ.ಕೆ. ಮುದ್ದುಕೃಷ್ಣ ಅಭಿಪ್ರಾಯಪಟ್ಟಿದ್ದಾರೆ. "ಈಗ ಮುಖ್ಯಮಂತ್ರಿಗಳು ತಮ್ಮ ನಿಲುವನ್ನು ಬದಲಾಯಿಸಿ ಬೆಳಗ್ಗೆ5ರಿಂದ ರಾತ್ರಿ 8 ಗಂಟೆಯವರೆಗೆ ಸಾರ್ವಜನಿಕರ ಬಳಕೆಗೆ ಪ್ರವೇಶಾವಕಾಶ ಕಲ್ಪಿಸಿಕೊಟ್ಟು ಅನೈತಿಕ ಚಟುವಟಿಕೆಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು," ಎಂದು ಅವರು ಮನವಿ ಮಾಡಿದ್ದಾರೆ.

ತುಸಾರ್‌ಕಾಂತಿ ಬೆಹೆರಾ ಐಐಎಚ್‌ಆರ್ ನಿರ್ದೇಶಕ

ಬೆಂಗಳೂರು: ಹೆಸರಘಟ್ಟದ ಐಸಿಎಆರ್–ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ(ಐಐಎಚ್‌ಆರ್)ಯ

ನೂತನ ನಿರ್ದೇಶಕರಾಗಿ ಒಡಿಶಾ ಮೂಲದ ಡಾ. ತುಸಾರ್‌ಕಾಂತಿ ಬೆಹೆರಾ ನೇಮಕವಾಗಿದ್ದು, ಬುಧವಾರ ಅಧಿಕಾರ ವಹಿಸಿಕೊಂಡಿದ್ದಾರೆ. ಡಾ. ತುಸಾರ್‌ಕಾಂತಿ ಬೆಹೆರಾ ಅವರು ಮುಂದಿನ ಐದು ವರ್ಷಗಳ ಕಾಲ ನಿರ್ದೇಶಕರಾಗಿ ಮುಂದುವರಿಯಲಿದ್ದಾರೆ. ಡಾ. ಬೆಹೆರಾ ಅವರು ತರಕಾರಿ ತಳಿ ಗಳ ವಿಷಯದಲ್ಲಿ ಪರಿಣತಿ ಹೊಂದಿರುವ ವಿಶಿಷ್ಟ ವಿಜ್ಞಾನಿ. ಹಲವು ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

ಹಳದಿ ಮಾರ್ಗದಲ್ಲಿ ಇಂದು ಟ್ರಯಲ್ ರನ್?

» ನಮ್ಮ ಮೊದಲ ಪುಟದಿಂದ

"ಮುಂಬರುವ ಪರೀಕ್ಷೆಗಳು ಸಿಗ್ನಲಿಂಗ್, ಟೆಲಿಕಮ್ಯುನಿಕೇಷನ್ಸ್ ಮತ್ತು ವಿದ್ಯುತ್ ಪೂರೈಕೆಯೊಂದಿಗೆ ವ್ಯವಸ್ಥೆಯನ್ನು ವಿಲೀನಗೊಳಿಸುವ ಗುರಿ ಹೊಂದಿದೆ. ರೈಲನ್ನು ಒಟ್ಟು 37 ಪರೀಕ್ಷೆಗಳಿಗೆ ಒಳಪಡಿಸಲಾಗುವುದು. ರಿಸರ್ಚ್ ಡಿಸೈನ್ಸ್ ಅಂಡ್ ಸ್ಟ್ಯಾಂಡರ್ಡ್ ಆರ್ಗನೈಸೇಷನ್ ಮತ್ತು ಕಮಿಷನರ್ ಆಫ್ ಮೆಟ್ರೊ ರೈಲು ಸೇಫ್ಟಿಯಿಂದ ಸುರಕ್ಷತಾ ತಪಾಸಣೆ ನಡೆಯಬೇಕಿದೆ. ಸಂಚಾರ ಆರಂಭಿಸುವ ಮುನ್ನ ಆರ್‌ಡಿಎಸ್‌ಒ ಮತ್ತು ಸಿಎಮ್‌ಆರ್‌ಎಸ್‌ನಿಂದ ಸಲಹೆ ಪಡೆಯುವ ಮತ್ತು ರೈಲ್ವೆ ಮಂಡಳಿಯಿಂದ ಅನುಮೋದನೆ ಪಡೆಯುವ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವ ಅಗತ್ಯವಿದೆ" ಎಂದು ಬಿಎಂಆರ್‌ಸಿಎಲ್ ಅಧಿಕಾರಿ ತಿಳಿಸಿದ್ದಾರೆ. ಈ ವರ್ಷದ ಅಂತ್ಯದ ವೇಳೆಗೆ ಸುಮಾರು 18.82 ಕಿಲೋಮೀಟರ್ ಉದ್ದದ ಹಳದಿ ಮಾರ್ಗ ಸಂಪೂರ್ಣವಾಗಿ ಕಾರ್ಯನಿರ್ವಹಿಸಲು ಸಿದ್ಧವಾಗಲಿದೆ. ಇದು ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರಕ್ಕೆ ಸಂಪರ್ಕಿಸುತ್ತದೆ. ಇದು 16 ನಿಲ್ದಾಣಗಳನ್ನು ಹೊಂದಿರುವ ಸಂಪೂರ್ಣ ಎತ್ತರದ ಮೆಟ್ರೊ ಮಾರ್ಗವಾಗಿದೆ. ಇದು ಆರ್.ವಿ. ರಸ್ತೆ ನಿಲ್ದಾಣದಲ್ಲಿ ಹಸಿರು ಮಾರ್ಗದೊಂದಿಗೆ ಮತ್ತು ಜಯದೇವ ಆಸ್ಪತ್ರೆ ನಿಲ್ದಾಣದಲ್ಲಿ ಗುಲಾಬಿ ಮಾರ್ಗಕ್ಕೆ ಸಂಪರ್ಕ ಕಲ್ಪಿಸುತ್ತದೆ.

ಅಂತಾರಾಷ್ಟ್ರೀಯ ದೇಹದಾರ್ಢ್ಯ ಸ್ಪರ್ಧೆಗೆ ಅರ್ಹತೆ, ಸನ್ಮಾನ

ಮಹದೇವಪುರ: ದಿಲ್ಲಿಯಲ್ಲಿ ಇತ್ತೀಚೆಗೆ ಇಂಟರ್‌ನ್ಯಾಷನಲ್ ಹೆಲ್ತ್ ಸ್ಪೋರ್ಟ್ಸ್ ಮತ್ತು ಫಿಟ್ನೆಸ್ ಫೆಸ್ಟಿವಲ್ ವತಿಯಿಂದ ಆಯೋಜಿಸಿದ್ದ ಶೇರು ಕ್ಲಾಸಿಕ್ ಅಂತಾರಾಷ್ಟ್ರೀಯ ದೇಹದಾರ್ಢ್ಯ

ಸ್ಪರ್ಧೆಯಲ್ಲಿ ವೈಟ್‌ಲಿಫ್ಟರ್ ರವಿ ಚೌಧರಿ ಐಎಫ್‌ಬಿಬಿ ಪ್ರೋಕಾರ್ಡ್ ಪಡೆಯುವ ಮೂಲಕ ಅಂತಾರಾಷ್ಟ್ರೀಯ ದೇಹದಾರ್ಢ್ಯ ಸ್ಪರ್ಧೆಗೆ ಅರ್ಹತೆ ಪಡೆದಿದ್ದಾರೆ.

ಸ್ಪರ್ಧೆಯಲ್ಲಿ 40ಕ್ಕೂ ಹೆಚ್ಚು ದೇಶಗಳ ನೂರಾರು ದೇಹದಾರ್ಢ್ಯ ಪಟುಗಳು ಭಾಗವಹಿಸಿದ್ದರು. ಹತ್ತು ವರ್ಷಗಳ ಸತತ ಪ್ರಯತ್ನ ಹಾಗೂ ಪರಿಶ್ರಮದಿಂದ ರವಿ ಚೌಧರಿ ಮೆನ್ಸ್ ಫಿಸಿಕ್ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಪಡೆದು ಕರ್ನಾಟಕಕ್ಕೆ ಮೊದಲ ಐಎಫ್‌ಬಿಬಿ ಪ್ರೋಕಾರ್ಡ್ ತಂದು ಕೊಟ್ಟಿದ್ದಾರೆ. ಅಂತಾರಾಷ್ಟ್ರೀಯ ದೇಹದಾರ್ಢ್ಯ ಸ್ಪರ್ಧೆಗೆ ಅರ್ಹತೆ ಪಡೆದ ಹಿನ್ನೆಲೆಯಲ್ಲಿ ಕರ್ನಾಟಕ ಬಾಡಿ ಬಿಲ್ಡಿಂಗ್ ಮತ್ತು ಫಿಟ್ನೆಸ್ ಅಸೋಸಿಯೇಷನ್ ಅಧ್ಯಕ್ಷ ಶ್ರೀನಿವಾಸ್ ಅವರು ರವಿ ಚೌಧರಿ ಅವರನ್ನು ಸನ್ಮಾನಿಸಿದರು.

ಎಡಿಫೈ ಶಾಲೆ ವಿದ್ಯಾರ್ಥಿಗೆ ನಾಲ್ಕು ಚಿನ್ನದ ಪದಕ

ತೆಲಂಗಾಣದಲ್ಲಿ ನಡೆದ ಟೇಕ್ವಾಂಡೋ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಜಸ್ವಂತ್ ಆನಂದ್.

ಬೆಂಗಳೂರು: ಕನಕಪುರ ಮುಖ್ಯ ರಸ್ತೆಯ ಎಡಿಫೈ ಶಾಲೆಯಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಜಸ್ವಂತ್ ಆನಂದ್ ಸ್ವರಕ್ಷಣಾ ಕಲೆ ಟೇಕ್ವಾಂಡೋದ ರಾಜ್ಯ ಮತ್ತು ರಾಷ್ಟ್ರಮಟ್ಟದ ನಾನಾ ಸ್ಪರ್ಧಾ ವಿಭಾಗಗಳಲ್ಲಿ ಭಾಗವಹಿಸಿ ನಾಲ್ಕು ಚಿನ್ನದ ಪದಕ ಪಡೆದಿದ್ದಾನೆ. ಈತನ ಸಾಧನೆ ಬಗ್ಗೆ ಶಾಲಾ ಆಡಳಿತ ಮಂಡಳಿ ಮೆಚ್ಚುಗೆ ವ್ಯಕ್ತಪಡಿಸಿದೆ. ಆನಂದ್ ಕೆ.ಸಿ. ಮತ್ತು ಮಂಜುಳಾ ದಂಪತಿ ಪುತ್ರನಾದ ಜಸ್ವಂತ್ ಆನಂದ್ ಎಡಿಫೈ ಶಾಲೆಯಲ್ಲಿ ಟೇಕ್ವಾಂಡೋ ತರಬೇತಿ ಪಡೆದಿದ್ದು, ಟೇಕ್ವಾಂಡೋ ಮಾತ್ರವಲ್ಲದೆ ಕರಾಟೆ, ಡ್ಯಾನ್ಸಿಂಗ್, ಸ್ಕೇಟಿಂಗ್‌ನಲ್ಲೂ ಆಸಕ್ತಿ ಹೊಂದಿದ್ದಾನೆ.

ಕೊರೊನಾ ಸಾಂಕ್ರಾಮಿಕ ಬಳಿಕ ಹೆಚ್ಚಿದ್ದ ವಿದ್ಯಾರ್ಥಿಗಳ ಸಂಖ್ಯೆ ಮತ್ತೆ ಇಳಿಕೆ | ಮೂಲಸೌಕರ್ಯ, ಉತ್ತಮ ಶಿಕ್ಷಕರ ಕೊರತೆ

ಪಾಲಿಕೆ ಶಾಲೆ, ಕಾಲೇಜಿನಲ್ಲಿ ದಾಖಲಾತಿ ಕುಸಿತ

■ **ವಿಕ ಸುದ್ದಿಲೋಕ** ಬೆಂಗಳೂರು

ಬಿಬಿಎಂಪಿ ಶಾಲಾ–ಕಾಲೇಜುಗಳಲ್ಲಿ ಈ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಶೇ.60ರಷ್ಟು ಕುಸಿದಿದೆ.

ಎಸ್ಸೆಸ್ಸೆಲ್ಸಿ ಫಲಿತಾಂಶ ಕುಸಿತ

2024–25ನೇ ಸಾಲಿನಲ್ಲಿ ಜೂನ್ 6ರವರೆಗೆ 9,467 ವಿದ್ಯಾರ್ಥಿಗಳು ಬಿಬಿಎಂಪಿ ಶಾಲೆಗಳಿಗೆ ಪ್ರವೇಶ ಪಡೆದಿದ್ದಾರೆ. ಕಳೆದ ವರ್ಷ 24,030 ವಿದ್ಯಾರ್ಥಿಗಳು ದಾಖಲಾಗಿದ್ದರು. ಈ ಅಂಕಿ–ಅಂಶವನ್ನು ಗಮನಿಸಿದಾಗ ಬಿಬಿಎಂಪಿ ಶಾಲೆಗಳಿಂದ ವಿದ್ಯಾರ್ಥಿಗಳು ದೂರವಾಗುತ್ತಿರುವುದು ಸ್ಪಷ್ಟವಾಗುತ್ತಿದೆ.

ಬಿಬಿಎಂಪಿಯು ನಗರದಲ್ಲಿ 91 ನರ್ಸರಿ ಶಾಲೆಗಳು, 15 ಪ್ರಾಥಮಿಕ ಶಾಲೆಗಳು, 32 ಪ್ರೌಢಶಾಲೆಗಳು, 15 ಪಿಯು ಕಾಲೇಜುಗಳು, ನಾಲ್ಕು ಪದವಿ ಕಾಲೇಜುಗಳು ಮತ್ತು ಎರಡು ಸ್ನಾತಕೋತ್ತರ (ಪಿಜಿ) ಕಾಲೇಜುಗಳನ್ನು ನಿರ್ವಹಿಸುತ್ತಿದೆ.

ಬಿಬಿಎಂಪಿ ಅಂಕಿಅಂಶಗಳ ಪ್ರಕಾರ, 2024–25ರಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆಯು 8,122ರಿಂದ 1,230ಕ್ಕೆ(ಶೇ.85 ರಷ್ಟು) ಕುಸಿದಿದೆ. ಬಿಬಿಎಂಪಿ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಸಾಂಕ್ರಾಮಿಕಕ್ಕೆ ಮುನ್ನ ವಿದ್ಯಾರ್ಥಿಗಳ ಸಂಖ್ಯೆ 12,000 ಮತ್ತು 15,000ರ ನಡುವೆ ಇತ್ತು.

"ಕೋವಿಡ್–19 ನಿಂದ ಉಂಟಾದ ಆರ್ಥಿಕ ಸಂಕಷ್ಟದ ಕಾರಣ ಕಳೆದ ಕೆಲವು ವರ್ಷಗಳಿಂದ ಶಾಲಾ–ಕಾಲೇಜು ದಾಖಲಾತಿಯಲ್ಲಿ ಹೆಚ್ಚಳ ಕಂಡುಬಂದಿತ್ತು. ಆದರೆ, ಈಗ ಆರ್ಥಿಕ ಪರಿಸ್ಥಿತಿಯು ಚೇತರಿಕೆ ಕಂಡಿರುವುದರಿಂದ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ವಾಪಸ್ ಕಳುಹಿಸುತ್ತಿದ್ದಾರೆ," ಎಂದು ಅಧಿಕಾರಿಯೊಬ್ಬರು ತಿಳಿಸಿದರು.

"ಇತ್ತೀಚೆಗೆ ಪ್ರಕಟವಾದ ಎಸ್ಸೆಸ್ಸೆಲ್ಸಿ ಫಲಿತಾಂಶದ ವೇಳೆ ಉತ್ತೀರ್ಣರಾದವರ ಸಂಖ್ಯೆ ಸಾಕಷ್ಟು ಕುಸಿದಿದೆ. ಉತ್ತಮ ಶಿಕ್ಷಕರ ಕೊರತೆಯೂ ಕಾಡುತ್ತಿದೆ. ಇದು ಕೂಡ ಮಕ್ಕಳು ಖಾಸಗಿ ಶಾಲೆಗಳತ್ತ ಮುಖ ಮಾಡುವುದಕ್ಕೆ ಮತ್ತೊಂದು ಕಾರಣವಾಗಿದೆ" ಎಂದು ಬಿಬಿಎಂಪಿ ಶಾಲೆಯ ಶಿಕ್ಷಕರೊಬ್ಬರು ತಿಳಿಸಿದರು.

ಶಾಲಾ ಪ್ರವೇಶಕ್ಕೆ ಜುಲೈ 31ಕೊನೆಯ ದಿನವಾಗಿರುವುದರಿಂದ ಈ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳುತ್ತಾರೆ. ಅದರೆ, ಈಗಾಗಲೇ ಶೈಕ್ಷಣಿಕ ವರ್ಷ ಪ್ರಾರಂಭವಾಗಿರುವುದರಿಂದ ಹೆಚ್ಚಿನ ವಿದ್ಯಾರ್ಥಿಗಳು ದಾಖಲಾಗುವುದು ಅನುಮಾನವಿದೆ.

ಬಿಬಿಎಂಪಿ ನರ್ಸರಿ ಶಾಲೆಗಳಲ್ಲಿಯೂ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ತೀವ್ರ ಕುಸಿತವಾಗಿದೆ. ನರ್ಸರಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು ಕಳೆದ ವರ್ಷಕ್ಕೆ ಹೋಲಿಸಿದರೆ 4,963ರಿಂದ 935(ಶೇ.80) ಇಳಿಮುಖವಾಗಿದೆ.

ಬಿಬಿಎಂಪಿಯ 19 ಶಾಲೆಗಳು ಕುಸಿಯುವ ಭೀತಿಯಲ್ಲಿದ್ದು, 67 ಕಟ್ಟಡಗಳ ದುರಸ್ತಿಗೆ ತಕ್ಷಣ ಗಮನಹರಿಸಬೇಕು ಎಂದು ಸಮೀಕ್ಷಾ ವರದಿ ಹೇಳಿದೆ. ಕಟ್ಟಡಗಳ ಸ್ಥಿತಿ ಅಪಾಯಕಾರಿಯಾಗಿದೆ ಎಂದು ಹಲವು ಪೋಷಕರು ಮಕ್ಕಳನ್ನು ಬಿಬಿಎಂಪಿ ಶಾಲೆಗಳಿಗೆ ಕಳುಹಿಸಲು ಹಿಂಜರಿಯುತ್ತಿದ್ದಾರೆ.

ಸಾಂದರ್ಭಿಕ ಚಿತ್ರ

ಬಿಬಿಎಂಪಿ ವಿದ್ಯಾಸಂಸ್ಥೆಗಳಲ್ಲಿ ಪ್ರವೇಶಾತಿ



ವಿದ್ಯಾಸಂಸ್ಥೆ	2023	2024-25	
ನರ್ಸರಿ	4963	935	81%
ಪ್ರಾಥಮಿಕ	3580	1360	62%
ಪ್ರೌಢಶಾಲೆ	8122	1280	85%
ಪಿಯುಸಿ	5540	4279	23%
ಪದವಿ	1715	1565	9%
ಸ್ನಾತಕೋತ್ತರ	110	98	11%
ಒಟ್ಟು	24030	9467	60%

(ಮೂಲ: ಬಿಬಿಎಂಪಿ)

ವೈದ್ಯಕೀಯ ತ್ಯಾಜ್ಯ ವಿಲೇ ಬಗ್ಗೆ ನಿಗಾ ಇಡಿ

■ **ವಿಕ ಸುದ್ದಿಲೋಕ** ಬೆಂಗಳೂರು

ಅಪಾಯಕಾರಿ ವೈದ್ಯಕೀಯ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಸಂಬಂಧ ತಜ್ಞರೊಂದಿಗೆ ಸಮಾಲೋಚನೆ ನಡೆಸಿ ನೂತನ ಕರಡು ನೀತಿ ಸಿದ್ಧಪಡಿಸುವಂತೆ ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಬುಧವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, "ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ಉತ್ಪತ್ತಿಯಾಗುವ ವೈದ್ಯಕೀಯ ತ್ಯಾಜ್ಯ ಸಮರ್ಪಕವಾಗಿ ವಿಲೇವಾರಿಯಾಗುತ್ತಿಲ್ಲ ಎಂಬ ದೂರುಗಳಿವೆ. ಅಲ್ಲದೆ, ಮನೆಗಳಲ್ಲಿ ಬಳಸುವ ಬ್ಯಾಂಡೇಜ್ ಸೇರಿದಂತೆ ಇತರ ವೈದ್ಯಕೀಯ ತ್ಯಾಜ್ಯ ಒಣ ಕಸದ ಜತೆ ಸೇರುತ್ತಿವೆ ಎಂಬುದು ಸರಕಾರದ ಗಮನಕ್ಕೆ ಬಂದಿದೆ. ಹಾಗಾಗಿ, ಇದನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಹೊಸ ನೀತಿ ತರುವ ಅಗತ್ಯವಿದೆ," ಎಂದರು.

"ಕೆರೆ, ಜಲಮೂಲಗಳಿಗೆ ತ್ಯಾಜ್ಯ ನೀರು ಸೇರುತ್ತಿದೆ. ಪರಿಣಾಮ ಜಲಚರಗಳು ಸಾಯುತ್ತಿವೆ. ಈ ಹಿನ್ನೆಲೆಯಲ್ಲಿ ಕೆರೆಗಳಲ್ಲಿನ ತ್ಯಾಜ್ಯ ನೀರು ಸಂಸ್ಕರಣಾ ಘಟಕ(ಎಸ್‌ಟಿಪಿ)ಗಳ ಕಾರ್ಯನಿರ್ವಹಣೆಯನ್ನು ಖಾತ್ರಿಪಡಿಸಿಕೊಳ್ಳಿ, ಎಸ್‌ಟಿಪಿ ಅಳವಡಿಸದಿದ್ದಲ್ಲಿ ಮತ್ತು ಕಾರ್ಯನಿರ್ವಹಿಸದಿದ್ದಲ್ಲಿ ಕಾಲಕಾಲಕ್ಕೆ ಪರಿಶೀಲನೆ ನಡೆಸಿ, ಸಂಬಂಧಪಟ್ಟ ಸ್ಥಳೀಯ ಸಂಸ್ಥೆ ವಿರುದ್ಧ ಪ್ರಕರಣ ದಾಖಲಿಸಲು ಕ್ರಮಕೈಗೊಳ್ಳಬೇಕು," ಎಂದು ಸೂಚನೆ ನೀಡಿದರು.

ಜಲಚರಗಳ ಸಾವಿನ ಪರಾಮರ್ಶೆ: ನಗರದ ಕೆರೆಗಳಲ್ಲಿ ಸಾಯುತ್ತಿರುವ ಜಲಚರಗಳ ಬಗ್ಗೆ ಸಚಿವರು ಚರ್ಚಿಸಿದರು. ಇದಕ್ಕೆ ಅಧಿಕಾರಿಗಳಿಂದ ಕಾರಣ ಕೇಳಿದರು. ಕೆರೆಗಳಿಗೆ ಸೇರುತ್ತಿರುವ ಮಲಿನ ನೀರು ಮತ್ತು ತ್ಯಾಜ್ಯದಿಂದಾಗಿ ಜಲಚರಗಳು ಸಾಯುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

"ಕೆರೆಗಳಿಗೆ ಸಂಪರ್ಕವಿರುವ ಮಳೆ ನೀರು ಚರಂಡಿಗಳಲ್ಲಿನ ತ್ಯಾಜ್ಯವನ್ನು ತೆರವು ಮಾಡಿ ಸ್ವಚ್ಛಗೊಳಿಸಲು ಮತ್ತು ತ್ಯಾಜ್ಯ ನೀರು ಕೆರೆ ಸೇರದಂತೆ ನೋಡಿಕೊಳ್ಳಲು ಸಂಬಂಧಪಟ್ಟ ಸಂಸ್ಥೆಗೆ ನಿರ್ದೇಶನ ನೀಡಿ. ನೀರು ಗುಣಮಟ್ಟ ಕಾಪಾಡದ ಸ್ಥಳೀಯ ಸಂಸ್ಥೆಗೆ ನೋಟಿಸ್ ನೀಡಿ. ಬೆಳ್ಳಂದೂರು ಕೆರೆಯ ಸುತ್ತಮುತ್ತ ಮುಗಿಲೆತ್ತರದ ಕಟ್ಟಡ ಕಟ್ಟುವ ಹಲವು ಸಂಸ್ಥೆಗಳಿಂದ ಪರಿಸರ ಪರಿಹಾರಧನ ಸಂಗ್ರಹಿಸಬೇಕು," ಅಧಿಕಾರಿಗಳಿಗೆ ಸೂಚಿಸಿದರು.

ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರೇತರ ಸದಸ್ಯರಾದ ಶರಣಕುಮಾರ ಮೋದಿ, ಡಾ.ಪ್ರದೀಪ್ ಸಿ., ಮರಿಸ್ವಾಮಿಗೌಡ, ಪರಿಸರ ಇಲಾಖೆ ಪ್ರಧಾನ ಕಾರ್ಯದರ್ಶಿ ಬಿ.ಪಿ.ರವಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಬುಧವಾರ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಗಣೇಶ ಮೂರ್ತಿ, ಪಟಾಕಿ ಮಾರಾಟಗಾರರಿಗೆ ನೋಟಿಸ್

"ಸ್ಥಳೀಯ ಸಂಸ್ಥೆಗಳಿಂದ ಗಣಪತಿ ವಿಗ್ರಹ ಮತ್ತು ಪಟಾಕಿ ಮಾರಾಟಗಾರರ ಮಾಹಿತಿ ಪಡೆದು ಅವರಿಗೆ ಪಿಒಪಿ ಗಣಪತಿಯ ಮೂರ್ತಿಗಳನ್ನು ತಯಾರಿ, ಮಾರಾಟ ಮಾಡುವಂತಿಲ್ಲ ಹಾಗೂ ಹಸಿರು ಪಟಾಕಿ ಹೊರತುಪಡಿಸಿ ಮಾಲಿನ್ಯಕಾರಕ ಪಟಾಕಿ ಮಾರಾಟ ಮಾಡುವಂತೆ ಇಲ್ಲವೆಂದು ನೋಟಿಸ್ ನೀಡುವ ಮೂಲಕ ಜಾಗೃತಿಗೊಳಿಸಬೇಕು," ಎಂದು ಆದೇಶಿಸಿದರು.

ವಿದ್ಯಾರ್ಥಿನಿಯರು ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ಖಂಡಿಸಿ ನಾನಾ ಸಂಘಟನೆಗಳ ವತಿಯಿಂದ ಬುಧವಾರ ನಗರದ ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ ನಡೆಯಿತು.

ರೌಡಿಶೀಟರ್ ಬಂಧನ

ಬೆಂಗಳೂರು: ಡ್ರಗ್ಸ್ ಸಾಗಾಟ ಹಾಗೂ ಮಾರಾಟ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ರೌಡಿಶೀಟರ್ ಕುಳ್ಳ ರಿಜ್ವಾನ್‌ನನ್ನು ಕೆಂಪೇಗೌಡ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಎನ್‌ಡಿಪಿಎಸ್ ಪ್ರಕರಣದಲ್ಲಿ ನ್ಯಾಯಾಲಯದ ವಿಚಾರಣಾ ಪ್ರಕ್ರಿಯೆಗಳಿಗೆ ಹಾಜರಾಗದೆ ರಿಜ್ವಾನ್ ತಲೆಮರೆಸಿಕೊಂಡಿದ್ದ. ಆರೋಪಿ ಬಂಧನಕ್ಕೆ ನ್ಯಾಯಾಲಯ ಜಾಮೀನು ರಹಿತ ವಾರೆಂಟ್ ಹೊರಡಿಸಿತ್ತು. ಆರೋಪಿ ಬಂಧನಕ್ಕೆ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮತ್ತೊಂದೆಡೆ ಮಾರಕಾಸ್ತ್ರಗಳಿಂದ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿದ್ದ ರಿಜ್ವಾನ್‌ನ ನಾಲ್ವರ ಸಹಚರರನ್ನು ಹನುಮಂತನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಇತ್ತೀಚೆಗಷ್ಟೇ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಕುಳ್ಳ ರಿಜ್ವಾನ್ ಹಾಗೂ ರೌಡಿ ಸಾಗರ್ ನಡುವಣ ಗುಂಪುಗಳ ನಡುವೆ ಹೊಡೆದಾಟ ನಡೆದಿತ್ತು.

ಕೆನರಾ ಬ್ಯಾಂಕ್‌ನಿಂದ ಉಚಿತ ಕಂಪ್ಯೂಟರ್ ತರಬೇತಿ

ಬೆಂಗಳೂರು: ಕೆನರಾ ಬ್ಯಾಂಕ್ ಸಂಸ್ಥೆಯು ನಿರುದ್ಯೋಗಿ ಯುವಕ/ಯುವತಿಯರಿಗೆ ಕಂಪ್ಯೂಟರ್ ಆಫೀಸ್ ಅಡ್ಮಿನಿಸ್ಟ್ರೇಷನ್ ಹಾಗೂ ಹಾರ್ಡ್‌ವೇರ್ ಮತ್ತು ನೆಟ್ ವರ್ಕ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಮೂರು ತಿಂಗಳ ಉಚಿತ ಕಂಪ್ಯೂಟರ್ ತರಬೇತಿ ಶಿಕ್ಷಣವನ್ನು ನೀಡಲಿದೆ.

ಕಂಪ್ಯೂಟರ್ ತರಬೇತಿಯು ಜುಲೈ ತಿಂಗಳ ಮೊದಲ ವಾರದಲ್ಲಿ ಪ್ರಾರಂಭವಾಗಲಿದೆ.

ಅಭ್ಯರ್ಥಿಗಳು ಕನಿಷ್ಠ ಎಸ್‌ಎಸ್‌ಎಲ್‌ಸಿ ಪಾಸಾಗಿರಬೇಕು. ಪಿಯುಸಿ, ಡಿಗ್ರಿ, ಡಿಪ್ಲೊಮಾ ಹೊಂದಿದವರಿಗೆ ಆದ್ಯತೆ. ವಯಸ್ಸು ಕನಿಷ್ಠ 18 ರಿಂದ 27 ವರ್ಷದೊಳಗಿರಬೇಕು. ಪರಿಶಿಷ್ಟ ಜಾತಿ/ವರ್ಗದವರಿಗೆ ಗರಿಷ್ಠ ವಯಸ್ಸು 30. ತರಬೇತಿ ಪಡೆಯಲು ಇಚ್ಛಿಸುವವರು ನೇರ ಸಂದರ್ಶನಕ್ಕೆ ಮಲ್ಲೇಶ್ವರದಲ್ಲಿರುವ ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯಲ್ಲಿ ಹಾಜರಾಗಬೇಕು. ಪ್ರತಿ ದಿನ ಬೆಳಗ್ಗೆ 11 ಗಂಟೆಗೆ ಅರ್ಹತಾ ಪರೀಕ್ಷೆ ಮತ್ತು ಸಂದರ್ಶನಗಳು ನಡೆಯಲಿದ್ದು, ಅರ್ಜಿ ಫಾರಂಗಳನ್ನು ಪರೀಕ್ಷೆಗೆ ಹಾಜರಾಗುವ ಸಂದರ್ಭದಲ್ಲಿ ಪಡೆಯಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸುವ ವಿಳಾಸ: ನಿರ್ದೇಶಕರು, ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆ ಚಿತ್ರಾಪುರ ಭವನ, ಮಲ್ಲೇಶ್ವರಂ, ಬೆಂಗಳೂರು. ದೂರವಾಣಿ: 23440036/ 23463580, 94485 38107.

ವಸತಿ ಯೋಜನೆ ತ್ವರಿತ ಪೂರ್ಣಗೊಳಿಸಿ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜೀವ್‌ಗಾಂಧಿ ವಸತಿ ನಿಗಮದ ವತಿಯಿಂದ ಕೈಗೊಂಡಿರುವ ವಸತಿ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ನಿಗಮದ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, "ಪ್ರಧಾನ ಮಂತ್ರಿ ನಗರ ಆವಾಸ್ ಯೋಜನೆ ಯಡಿ ಬಡ ಕುಟುಂಬಗಳಿಗೆ ಮನೆ ನಿರ್ಮಾಣ ಮಾಡಿಕೊಡುವ ಕಾಮಗಾರಿಗೆ ವೇಗ ನೀಡಬೇಕು. ರಾಜ್ಯದಲ್ಲಿ ಈ ಯೋಜನೆಯಡಿ ಚಾಲ್ತಿಯಲ್ಲಿರುವ 52 ಸಾವಿರ ಮನೆಗಳ ಪೈಕಿ 11,400 ಮನೆ ಆದಷ್ಟು ಶೀಘ್ರ ಹಂಚಿಕೆ ಮಾಡಬೇಕಿದ್ದು, ವಸತಿ ಸಮುಚ್ಚಯ ಹಾಗೂ ಮೂಲ ಸೌಕರ್ಯ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು," ಎಂದು ನಿರ್ದೇಶನ ನೀಡಿದ್ದಾರೆ.

"ಬಸವ, ಅಂಬೇಡ್ಕರ್, ದೇವರಾಜ ಅರಸು, ವಾಜಪೇಯಿ ನಗರ ಹಾಗೂ ಪ್ರಧಾನ ಮಂತ್ರಿ ಆವಾಸ್ ಗ್ರಾಮೀಣ ಮನೆಗಳ ವಿಚಾರದಲ್ಲಿ ಫಲಾನುಭವಿಗಳ ಆಯ್ಕೆ ವಿಳಂಬದ ಬಗ್ಗೆ ದೂರುಗಳಿದ್ದು, ಶಾಸಕರ ಜತೆ ಪತ್ರ ವ್ಯವಹಾರ ನಡೆಸಿ ಸಮಸ್ಯೆ ಬಗೆಹರಿಸಿಕೊಳ್ಳಬೇಕು. ಸಹಾಯಧನ ಮೊತ್ತ ಸಕಾಲಕ್ಕೆ ತಲುಪುವಂತೆ ನೋಡಿಕೊಳ್ಳಬೇಕು," ಎಂದು ಸೂಚನೆ ನೀಡಿದ್ದಾರೆ.

"ಬೆಂಗಳೂರು ನಗರದಲ್ಲಿ ರೂಪಿಸಿರುವ ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಕಾಮಗಾರಿ ಆದಷ್ಟು ಶೀಘ್ರ ಪೂರ್ಣಗೊಳಿಸಬೇಕು. ಫಲಾನುಭವಿಗಳು ವರ್ಷಗಳಿಂದ ಕಾಯುತ್ತಿದ್ದು ಶೀಘ್ರ ಹಂಚಿಕೆಗೆ ಕ್ರಮ ಕೈಗೊಳ್ಳಿ. ಪ್ರಧಾನಮಂತ್ರಿ ನಗರ ಮತ್ತು ಗ್ರಾಮೀಣ ಆವಾಸ್ ಯೋಜನೆಯಡಿಯಲ್ಲಿ ಕೇಂದ್ರ ಸರಕಾರದ ಪಾಲುದಾರಿಕೆ ಇರುವುದರಿಂದ ಹೆಚ್ಚಿನ ಅನುದಾನ ಪಡೆಯಲು ಸದ್ಯದಲ್ಲೇ ಹೊಸದಿಲ್ಲಿಗೆ ತೆರಳಿ ಕೇಂದ್ರ ಸಚಿವರನ್ನು ಭೇಟಿ ಮಾಡಲಾಗುವುದು," ಎಂದು ತಿಳಿಸಿದ್ದಾರೆ.

ನವೀನ್ ರಾಜ್ ಸಿಂಗ್, ಸುಶೀಲಮ್ಮ, ಸಂಜೀವರೆಡ್ಡಿ, ಪರಶುರಾಮನಗೌಡ ಉಪಸ್ಥಿತರಿದ್ದರು.

ಸಾಂಕ್ರಾಮಿಕ ರೋಗ ಬಗ್ಗೆ ಜಾಗೃತಿ

■ **ವಿಕ ಸುದ್ದಿಲೋಕ** ಬೆಂಗಳೂರು

ಬಿಬಿಎಂಪಿಯ ಮಹದೇವಪುರ ವಲಯದ ಕೃಷ್ಣರಾಜಪುರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಬಿ.ನಾರಾಯಣಪುರ ಸರಕಾರಿ ಪ್ರೌಢಶಾಲೆಯ ಸಹಯೋಗದಲ್ಲಿ ಸಾಂಕ್ರಾಮಿಕ ರೋಗಗಳ ಕುರಿತು ಜನರಲ್ಲಿ ಅರಿವು ಮೂಡಿಸಲಾಯಿತು.

ಪಾಲಿಕೆಯ ವೈದ್ಯಾಧಿಕಾರಿ ಡಾ. ಬಾಬು ಮಹೇಂದ್ರಪ್ರಸಾದ್, ಆರೋಗ್ಯ ನಿರೀಕ್ಷಣಾಧಿಕಾರಿ ಗುರುರಾಜ್ ನೇತೃತ್ವದಲ್ಲಿ ಶಾಲಾ ವಿದ್ಯಾರ್ಥಿಗಳ ನೆರವಿನೊಂದಿಗೆ ಜನಜಾಗೃತಿ ಜಾಥಾ ಹಾಗೂ ಲಾರ್ವಾ ಸಮೀಕ್ಷೆ, ನಿರ್ಮೂಲನೆ ಕಾರ್ಯಾಚರಣೆ ನಡೆಸಲಾಯಿತು.

ಸುಮಾರು 60 ವಿದ್ಯಾರ್ಥಿಗಳು ತಲಾ 20ರಂತೆ 1200ಕ್ಕೂ ಹೆಚ್ಚು ಮನೆಗಳಿಗೆ ಡೆಂಗಿ, ಮಲೇರಿಯಾ, ಚಿಕೂನ್‌ಗುನ್ಯ ಕುರಿತ ಜಾಗೃತಿ ಕರಪತ್ರಗಳನ್ನು ಹಂಚಿದರು.

ಆರೋಗ್ಯ ನಿರೀಕ್ಷಣಾಧಿಕಾರಿ ಶ್ರೀಶೈಲ್ ಕಣ್ವಾಳ್, ಮಂಜುನಾಥ, ಕಿರಣ್, ಶರಣ್, ಶಿವಣ್ಣ, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಕಾಯಕದಲ್ಲಿ ಶ್ರದ್ಧೆ ಅಗತ್ಯ

■ **ವಿಕ ಸುದ್ದಿಲೋಕ** ಬೆಂಗಳೂರು

ನಗರದ ಜನರಿಗೆ ನಿತ್ಯ ನೀರು ಸರಬರಾಜು ಮಾಡುವ ಜಲಮಂಡಳಿಯ ನೌಕರರ ಸೇವೆಯಲ್ಲಿ ಬಸವಣ್ಣನವರ ಕಾಯಕ ತತ್ವ ಕಾಣಬಹುದು ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಹೇಳಿದರು.

ಜಲಮಂಡಳಿಯ ಕೇಂದ್ರ ಕಚೇರಿ ಕಾವೇರಿ ಭವನದಲ್ಲಿ ಬುಧವಾರ ಆಯೋಜಿಸಿದ್ದ 890ನೇ ಶ್ರೀಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

"ಕಾಯಕವೇ ಕೈಲಾಸ ಎಂದು ಬಸವಣ್ಣನವರು ಪ್ರತಿಪಾದಿಸಿದ್ದರು. ಮಾಡುವ ಯಾವುದೇ ಕಾರ್ಯದಲ್ಲಿ ಶ್ರದ್ಧೆಯಿದ್ದಲ್ಲಿ ಅಂದುಕೊಂಡ ಗುರಿ ತಲುಪಲು ಸಾಧ್ಯ. ಬೆಂಗಳೂರು ಜಲಮಂಡಳಿ ಇದೇ ತತ್ವದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ನೀರಿನ ಬವಣೆಯನ್ನು ಸಮರ್ಪಕವಾಗಿ ನಿಭಾಯಿಸಿದೆ," ಎಂದರು.

ಎಲ್ಲಿ–ಏನು? ಗುರುವಾರ

ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ: ನಾಟ್ಯಾಂ ಕಲಾ ಕೇಂದ್ರದ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ. ನಿರ್ದೇಶನ: ವಿದುಷಿ ಪುಷ್ಪಲತಾ ಮಂಜುನಾಥ್.

ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 5ನೇ ಬಡಾವಣೆ, ಜಯನಗರ. ಸಂಜೆ 7.30.

ಬೆಂಗಳೂರು ಗಾಯನ ಸಮಾಜ: 'ಯುವ ಸಂಗೀತೋತ್ಸವ–2024'. ಪ್ರಸ್ತುತಿ: ಚಾರುಲತಾ ಚಂದ್ರಶೇಖರ್, ಸುನಾದ ಕೃಷ್ಣ, ವಿದ್ಯಾ ಶಂಕರ ಬಿ. ಆರ್.

ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ. ಸಂಜೆ 6.

ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ: ರಾಗಿಣಿ ರೋಹಿತ್ ಮತ್ತು ಸಂಗಡಿಗರಿಂದ 'ಹರಿದಾಸ ವಾಣಿ'.

ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಒಂದನೇ ಮುಖ್ಯರಸ್ತೆ, ಹನುಮಂತನಗರ. ಸಂಜೆ 7.

'ವಜ್ರಕ್ಷೇತ್ರ' ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ: ಕೆ.ಪಿ.ವಾದಿರಾಜ ಆಚಾರ್ಯರಿಂದ ಶ್ರೀನಿವಾಸ ಕಲ್ಯಾಣ ಪ್ರವಚನ.

ಸ್ಥಳ: ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ. ಸಂಜೆ 7.

ಬೃಹತ್ ಮುಕ್ತಿನಾಗ ದೇವಾಲಯ: ಲೋಕಕಲ್ಯಾಣಾರ್ಥ ಮುಕ್ತಿನಾಗ ರಥೋತ್ಸವದ ನಿಮಿತ್ತ ಗುರುವಂದನೆ, ಗಣಪತಿ ಪೂಜೆ ಹಾಗೂ ಧ್ವಜಾರೋಹಣ.

ಸ್ಥಳ: ದೊಡ್ಡ ಆಲದಮರ ರಸ್ತೆ, ರಾಮೋಹಳ್ಳಿ. ಸಂಜೆ 4.30.

ಪೇಟೆ ಧಾರಣೆ

ಬೆಂಗಳೂರು ಸಗಟು ಬೆಲೆ 12.06.2024



ಸೂರ್ಯಕಾಂತಿ ಎಣ್ಣೆ (10 ಲೀ.)	
ಸನ್ ಪ್ಯೂರ್	940
ಗೋಲ್ಡ್ ವಿನ್ನರ್	1090
ಜೆಮಿನಿ	1100
ಸನ್‌ಫ್ಲವರ್	1070
ಪಾಮ್ ಆಯಿಲ್ (10 ಲೀ.)	
ರುಚಿ ಗೋಲ್ಡ್	890
ಸುಪ್ರೀಂ	850
ಕಡಲೆಕಾಯಿ ಎಣ್ಣೆ (10 ಲೀ.)	
ಫ್ಲವರ್‌ನಟ್	1500
ಕೆ ಎಸ್ ಜೆ	1400
ನಟ್ ಗೋಲ್ಡ್	1380
ಕುಕ್ಕಿಂಗ್ ಆಯಿಲ್	
ಸನ್‌ಡ್ರಾಪ್	960
ಸಫೋಲಾ	920
ದೀಪದ ಎಣ್ಣೆ (10 ಲೀ.)	
ಆನಂದಮ್	980
ಆಂಧ್ರ	970
ಸಕ್ಕರೆ (50 ಕೆಜಿ)	
ಉತ್ತಮ	2030-2035
ಮಧ್ಯಮ	2015-2020
ಬೆಲ್ಲ (ಕ್ವಿಂಟಾಲ್)	
ಸಣ್ಣ ಅಚ್ಚು	5300-5600
ದಪ್ಪ	4900-5000
ಉಂಡೆ ಬೆಲ್ಲ	4700-5000
ಕಡ್ಲೆ ಬೇಳೆ (50 ಕೆಜಿ)	
ಲಕ್ಸ್	4580-4590

ತೊಗರಿಬೇಳೆ (50 ಕೆಜಿ)	
ಶಿವರಂಗ	8900-8920
ರೆಡ್ಡಿಬಾಲ್	8350-8450
ಉದ್ದಿನ ಬೇಳೆ (50 ಕೆಜಿ)	
ಹಂಸರಾಜ್	67500-6770
ವೈಟ್‌ಗೋಲ್ಡ್	6680-6690
ಕಡ್ಲೆ ಬೀಜ (40 ಕೆಜಿ)	
ಉತ್ತಮ	6000-6200
ಅಕ್ಕಿ (ಕ್ವಿಂಟಾಲ್)	
ಸೋನಾ ಮಸೂರಿ ಹಳೆ	6400-6500
ಸೋನಾ ಮಸೂರಿ (ಹೊಸ)	5000-5500
ಸೋನಾ ಮಸೂರಿ ಸ್ಟೀಮ್	5200-5600
ಇಡ್ಲಿ ರೈಸ್	3900-4300
ರಾಗಿ (ಕ್ವಿಂಟಾಲ್)	
ಉತ್ತಮ	4400-4600
ಮಧ್ಯಮ	4100-4300
ಗೋಧಿ (50 ಕೆಜಿ)	
ಉತ್ತಮ	2200-2400
ಮಧ್ಯಮ	20000-2100
ಜೋಳ (50 ಕೆಜಿ)	
ಉತ್ತಮ	2900-3300
ಮಧ್ಯಮ	2200-2500
ಈರುಳ್ಳಿ (50 ಕೆಜಿ)	
ದಪ್ಪ	1750-1900
ಮಧ್ಯಮ	1300-1500
ಗೋಲ್ಟಾ	1150-1000
ಮೊಟ್ಟೆ 100ಕ್ಕೆ	595

ಬಾಲ ಕಾರ್ಮಿಕ ಪದ್ಧತಿ ತಡೆಗೆ ಕೈಜೋಡಿಸಿ

■ **ವಿಕ ಸುದ್ದಿಲೋಕ** ಬೆಂಗಳೂರು

ಬಾಲಕಾರ್ಮಿಕ ಪದ್ಧತಿಯ ಸಂಪೂರ್ಣ ನಿರ್ಮೂಲನೆಗೆ ಕಾರ್ಮಿಕ ಇಲಾಖೆ ಕಟಿಬದ್ಧವಾಗಿ ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರು ಸರಕಾರದ ಜತೆ ಕೈಜೋಡಿಸಬೇಕು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಮನವಿ ಮಾಡಿದರು.

ಬಾಲ ಕಾರ್ಮಿಕ ವಿರೋಧಿ ದಿನದ ಅಂಗವಾಗಿ ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಬಾಲ ಕಾರ್ಮಿಕ ನಿರ್ಮೂಲನೆ ಯೋಜನಾ ಸೊಸೈಟಿ ಹಾಗೂ ಜಿಲ್ಲಾ ಬಾಲ ಕಾರ್ಮಿಕ ನಿರ್ಮೂಲನೆ ಸೊಸೈಟಿ ವತಿಯಿಂದ ಎಂ.ಜಿ. ರಸ್ತೆಯ ಗಾಂಧಿ ಪ್ರತಿಮೆಯಿಂದ ಕೆ.ಆರ್. ಸರ್ಕಲ್ ವರೆಗೆ ಹಮ್ಮಿಕೊಂಡಿದ್ದ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು.

"ಬಾಲ ಕಾರ್ಮಿಕರ ಪತ್ತೆ ಮತ್ತು ಅವರ ರಕ್ಷಣೆಗೆ ಕಾರ್ಮಿಕ ಇಲಾಖೆ ಸಾಕಷ್ಟು ಕಾರ್ಯ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುತ್ತಿದೆ. ಮಕ್ಕಳನ್ನು ಕಾರ್ಮಿಕರಾಗಿ ನೇಮಿಸಿಕೊಂಡವರಿಗೆ ದಂಡ ವಿಧಿಸಲಾಗುತ್ತಿದೆ. ಮಕ್ಕಳು ಬಾಲ ಕಾರ್ಮಿಕರಾಗದಂತೆ ತಡೆಯಲು ಕಾರ್ಮಿಕ ಇಲಾಖೆ, ಪೊಲೀಸ್ ಸೇರಿದಂತೆ ಇತರ ಇಲಾಖೆಗಳ ಜತೆ ಸೇರಿ ಕೆಲಸ ಮಾಡಿದರೆ ಸಾಕಷ್ಟು ಅನುಕೂಲವಾಗಲಿದೆ," ಎಂದು ತಿಳಿಸಿದರು.

"ಮಕ್ಕಳಿಂದ ಭಿಕ್ಷಾಟನೆ ಸಹ ಅಪಾಯಕಾರಿ. ಮಹಾನಗರಗಳಲ್ಲಿ ಇದು ಇತ್ತೀಚೆಗೆ ಹೆಚ್ಚುತ್ತಿದೆ. ಇದಕ್ಕೆ ಪೊಲೀಸ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ತಡೆಯೊಡ್ಡಬೇಕು," ಎಂದರು.

ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತ ಪ್ರಮಾಣವಚನ ಬೋಧಿಸಿದರು. ನಟಿ ರಾಗಿಣಿ ದ್ವಿವೇದಿ, ಕಾರ್ಮಿಕ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಜಾಗೃತಿ ಜಾಥಾಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಚಾಲನೆ ನೀಡಿದರು.

ಜ್ಞಾನಭಾರತಿ ಆವರಣ ವಾಹನ ಸಂಚಾರ ಮುಕ್ತಗೊಳಿಸಲು ಮನವಿ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣವನ್ನು ವಾಹನ ಸಂಚಾರ ಮುಕ್ತ ಮಾಡಿ, ವಾಹನಗಳ ಪ್ರವೇಶವನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಿ. ಅವುಗಳಿಗೆ ಪರ್ಯಾಯ ಮಾರ್ಗ ರೂಪಿಸಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವ ಮೂಲಕ ಆವರಣದಲ್ಲಿ ಸಂಚಾರ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಶಾಶ್ವತ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್.ಹೊರಟ್ಟಿ ಮನವಿ ಮಾಡಿದ್ದಾರೆ.



ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಅವರಿಗೆ ಪತ್ರ ಬರೆದಿರುವ ಅವರು, "ಬೆಂಗಳೂರು ವಿವಿಯ ಜ್ಞಾನಭಾರತಿ ಆವರಣದಲ್ಲಿ ಸಾರ್ವಜನಿಕ ವಾಹನಗಳ ಓಡಾಟದ ಒತ್ತಡದಿಂದಾಗಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ.2022ರ ಅಕ್ಟೋಬರ್‌ನಲ್ಲಿ ಈ ಆವರಣದ ಮುಖ್ಯರಸ್ತೆಯಲ್ಲಿ ಎಂ.ಎಸ್ಸಿ ವಿದ್ಯಾರ್ಥಿನಿಯೊಬ್ಬರ ಮೇಲೆ ವಾಹನ ಹರಿದು ಮೃತಪಟ್ಟಿದ್ದರು. ಇದರಿಂದ ವಿಶ್ವವಿದ್ಯಾಲಯಕ್ಕೆ ತೀವ್ರ ಮುಜುಗರ ಉಂಟಾಗಿತ್ತು," ಎಂದು ಗಮನಸೆಳೆದಿದ್ದಾರೆ.

"ಈ ಘಟನೆಯ ಸಂದರ್ಭದಲ್ಲಿ ಜ್ಞಾನಭಾರತಿ ಆವರಣದ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸುವ ಕುರಿತು ಹಾಗೂ ಈ ರಸ್ತೆಗಳಲ್ಲಿ ಸುಗಮ ಸಂಚಾರ ಮತ್ತು ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ 2022ರ ಅಕ್ಟೋಬರ್ 14ರಂದು ಉನ್ನತ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಆವರಣದ ಮುಖ್ಯರಸ್ತೆಯುದ್ದಕ್ಕೂ ಫ್ಲೈಓವರ್ ಅಥವಾ ಮುಖ್ಯರಸ್ತೆಯ ಎರಡೂ ಬದಿಗಳಲ್ಲಿ ಕಾಂಪೌಂಡ್ ಹಾಗೂ ಸೂಕ್ತ ಸ್ಥಳಗಳಲ್ಲಿ ಅಂಡರ್ ಪಾಸ್ ಮತ್ತು ಸ್ಕೈ–ವಾಕ್ ನಿರ್ಮಾಣ ಮಾಡುವಂತೆ ಸಲಹೆ ನೀಡಲಾಗಿತ್ತು. ಆದರೆ ಇದುವರೆಗೂ ಯಾವುದೇ ಸೂಕ್ತ ಕ್ರಮಗಳನ್ನು ಕೈಗೊಂಡಿಲ್ಲ," ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

"ಇತ್ತೀಚೆಗೆ ನಾನು ಬೆ. ವಿವಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ವಿವಿಯ ಆವರಣದಲ್ಲಿ ವಾಹನ ದಟ್ಟಣೆ, ಇದರಿಂದ ವಿದ್ಯಾರ್ಥಿಗಳಿಗೆ ಉಂಟಾಗುವ ಅನಾನುಕೂಲ ಮತ್ತು ಅಪಘಾತಗಳ ಸಾಧ್ಯತೆ ಕುರಿತು ಖುದ್ದಾಗಿ ಗಮನಿಸಿದ್ದೇನೆ," ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ವಿಜಯ ಕರ್ನಾಟಕ 25 ರಜತ ಸಂಭ್ರಮ

ಲವಲVK

ಸಲ್ಮಾನ್ ಖಾನ್ ನಟನೆಯ 'ಸಿಕಂದರ್' ಸಿನಿಮಾ ಶೂಟಿಂಗ್‌ನಲ್ಲಿಪಾಲ್ಗೊಳ್ಳಲು ತಾನು ಸೂಪರ್ ಎಕ್ಸೈಟ್ ಆಗಿದ್ದೇನೆ ಎಂದು ರಶ್ಮಿಕಾ ಮಂದಣ್ಣ ಹೇಳಿದ್ದಾರೆ.

ಬಾಲಿವುಡ್‌ನ 'ಇಶ್ಕ್ ವಿಷ್ಕ್' ಚಿತ್ರದ ಸೀಕ್ವೆಲ್ 'ಇಶ್ಕ್ ವಿಷ್ಕ್ ರಿಬೌಂಡ್'ನಲ್ಲಿ ಶಾಹಿದ್ ಕಪೂರ್ ಹಾಗೂ ಅಮೃತಾ ರಾವ್ ವಿಶೇಷ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಅಭಿಮಾನದ ಅಂತರಾಳ

ಕಲಾವಿದರ ಮೇಲೆ ಪ್ರೇಕ್ಷಕರಿಗೆ ಅಭಿಮಾನ ಮೂಡುವುದು ಸಹಜ. ತಾರೆಯರಿಗೂ ಅಭಿಮಾನಿಗಳು ಅನಿವಾರ್ಯರೇ. ಆದರೆ, ಸೆಲೆಬ್ರಿಟಿ- ಅಭಿಮಾನಿಗಳ ನಡುವಣ ನಂಟು ಎಷ್ಟಿರಬೇಕು? ಅಭಿಮಾನ ವ್ಯಕ್ತಪಡಿಸುವಿಕೆಯ ಗಡಿರೇಖೆ ಎಲ್ಲಿರಬೇಕು? ಫ್ಯಾನ್ಸ್ ಕುರಿತಾಗಿ ತಾರೆಯರ ಜವಾಬ್ದಾರಿ ಏನು? ಈಗ ಮತ್ತೆ ಯೋಚಿಸುವಂತಾಗಿದೆ.



ನಾವು ಜನರಿಂದ ಬಂದವರು. ಜನರಿಗೋಸ್ಕರ ಇರುವಂತಹವರು. ಅಭಿಮಾನಿಗಳು ಕೂಡ ಮನುಷ್ಯರು, ಕಲಾವಿದರು ಕೂಡ ಮನುಷ್ಯರು. ಇಬ್ಬರೂ ತಮ್ಮ ಜವಾಬ್ದಾರಿ ಅರ್ಥ ಮಾಡಿಕೊಳ್ಳಬೇಕು. ಅಭಿಮಾನಿಗಳ ಪ್ರೀತಿಯಿಂದಲೇ ಕಲಾವಿದರು ಇರುವುದು. ಆದರೆ, ಇದರ ಜತೆ ಅಭಿಮಾನಿಗಳು ಕೂಡ ಕಲಾವಿದರಿಗೆ ಒಂದು ಸ್ಪೇಸ್ ನೀಡಬೇಕು. ಕಲಾವಿದರು ಒಳ್ಳೆಯತನ ಕಾಪಾಡಿಕೊಂಡು ಹೋದರೆ ಜನರು ಯಾವಾಗಲೂ ಜತೆಗಿರುತ್ತಾರೆ.

-ಶಿವರಾಜ್‌ಕುಮಾರ್ | ನಟ

ಅಭಿಮಾನಿಗಳ ಪ್ರೀತಿ ಮುಂದೆ ನಾವು ಶರಣಾಗುತ್ತೇವೆ. ಕಲಾವಿದರು ಮತ್ತು ಅಭಿಮಾನಿಗಳ ನಡುವೆ ಆರೋಗ್ಯಕರ ಸಂಬಂಧ ಇರುತ್ತದೆ. ಅಭಿಮಾನಿ ಎಂದರೆ ದೇವರು ಎಂಬ ಮಾತನ್ನು ಅನುಸರಿಸಿಕೊಂಡು ಬಂದವರು. ಕೆಲವೊಮ್ಮೆ ಅವರು ಕೂಡ ನಮಗೆ ಸಲಹೆ ಸೂಚನೆ ನೀಡುತ್ತಾರೆ. ಸರಿ ಎನಿಸಿದ್ದನ್ನು ಸ್ವೀಕರಿಸುತ್ತೇವೆ.

-ಶ್ರೀಮುರಳಿ | ನಟ

ವಿದ್ಯಾರಶ್ಮಿ ಪೆಲತ್ತಡ್ಕ

vidyarashmi.bhat@timesgroup.com

ಅದು ರಣಜಿ ಟ್ರೋಫಿಯ ಸಮಯ. ಕರ್ನಾಟಕ ಮತ್ತು ಮುಂಬಯಿ ತಂಡಗಳು ಎದುರು ಬದುರಾಗಿದ್ದವು. ಕರ್ನಾಟಕದಿಂದ ರಘುರಾಮ್ ಭಟ್ ತುಂಬ ಒಳ್ಳೆಯ ಫಾರ್ಮ್‌ನಲ್ಲಿದ್ದರು. ಎರಡನೇ ಇನಿಂಗ್ಸ್‌ಗೆ ಆಡಲು ಬಂದ ಗವಾಸ್ಕರ್ ತಮ್ಮ ಎಂದಿನ ಬಲಗೈ ಆಟದ ಬದಲಾಗಿ ಎಡಗೈ ಆಟಕ್ಕೆ ತೊಡಗಿದರು! ನೋಡುತ್ತಿದ್ದ ಅಭಿಮಾನಿಗಳಿಗೆ ಅಚ್ಚರಿ, ಆಘಾತ ಎರಡೂ...ಹೀಗಾದರೆ ಸೋಲು ಗ್ಯಾರಂಟಿ ಎಂದು ಎಲ್ಲರೂ ಗವಾಸ್ಕರ್ ವಿರುದ್ಧ ಧಿಕ್ಕಾರ ಕೂಗತೊಡಗಿದರು. ಕೊನೆಗೆ ಪಂದ್ಯ ಸಮವಾಯಿತು. ಎಡಗೈಲಿ ಆಡಿದ ಕಾರಣ ರಘುರಾಮ್ ಭಟ್‌ರಂಥ ಬೌಲರ್‌ನನ್ನು ಎದುರಿಸಲು ಸಾಧ್ಯವಾಯಿತು, ಅದರಿಂದಾಗಿಯೇ ಪಂದ್ಯ ಕೊನೆಪಕ್ಷ ಡ್ರಾ ಆಯಿತು. ಇಲ್ಲವಾದರೆ ಸೋಲಬೇಕಾಗುತ್ತಿತ್ತು ಎಂದಿದ್ದರು ಆಗ ಗವಾಸ್ಕರ್. ತಮ್ಮ ನೆಚ್ಚಿನ ಆಟಗಾರ ಹೀಗೆ ಬೇರೇನೋ ಮಾಡುತ್ತಿದ್ದಾರಲ್ಲ ಎಂದು ವಿಚಲಿತಗೊಂಡ, ತಕ್ಷಣ ಎಚ್ಚರಿಸಲು ಹೊರಟ ಆ ಅಭಿಮಾನಿ ಗಣದ ಧ್ವನಿ ಎಷ್ಟು ದೊಡ್ಡದು... ಅಭಿಮಾನವೆಂದರೆ ಹೀಗಿರಬೇಕು ಎಂಬಷ್ಟು, ಅದು ಅಂಧಾಭಿಮಾನವಲ್ಲ, ವಿಮರ್ಶೆ ಸಹಿತವಾದ ಆರೋಗ್ಯಕರ ಅಭಿಮಾನ.

ಸಿನಿಮಾ ತಾರೆಯರಿಗೆ, ರಾಜಕಾರಣಿಗಳಿಗೆ, ಕ್ರಿಕೆಟ್ ತಾರೆಯರಿಗೆ ಎಲ್ಲರಿಗೂ ಅಭಿಮಾನಿಗಳು ಬೇಕು. ಅವರ ನೆಲೆಯೇ ಈ ಅಭಿಮಾನಿಗಳು. ಫ್ಯಾನ್ಸ್ ನೆಲೆಯಲ್ಲಿಯೇ ತಾರೆಯರಿಗೆ ಮಾರುಕಟ್ಟೆಯೂ ಸೃಷ್ಟಿಯಾಗುತ್ತದೆಂದರೆ ಸುಳ್ಳಲ್ಲ. ನಟನಟಿಯರು ನಾಣ್ಯದ ಒಂದು ಮುಖವಾದರೆ, ಅಭಿಮಾನಿಗಳು ಇನ್ನೊಂದು ಮುಖ. ಅವರಿಲ್ಲದೆ ಇವರಿಲ್ಲ. ಹೀಗಾಗಿ, ಅಭಿಮಾನಿಗಳು ಎಂಥವರಾದರೂ ಬೇಕು ನಿಜ. ಅವರು ಶಿಕ್ಷಿತರಾಗಿರಲಿ, ಅನಾಗರಿಕರಂತೆ ವರ್ತಿಸಲಿ... ಹೇಗಿದ್ದರೂ ನಿರಾಕರಿಸಲಾಗದ ಅನಿವಾರ್ಯತೆ ಆ ಆರಾಧ್ಯ ದೈವಕ್ಕೆ.

ಅಭಿಮಾನಿ ಎಂದಮೇಲೆ ತೆರೆಯ ಮೇಲೆ ಅಭಿನಯ ನೋಡಿ, ಮೆಚ್ಚಿ ಸುಮ್ಮನಿರುವವರು ಎಲ್ಲರೂ ಅಲ್ಲ. ಕೆಲವರು ನೋಡಲು, ಮಾತಾಡಲು, ಸೆಲ್ಫಿ ತೆಗೆದುಕೊಳ್ಳಲು ಬಯಸಬಹುದು. ಆದರೆ, ಇನ್ನೂ ಮುಂದುವರಿದು ಆ ನಟನೋ ಅಥವಾ ನಟಿಯ ವೈಯಕ್ತಿಕ ಬದುಕಿನ ಮೇಲೂ ತಮ್ಮದೇ ಹಕ್ಕು ಸಾಧಿಸಿದಾಗ ನಿಜಕ್ಕಾದರೂ ತೊಂದರೆಯೇ. ಹೆಚ್ಚಿನ ನಟನಟಿಯರು ಎದುರಿಸುವ ಸಮಸ್ಯೆ ಇದು. ಸೋಷಿಯಲ್ ಮೀಡಿಯಾ ಎಲ್ಲರನ್ನೂ ಬಲು ಸಮೀಪ ತಂದಿರುವ ಇಂದಿನ ದಿನಗಳಲ್ಲಂತೂ ಇದು ಹೆಚ್ಚೇ ಆಗಿದೆ.

ನಟನೋ, ನಟಿಯನ್ನೋ ಬರಿಯ ದೂರದಲ್ಲಿ ನೋಡಿ ಖುಷಿಪಡಬೇಕು, ಅವರಿಗೂ ವೈಯಕ್ತಿಕ ಬದುಕಿದೆ ಎಂಬುದನ್ನು ಹೇಗೆ ಅಭಿಮಾನಿಗಳು ಅರ್ಥ ಮಾಡಿಕೊಳ್ಳಬೇಕೋ ಹಾಗೆಯೇ ಅಭಿಮಾನಿಗಳ ಮಟ್ಟವನ್ನು ಎತ್ತರಿಸುವ ಜವಾಬ್ದಾರಿಯೂ ಅಭಿಮಾನಿಸಲ್ಪಡುವ ಆ ವ್ಯಕ್ತಿಗೆ ಇದೆ ಎಂಬುದನ್ನು ನೆನಪಿಸಿಕೊಳ್ಳುವ ಸಮಯವಿದು. ಕೆಲವೊಮ್ಮೆ ಅಭಿಮಾನಿಗಳು ಆ ತಾರೆಯ ಕನ್ನಡಿಯಂತಿರುತ್ತಾರೆ. ತಾರೆ ದಿಕ್ಕುತಪ್ಪಿದಂತೆಲ್ಲ ಅದು ಅಭಿಮಾನಿಗಳಲ್ಲೂ ಪ್ರತಿಫಲಿತವಾಗುತ್ತ ಹೋಗುತ್ತದೆ. ಡಾ.ರಾಜ್‌ಕುಮಾರ್ ಅವರೇ ಇದಕ್ಕೆ ನಿದರ್ಶನ. ತೆರೆಯ ಮೇಲಿನ ತಮ್ಮ ಪಾತ್ರ ಹೇಗೆ ಜನರಿಗೆ ಮಾದರಿ ಆಗಿರಬೇಕೆಂದು ಅವರು ಬಯಸಿದ್ದರೋ, ಅವರ ಸಾರ್ವಜನಿಕ ನಡೆಯೂ ಅಷ್ಟೇ ಎಚ್ಚರಿಕೆಯದಾಗಿತ್ತು. ಅವರ ಮಾತು, ನಡೆ ಎಲ್ಲವೂ ಸಾರ್ವಜನಿಕ ಜೀವನದಲ್ಲಿ ನಾವು ಹೇಗಿರಬೇಕು ಎಂಬುದಕ್ಕೆ ಸಂದೇಶಗಳೇ ಆಗಿದ್ದವು.

ತಂತಮ್ಮ ಅಭಿಮಾನಿಗಳು ಮೇರೆ ಮೀರಿ ವರ್ತಿಸಿದ್ದೇ ಆದರೆ ಅದರ ಕುರಿತಾಗಿ ಸುಮ್ಮನಿರುವ ಕಾಲ ಇದಲ್ಲ. ಅವರಿಗೆ ಎಚ್ಚರಿಕೆ ಹೇಳಬೇಕಾದ, ತಿದ್ದಬೇಕಾದ ಜವಾಬ್ದಾರಿ ಪ್ರತಿ ಸೆಲೆಬ್ರಿಟಿಗೂ ಇದೆ. ಇದೇ ಅವರನ್ನು ಜವಾಬ್ದಾರಿಯುತ ತಾರೆಯನ್ನಾಗಿ ಮಾಡುವುದು. ರಾಮಾಯಣದಲ್ಲಿ ರಾವಣ ಸೀತೆಯ ಅಪಹರಣಕ್ಕೆ ಹೊರಟಾಗ ಮಾರೀಚನಂಥ ಅಪ್ತರೂ ವಿರೋಧಿಸಿದರಂತೆ. ರಾವಣನನ್ನು ಅಂಧರಾಗಿ ಬೆಂಬಲಿಸಿದವರೂ ಇದ್ದರು. ಅದೇ ಬಲದಲ್ಲಿ ರಾವಣ ನಡೆದ. ಅದಕ್ಕೇ ಲಂಕೆ ನಾಶವಾಯಿತು. ರಾಮ ಸಣ್ಣ ಟೀಕೆಗೂ ಬೆಲೆಕೊಟ್ಟು ಸುದಾರಿಯಲ್ಲೇ ನಡೆದ. ಅದಕ್ಕೇ ಅಯೋಧ್ಯೆ ರಾಮರಾಜ್ಯವಾಯಿತು. ಅಭಿಮಾನ ಬಲದಿಂದ ವ್ಯಕ್ತಿ ಬೆಳೆಯುತ್ತಾ ಹೆಚ್ಚು ಹೆಚ್ಚು ವಿನೀತನಾಗುತ್ತಾ ಸಾಗಬೇಕು. ಅಭಿಮಾನಿಗಳಲ್ಲೂ ಅದು ಪ್ರತಿಫಲಿತವಾಗಬೇಕು. ಹಾಗಾದಾಗಲೇ ಆರೋಗ್ಯಕರ ವಾತಾವರಣ ನಿರ್ಮಾಣ ಸಾಧ್ಯ. ■

ವಸಿಷ್ಠ ಸಿಂಹ, ಸ್ಟೆಫಿ ಪಟೇಲ್

ಲವ್ ಲಿ ಕಥೆಯ ಲವ್ಲಿ ಜೋಡಿ

ಚೇತನ್ ಕೇಶವ್ ಚೊಚ್ಚಲ ನಿರ್ದೇಶನದ 'ಲವ್ ಲಿ' ಚಿತ್ರದಲ್ಲಿ ವಸಿಷ್ಠ ಸಿಂಹ ಹಾಗೂ ಸ್ಟೆಫಿ ಪಟೇಲ್ ಜೋಡಿ ಮೋಡಿ ಮಾಡಲಿದೆ.

3 ವರ್ಷಗಳ ಶ್ರಮ ಹಾಕಿ ಮಾಡಿರುವ ಸಿನಿಮಾವಿದು. ದುಡ್ಡು ಕೊಟ್ಟು ಥಿಯೇಟರ್‌ಗೆ ಬಂದವರಿಗೆ ಮೋಸವಿಲ್ಲ ಎಂಬ ನಂಬಿಕೆಯಿದೆ.

-ವಸಿಷ್ಠ ಸಿಂಹ | ನಟ

ಜನನಿ ಪಾತ್ರ ನನ್ನ ಮೇಲೆ ದೊಡ್ಡ ಪರಿಣಾಮ ಬೀರಿದೆ. ಈ ಪಾತ್ರದಲ್ಲಿ ನಾನು ಜೀವಿಸಿದ್ದೇನೆ. ಹೀಗಾಗಿ ಜೀವನಪರ್ಯಂತ ಇದು ನೆನಪಿನಲ್ಲಿರುತ್ತದೆ.

-ಸ್ಟೆಫಿ ಪಟೇಲ್ | ನಟಿ

ಪ್ರಮೋದ ಮೋಹನ ಹೆಗಡೆ

pramod.hegde@timesgroup.com

ಮಫ್ತಿ ಸಿನಿಮಾ ಖ್ಯಾತಿಯ ನಿರ್ದೇಶಕ ನರ್ತನ್ ಗರಡಿಯಲ್ಲಿ ಪಳಗಿದ ಚೇತನ್ ಕೇಶವ್ ಮೊದಲ ಬಾರಿಗೆ ಆ್ಯಕ್ಷನ್ ಕಟ್ ಹೇಳಿರುವ ಮತ್ತು ವಸಿಷ್ಠ ಸಿಂಹ ನಾಯಕರಾಗಿರುವ 'ಲವ್ ಲಿ' ಸಿನಿಮಾದಲ್ಲಿ ವಿಭಿನ್ನ ಕಥಾ ಹಂದರವಿದೆ. ವಿಶೇಷವೆಂದರೆ ಬಾಲಿವುಡ್ ಹಾಗೂ ಟಾಲಿವುಡ್ ಸಿನಿಮಾಗಳಲ್ಲಿ ಮಿಂಚಿದ ನಟಿ ಸ್ಟೆಫಿ ಪಟೇಲ್ ಈ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಇದೇ ಶುಕ್ರವಾರ 'ಲವ್ ಲಿ' ಚಿತ್ರ ತೆರೆಕಾಣಲಿದ್ದು, ಇದರ ಟ್ರೇಲರ್ ಈಗಾಗಲೇ ಜನರಿಂದ ಮೆಚ್ಚುಗೆ ಪಡೆದಿದೆ.

ಅಪರೂಪದ ಪಾತ್ರ

ಲವ್ ಲಿ ಚಿತ್ರದಲ್ಲಿ ನಾಯಕರಾಗಿ ಹಲವು ಶೇಡ್‌ಗಳಲ್ಲಿ ಕಾಣಿಸಿಕೊಂಡಿರುವ ನಟ ವಸಿಷ್ಠ ಸಿಂಹ, 'ನನ್ನ ಕೆರಿಯರ್‌ನಲ್ಲಿ ಹೆಮ್ಮೆಯ ಸಿನಿಮಾವಿದು. ನಾನೊಬ್ಬನೇ ಅಲ್ಲದೆ, ಇಡೀ ತಂಡಕ್ಕೆ ಈ ಚಿತ್ರದ ಬಗ್ಗೆ ಹೆಮ್ಮೆಯಿದೆ. ಏಕೆಂದರೆ, ಈ ಚಿತ್ರದ ಕಂಟೆಂಟ್ ಹಾಗಿದೆ. ಸಾಕಷ್ಟು ವಿಷಯ ಮತ್ತು ಭಾವನೆಗಳನ್ನು ಒಳಗೊಂಡಿರುವ ಕಥೆ ಹಾಗೂ ಪಾತ್ರವಿರುವ ಈ ಸಿನಿಮಾವನ್ನು ಈ ಹಿಂದೆ 6 ರಿಂದ 60 ವರ್ಷದೊಳಗಿನವರು ಎಲ್ಲರೂ ನೋಡಬಹುದು ಎಂದಿದ್ದೆ, ಈಗ ಮೂರರಿಂದ ನೂರು ವರ್ಷದೊಳಗಿನವರೂ ನೋಡಬಹುದಾದ ಸಿನಿಮಾವಿದು ಎಂದು ಹೇಳಲು ಬಯಸುತ್ತೇನೆ. ಒಬ್ಬ ಗ್ಯಾಂಗ್‌ಸ್ಟರ್‌ನ ಜೀವನದಲ್ಲಿ ಪ್ರೀತಿ ಹುಟ್ಟಿದಾಗ ಏನೆಲ್ಲಾ ಬದಲಾವಣೆ ಆಗುತ್ತದೆ, ಆತ ಹೇಗೆ ಜವಾಬ್ದಾರಿಗಳನ್ನು ನಿಭಾಯಿಸುತ್ತಾನೆ ಎನ್ನುವುದರ ಸುತ್ತ ಸಾಗುವ ಕಥೆ ಒಂದೆಡೆಯಾದರೆ, ಇದಕ್ಕೆ ಇನ್ನೂ ಹಲವಾರು ವಿಷಯಗಳೂ ಸೇರಿಕೊಂಡಿವೆ. ಸಿನಿಮಾದ ಒಂದೊಂದನ್ನು ಕೂಡ ಬೇರೆ ಬೇರೆ ರೀತಿಯಲ್ಲಿ ಹೇಳುವ ಅವಕಾಶವಿರುವ ಕಥೆ ಇದು' ಎಂದಿದ್ದಾರೆ.

ಕನ್ನಡಕ್ಕೆ ಸ್ಟೆಫಿ ಡೆಬ್ಯೂ

ಈ ಸಿನಿಮಾ ಮೂಲಕ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿರುವ ನಟಿ ಸ್ಟೆಫಿ ಪಟೇಲ್, ಮೊದಲ ಚಿತ್ರ ಪೂರ್ಣಗೊಳಿಸುವ ಹೊತ್ತಿಗೆ ಸೊಗಸಾಗಿ ಕನ್ನಡ ಮಾತನಾಡುವುದನ್ನೂ ಕಲಿತಿದ್ದಾರೆ. 'ಈ ಚಿತ್ರದಲ್ಲಿ ನಾನು ಜನನಿ ಎಂಬ ಹುಡುಗಿಯ ಪಾತ್ರ ಮಾಡುತ್ತಿದ್ದೇನೆ. ಮೇಲ್ನೋಟಕ್ಕೆ ಆಕೆ ಶ್ರೀಮಂತ ಮನೆತನದವಳಂತೆ ಕಂಡರೂ ಈ ಪಾತ್ರಕ್ಕೆ ಹಲವು ಲೇಯರ್‌ಗಳಿವೆ. ಪ್ರೀತಿಯಲ್ಲಿ ಬೀಳುವ ಕಾಲೇಜು ಹುಡುಗಿಯಾಗಿ, ಬಳಿಕ ಹೆಂಡತಿ, ನಂತರ ಗರ್ಭಿಣಿ ಹೀಗೆ ಒಂದು ದೊಡ್ಡ ಪಯಣವಿದೆ. ಯಾವಾಗಲೂ ಖುಷಿ ಹುಡುಕುವ ಮತ್ತು ಅಷ್ಟೇ ಭಾವನಾತ್ಮಕವಾಗಿರುವ ಪಾತ್ರವಿದು. ಇವೆಲ್ಲದರ ನಡುವೆ ನನಗೆ ಕರ್ನಾಟಕದ ಮೇಲೆ ಪ್ರೀತಿ ಹೆಚ್ಚಾಗಿದೆ. ಇದು ನನ್ನ ಎರಡನೇ ಮನೆ. ಕನ್ನಡದಲ್ಲಿ ಹಲವು ಆಫರ್‌ಗಳು ಬರುತ್ತಿದ್ದು, 'ಲವ್ ಲಿ' ಬಳಿಕ ಇನ್ನಷ್ಟು ಕನ್ನಡ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತೇನೆ' ಎಂದು ಅವರು ಹೇಳಿದ್ದಾರೆ.

ದೊಡ್ಡ ತಾರಾಬಳಗ

ಈ ಚಿತ್ರದಲ್ಲಿ ಹಿರಿಯ ನಟ ದತ್ತಣ್ಣ, ಮಾಸ್ಟರ್ ಆನಂದ್ ಪುತ್ರಿ ವಂಶಿಕಾ, ಸಮೀಕ್ಷಾ, ಮಾಳವಿಕ, ಶೋಭರಾಜ್, ಅಚ್ಯುತ್ ಕುಮಾರ್ ಮುಂತಾದವರ ದೊಡ್ಡ ತಾರಾಬಳಗವೇ ಇದೆ. ಅನೂಪ್ ಸೀಳಿನ್ ಸಂಗೀತ, ಅಶ್ವಿನ್ ಕೆನ್ನೆಡಿ ಛಾಯಾಗ್ರಹಣ, ಹರೀಶ್ ಕೊಮ್ಮೆ ಸಂಕಲನ ಈ ಚಿತ್ರಕ್ಕಿದೆ. ಈ ಬಗ್ಗೆ ಹೇಳಿರುವ ನಿರ್ದೇಶಕ ಚೇತನ್ ಕೇಶವ್, 'ಐದಾರು ಜಾನರ್‌ನ ಚಿತ್ರಗಳನ್ನು ಒಂದರಲ್ಲೇ ನೋಡಿದ ಅನುಭವ ಈ ಸಿನಿಮಾ ನೀಡುತ್ತದೆ' ಎಂದಿದ್ದಾರೆ. ಹಿರಿಯ ನಟ ದತ್ತಣ್ಣ 'ಈ ಚಿತ್ರದಲ್ಲಿ ದೊಡ್ಡ ಪಾತ್ರ ನಿರ್ವಹಿಸುವುದು ಒಳ್ಳೆಯ ಅನುಭವ. ಅದನ್ನು ತೋರಿಸಿದ ರೀತಿ ಅನನ್ಯ' ಎಂದಿದ್ದಾರೆ. ■

ದೇಸಾಯಿ ಚಿತ್ರಕ್ಕೆ ಅಶ್ವಿನಿ ಸಾಥ್

ನಾಗಿರೆಡ್ಡಿ ಭಡ ನಿರ್ದೇಶನದ ಹಾಗೂ 'ಲವ್ 360' ಸಿನಿಮಾ ಖ್ಯಾತಿಯ ಪ್ರವೀಣ್ ಕುಮಾರ್ ನಾಯಕರಾಗಿ ನಟಿಸಿರುವ 'ದೇಸಾಯಿ' ಸಿನಿಮಾದ ಹಾಡು ಇತ್ತೀಚೆಗೆ ರಿಲೀಸ್ ಆಗಿದೆ. ಉತ್ತರ ಕರ್ನಾಟಕದಲ್ಲಿ ನಡೆಯುವ ಕಥಾಹಂದರವಿರುವ ಈ ಚಿತ್ರದ 'ಒಲವು ಮೂಡುವ ಕಾಲವು' ಎಂಬ ಹಾಡನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ಬಿಡುಗಡೆ ಮಾಡಿದ್ದು, 'ಚಿತ್ರದ ಟೀಸರ್ ಹಾಗೂ ಹಾಡು ತುಂಬಾ ಚೆನ್ನಾಗಿವೆ' ಎಂದು ಹೇಳಿದ್ದಾರೆ.

ಈ ಹಾಡಿಗೆ ನಾಗೇಂದ್ರ ಪ್ರಸಾದ್ ಸಾಹಿತ್ಯ ಬರೆದಿದ್ದು, ಸಾಯಿಕಾರ್ತಿಕ್ ಸಂಗೀತದಲ್ಲಿ ವಿಜಯ್ ಪ್ರಕಾಶ್ ಹಾಗೂ ಅನುರಾಧಾ ಭಟ್ ಹಾಡಿದ್ದಾರೆ. ನಟ ಪ್ರವೀಣ್ ಕುಮಾರ್, ನಟಿ ರಾಧ್ಯ ಜತೆಗೆ 'ಒರಟ' ಸಿನಿಮಾ ಖ್ಯಾತಿಯ ಪ್ರಶಾಂತ್, ಚೆಲುವರಾಜು, ಮಧುಸೂದನ್ ರಾವ್, ಕಲ್ಯಾಣಿ, ಹರಿಣಿ, ನಟನ ಪ್ರಶಾಂತ್, ಮಂಜುನಾಥ್ ಹೆಗಡೆ, ಸ್ಮೃತಿ ಮುಂತಾದವರು ಇದರ ತಾರಾಬಳಗದಲ್ಲಿದ್ದಾರೆ. ■

ರಾಧ್ಯ, ಪ್ರವೀಣ್ ಕುಮಾರ್

ಅಶ್ವಿನಿ

ಹಸೆಮಣೆ ಏರಿದ ಐಶ್ವರ್ಯಾ ಸರ್ಜಾ

ಲವಲVK ಸುದ್ದಿಲೋಕ

feedbacklvk@vijaykarnataka.com

ನಟ ಅರ್ಜುನ್ ಸರ್ಜಾ ಪುತ್ರಿ ಹಾಗೂ ಕನ್ನಡದಲ್ಲಿ 'ಪ್ರೇಮ ಬರಹ' ಸಿನಿಮಾದಲ್ಲಿ ಅಭಿನಯಿಸಿರುವ ತಮಿಳು ನಟಿ ಐಶ್ವರ್ಯಾ ಅರ್ಜುನ್ ಸರ್ಜಾ ಇತ್ತೀಚೆಗೆ ತಮಿಳು ನಟ, ನಿರ್ದೇಶಕ ತಂಬಿ ರಾಮಯ್ಯ ಪುತ್ರ, ನಟ ಉಮಾಪತಿ ರಾಮಯ್ಯರೊಂದಿಗೆ ಸಪ್ತಪದಿ ತುಳಿದಿದ್ದಾರೆ. ಚೆನ್ನೈನ ಶ್ರೀಯೋಗಾಂಜನೇಯಸ್ವಾಮಿ ದೇವಸ್ಥಾನದಲ್ಲಿ ನಡೆದ ಈ ಮದುವೆಗೆ ನಟರಾದ ವಿಶಾಲ್, ಕಾರ್ತಿ, ಧ್ರುವ ಸರ್ಜಾ, ಜಗಪತಿ ಬಾಬು ಮುಂತಾದವರು ಆಗಮಿಸಿ ನೂತನ ದಂಪತಿಗೆ ಶುಭ ಕೋರಿದ್ದಾರೆ.

ಕೆಲವು ವರ್ಷಗಳಿಂದ ಪರಸ್ಪರ ಡೇಟಿಂಗ್ ನಲ್ಲಿದ್ದ ಐಶ್ವರ್ಯಾ ಅರ್ಜುನ್ ಮತ್ತು ಉಮಾಪತಿ ಈಗ ಸತಿಪತಿಯಾಗಿದ್ದು, ಇವರ ಮದುವೆ ರಿಸೆಪ್ಷನ್ ಜೂನ್ 14ರಂದು ಚೆನ್ನೈನಲ್ಲಿ ನಡೆಯಲಿದೆ. ಇವರ ಮದುವೆ ಫೋಟೊಗಳು ಸೋಷಿಯಲ್ ಮೀಡಿಯಾದಲ್ಲಿ ಗಮನ ಸೆಳೆದಿದ್ದು, ಅದರಲ್ಲಿ ವಧುವಿಗೆ ತಾಳಿ ಕಟ್ಟುವ, ವರನಿಗೆ ಹೂಮಾಲೆ ಹಾಕುವ, ಮಡಕೆಯಲ್ಲಿ ಉಂಗುರ ಹುಡುಕುವ ಫೋಟೊಗಳು ಮೆಚ್ಚುಗೆಗೆ ಪಾತ್ರವಾಗಿವೆ.

ಮದುವೆ ದಿನ ಐಶ್ವರ್ಯಾ ಅರ್ಜುನ್ ಸಾಂಪ್ರದಾಯಿಕ ಶೈಲಿಯ ಕೆಂಪು ಮತ್ತು ಹೊಂಬಣ್ಣ ಮಿಶ್ರಿತ ಕಾಂಜೀವರಂ ರೇಷ್ಮೆ ಸೀರೆ, ಜರ್ದೋಸಿ ಎಂಬ್ರಾಯ್ಡರಿಯ ಬ್ಲೌಸ್, ಟೆಂಪಲ್ ಆಭರಣಗಳನ್ನು ಧರಿಸಿ ಕಂಗೊಳಿಸಿದ್ದಾರೆ. ಖ್ಯಾತ ಫ್ಯಾಷನ್ ಡಿಸೈನರ್ ಗೌರಂಗ್ ಶಾ ವಿನ್ಯಾಸಗೊಳಿಸಿದ್ದ ಈ ಸುಂದರ ಸೀರೆಯ ಅಂಚಿನಲ್ಲಿ ಚಿನ್ನ ಹೊಳೆಯುವ ಕೆಂಪು ಬಣ್ಣದ ರೇಷ್ಮೆ ನೂಲಿನಲ್ಲಿ ಶ್ರೀರಾಮ ಪಟ್ಟಾಭಿಷೇಕದ ಚಿತ್ರಣವನ್ನು ನೇಯ್ದಿರುವುದು ವಿಶೇಷ. ಅವರ ಈ ಮದುವೆ ಸೀರೆ, ಲುಕ್ ಸದ್ಯಕ್ಕೆ ಟ್ರೆಂಡಿಂಗ್ ನಲ್ಲಿದೆ. ವರ ಉಮಾಪತಿ ಬಿಳಿ ಬಣ್ಣದ ರೇಷ್ಮೆ ಧೋತಿಧಾರಿಯಾಗಿ ಮಿಂಚಿದ್ದಾರೆ. ■



ಉಮಾಪತಿ ರಾಮಯ್ಯ, ಐಶ್ವರ್ಯಾ



ಸೇನೆಯಿಂದ ಮರಳಿದ ಜಿನ್

ಲವಲVK ಸುದ್ದಿಲೋಕ

feedbacklvk@vijaykarnataka.com

ಕೊರಿಯನ್ ಪಾಪ್ ಬಾಯ್ಸ್ ಬ್ಯಾಂಡ್ 'ಬಿಟಿಎಸ್'ನ ಜನಪ್ರಿಯ ಗಾಯಕ ಜಿನ್, 18 ತಿಂಗಳ ಮಿಲಿಟರಿ ಸೇವೆ ಸಲ್ಲಿಸಿ ಇತ್ತೀಚೆಗೆ ವಾಪಸ್ಸಾಗಿದ್ದಾರೆ. ದಕ್ಷಿಣ ಕೊರಿಯಾದಲ್ಲಿ ಯುವಕರಿಗೆ ಸೇನೆಯಲ್ಲಿ ಅಲ್ಪಾವಧಿಯ ಸೇವೆ ಸಲ್ಲಿಸುವುದು ಕಡ್ಡಾಯವಾಗಿದ್ದು, ಇದರಂತೆ ಜಿನ್ ಕೂಡ ಕಳೆದ ವರ್ಷದ ಆರಂಭದಲ್ಲಿ ಮಿಲಿಟರಿಯಲ್ಲಿ ಅಸಿಸ್ಟೆಂಟ್ ಡ್ರಿಲ್ ಇನ್‌ಸ್ಪೆಕ್ಟರ್ ಆಗಿ 18 ತಿಂಗಳ ಕಾಲ ಸೇವೆ ಸಲ್ಲಿಸಿದ್ದರು. ಈಗ ಅವರು ತಮ್ಮ ಸೇವಾವಧಿ ಮುಗಿಸಿ ಮರಳಿದ್ದಾರೆ.

ಈ ಅವಧಿಯಲ್ಲಿ ಅವರ ಗಾಯನ ಪ್ರದರ್ಶನವನ್ನು ಸಿಕ್ಕಾಪಟ್ಟೆ ಮಿಸ್ ಮಾಡಿಕೊಂಡಿದ್ದ ಅವರ ಅಸಂಖ್ಯಾತ ಅಭಿಮಾನಿಗಳು ಈಗ ಜಿನ್‌ಗೆ ಭರ್ಜರಿ ಸ್ವಾಗತ ಕೋರಿದ್ದಾರೆ. ಶೀಘ್ರದಲ್ಲೇ ಅವರ ಹಾಡುಗಳನ್ನು ಕಣ್ತುಂಬಿಕೊಳ್ಳಲು ಕಾತರರಾಗಿದ್ದಾರೆ. ಇಂದು ಅಂದರೆ ಜೂನ್ 13ರಂದು 'ಬಿಟಿಎಸ್' ಬ್ಯಾಂಡ್‌ನ 11ನೇ ವಾರ್ಷಿಕೋತ್ಸವ ಸಮಾರಂಭ ನಡೆಯಲಿದ್ದು, ಇದರಲ್ಲಿ ಜಿನ್ ಪಾಲ್ಗೊಳ್ಳುತ್ತಿದ್ದಾರೆ. ಬಿಟಿಎಸ್‌ನ ಇತರ ಗಾಯಕರು ಕೂಡ ಜಿನ್‌ರೊಂದಿಗೆ ಪಾರ್ಟಿ ಮಾಡಿ ಸ್ನೇಹಿತನನ್ನು ಸಂತಸದಿಂದ ಬರಮಾಡಿಕೊಂಡಿದ್ದಾರೆ. ಈ ಕುರಿತ ಫೋಟೊ ಶೇರ್ ಮಾಡಿ 'ಜಿನ್ ಇಸ್ ಬ್ಯಾಕ್' ಎಂದು ಬರೆದಿದ್ದಾರೆ.

ಇತ್ತೀಚೆಗೆ ತಮ್ಮ ಅಭಿಮಾನಿಗಳೊಂದಿಗೆ ಲೈವ್ ಸೆಷನ್ ನಡೆಸಿರುವ ಜಿನ್, ಶೀಘ್ರದಲ್ಲೇ ತಾವು ಅಭಿಮಾನಿಗಳನ್ನು ಎದುರುಗೊಳ್ಳುವ ದೊಡ್ಡ ಕಾರ್ಯಕ್ರಮದೊಂದಿಗೆ ಬರುವುದಾಗಿ ಹೇಳಿದ್ದಾರೆ. ಇದಲ್ಲದೆ ಅನೇಕ ಸೋಲೋ ಕಾರ್ಯಕ್ರಮಗಳು ಕೂಡ ಅವರ ಲೈನಪ್‌ನಲ್ಲಿವೆ. ■

ಕ್ರೂಸ್ ವೆಡ್ಡಿಂಗ್‌ಗೆ ಬಂತು ಡಿಮ್ಯಾಂಡ್

ಶುಭಾ ವಿಕಾಸ್

shubha.hegde@timesgroup.com

ನೀರ ಮೇಲಿನ ಯಾನದಲ್ಲಿ ಎದುರಾಗುವ ಪ್ರತಿ ಅಲೆಯಲ್ಲೂ ಪ್ರೀತಿಯ ಸೆಳೆತ. ಬಾನು ಕೆಂಪೇರುವ ಹೊತ್ತಿನ ತಂಗಾಳಿಗೆ ರೋಮಾಂಚನಗೊಳ್ಳುವ ಮನದ ತುಂಬೆಲ್ಲ ಮದುವೆಯದ್ದೇ ಕನವರಿಕೆ. ಇಬ್ಬರನ್ನು ಒಂದೇ ಬದುಕಿನ ಪಯಣದಲ್ಲಿ ಜೊತೆಯಾಗಿಸುವ ನೌಕೆ ಈಗ ವಿವಾಹ ವೇದಿಕೆ.

ಹೌದು, ಡೆಸ್ಟಿನೇಷನ್ ವೆಡ್ಡಿಂಗ್‌ನಲ್ಲಿ ಈಗ ಕ್ರೂಸ್ ವೆಡ್ಡಿಂಗ್ ಡಿಮ್ಯಾಂಡ್‌ನಲ್ಲಿದ್ದು, ಸದ್ಯಕ್ಕೆ ಹಡಗಿನಲ್ಲಿ ನಡೆಯುತ್ತಿರುವ ಅನಂತ್ ಅಂಬಾನಿ ಹಾಗೂ ರಾಧಿಕಾ ಮರ್ಚೆಂಟ್ ವಿವಾಹಪೂರ್ವ ಮಹೋತ್ಸವ ದೇಶವಿದೇಶಗಳ ಗಮನ ಸೆಳೆದಿದೆ. ಇದಕ್ಕೆ ಪೂರಕವಾಗಿ ಆ ರೀತಿ ವಿವಾಹವಾಗುವ ಸಾಮಾನ್ಯರ ಕನಸನ್ನು ನನಸು ಮಾಡಲು ವಿವಾಹ ಆಯೋಜಕರು ಹಾಗೂ ದೇಶೀಯ ಹಾಗೂ ಅಂತಾರಾಷ್ಟ್ರೀಯ ಖ್ಯಾತ ಹಡಗು ಕಂಪನಿಗಳು ವಿಶೇಷ ಗಮನ ಹರಿಸುತ್ತಿದ್ದು, ಆಕರ್ಷಕ ಪ್ಯಾಕೇಜ್‌ಗಳ ಮೂಲಕ ಜನಸಾಮಾನ್ಯರನ್ನು ಸೆಳೆಯಲು ಮುಂದಾಗಿವೆ.

ಹೆಚ್ಚಲಿದೆ ಬೇಡಿಕೆ: ಕೆಲವು ವರ್ಷಗಳಿಂದಲೂ ಚಾಲ್ತಿಯಲ್ಲಿರುವ ಡೆಸ್ಟಿನೇಷನ್ ವೆಡ್ಡಿಂಗ್‌ನಲ್ಲಿ ಕ್ರೂಸ್ ವೆಡ್ಡಿಂಗ್ ಕೂಡ ಆಗಾಗ ಗಮನ ಸೆಳೆಯುತ್ತಿತ್ತು. ಆದರೆ ಮುಂದಿನ ದಿನಗಳಲ್ಲಿ ಇದು ಸೀಮಿತ ವಲಯ ದಾಟಿ ಜನಸಾಮಾನ್ಯರನ್ನು ತಲುಪುವ ಮೂಲಕ ಇನ್ನಷ್ಟು ಜನಪ್ರಿಯವಾಗುವ ಸಾಧ್ಯತೆ ಇದೆ. ಈ ಮೂಲಕ ಪ್ರವಾಸ ಹಾಗೂ ವಿವಾಹ ಉದ್ಯಮವನ್ನು ವಿಸ್ತರಿಸಲು ಮತ್ತು ಗ್ರಾಹಕರನ್ನು ಸೆಳೆಯಲು ವಿವಾಹ ಆಯೋಜಕರು ಮುಂದಾಗಿದ್ದಾರೆ. 'ಅನಂತ್ ಅಂಬಾನಿ ಹಾಗೂ ರಾಧಿಕಾ ಮರ್ಚೆಂಟ್ ವಿವಾಹಪೂರ್ವ ಮಹೋತ್ಸವವನ್ನು ಕಣ್ತುಂಬಿಕೊಂಡವರು ಹಡಗಿನಲ್ಲಿ ತಮ್ಮ ವಿವಾಹವನ್ನು ಅದ್ದೂರಿಯಾಗಿ ಮಾಡಿಕೊಳ್ಳಲು ಬಯಸುತ್ತಿದ್ದಾರೆ. ಅಂಥವರು ಈ ಸಂಬಂಧ ವಿವಾಹ ಆಯೋಜನೆಯ ವಿವರ ಕೇಳುತ್ತಿದ್ದಾರೆ. ತಮ್ಮ ಹಡಗು ಸುಂದರ ವಿವಾಹ ಸಮಾರಂಭಕ್ಕೆ ಲಭ್ಯ ಎನ್ನುವ ಕ್ರೂಸ್ ಸಂಸ್ಥೆಗಳು ವಿವಾಹ ಆಕಾಂಕ್ಷಿಗಳನ್ನು ತಮ್ಮತ್ತ ಸೆಳೆಯಲು ಪ್ರೇರೇಪಿಸುತ್ತಿವೆ' ಎನ್ನುತ್ತಾರೆ ಸೆಲೆಬ್ರಿಟಿ ವಿವಾಹ ಆಯೋಜಕ ಧ್ರುವ ಕುಮಾರ್.

ಆಕರ್ಷಕ ಪ್ಯಾಕೇಜ್: ಕನಸಿನ ಮದುವೆಗೆ ಅಗತ್ಯ ಸೌಕರ್ಯ ಕಲ್ಪಿಸಲು ಸಿದ್ಧ ಎನ್ನುತ್ತವೆ ಕ್ರೂಸ್ ಸಂಸ್ಥೆಗಳು. ಮಂಟಪ, ವೆಡ್ಡಿಂಗ್ ಫೋಟೊಶೂಟ್, ಆಹಾರ ಸೇರಿದಂತೆ ಬರುವ ಅತಿಥಿಗಳಿಗೆ ಮನರಂಜನೆ ನೀಡಲು ಸಿದ್ಧ ಎನ್ನುವ ವಿದೇಶಿ ಹಡಗು ಕಂಪನಿಗಳು ಭಾರತೀಯ ವಿವಾಹ ಆಯೋಜಕರನ್ನು ಹೆಚ್ಚು ಸೆಳೆಯಲು ಪ್ರಯತ್ನಿಸುತ್ತಿವೆ ಎನ್ನಲಾಗಿದೆ. ಇದಕ್ಕಾಗಿ ಮನರಂಜನೆ, ವಿಶ್ರಾಂತಿ, ಪ್ರವಾಸ, ಮದುವೆ ಸಂಪ್ರದಾಯ ಹೀಗೆ ಒಂದಿಡೀ ಮದುವೆ ಮೋಜು, ಮಸ್ತಿಯೊಂದಿಗೆ ಆರಾಮದಾಯಕ ಎನಿಸುವ ಆಕರ್ಷಕ ಪ್ಯಾಕೇಜ್‌ಗಳನ್ನು ನೀಡಲಾಗುತ್ತದೆ. ಆದರೆ ವೈಯಕ್ತೀಕರಿಸಿದ ಪ್ಯಾಕೇಜ್‌ಗಳು ಗ್ರಾಹಕರ ಅಭಿರುಚಿ, ಬಜೆಟ್‌ಗೆ ಅನುಗುಣವಾಗಿರುತ್ತವೆ ಎನ್ನಲಾಗಿದೆ.

ವಿಭಿನ್ನ ಅನುಭವ: ಮದುವೆಯ ಹೊರತಾಗಿ ಹುಟ್ಟುಹಬ್ಬ, ಮದುವೆ ವಾರ್ಷಿಕೋತ್ಸವ, ಬೇಬಿ ಶವರ್, ಬ್ಯಾಚುಲರ್ ಪಾರ್ಟಿಗಳು ಸಹ ಕ್ರೂಸ್‌ನಲ್ಲಿ ನಡೆಯುತ್ತವೆ. ವಿಭಿನ್ನ ಅನುಭವ, ಅನ್ವೇಷಣಾ ಮನೋಭಾವದವರನ್ನು ಕ್ರೂಸ್‌ಗಳು ಹೆಚ್ಚು ಸೆಳೆಯುತ್ತವೆ.

ಡೆಸ್ಟಿನೇಷನ್ ವೆಡ್ಡಿಂಗ್

ಅಂಬಾನಿ ಪ್ರಿ ವೆಡ್ಡಿಂಗ್ ಮೋಡಿ

ಐಷಾರಾಮಿ ಹಡಗಿನಲ್ಲಿ ನಡೆಯುತ್ತಿರುವ ಅನಂತ್ ಅಂಬಾನಿಯ ವಿವಾಹಪೂರ್ವ ಸಮಾರಂಭ ಗಮನ ಸೆಳೆಯುತ್ತಿದ್ದು, ಮುಂದಿನ ದಿನಗಳಲ್ಲಿ ಇಂಥ ಕ್ರೂಸ್ ವೆಡ್ಡಿಂಗ್ ಬೇಡಿಕೆ ಸೃಷ್ಟಿಸಿಕೊಳ್ಳಲಿದೆ ಎನ್ನಲಾಗಿದೆ.

ರಾಧಿಕಾ ಮರ್ಚೆಂಟ್, ಅನಂತ್ ಅಂಬಾನಿ

ಸೆಲೆಬ್ರಿಟಿಗಳ ಹೊರತಾಗಿಯೂ ಸಾಮಾನ್ಯರು ಕೂಡ ಕ್ರೂಸ್ ವೆಡ್ಡಿಂಗ್ ಬಗ್ಗೆ ವಿಚಾರಿಸುತ್ತಿದ್ದಾರೆ. ಈಗಾಗಲೇ ಬೆಂಗಳೂರು, ಹೈದರಾಬಾದ್ ಮತ್ತಿತರ ಕಡೆಯಿಂದ ಈ ಕುರಿತ ಕರೆ ಸ್ವೀಕರಿಸಿದ್ದೇವೆ. ಮುಂದಿನ ದಿನಗಳಲ್ಲಿ ಇದಕ್ಕೆ ಇನ್ನಷ್ಟು ಬೇಡಿಕೆ ಹೆಚ್ಚಲಿದ್ದು, ಇದಕ್ಕಾಗಿ ಆರು ತಿಂಗಳಿಂದ ಹಿಡಿದು ವರ್ಷದ ಮುಂಚೆ ಬುಕಿಂಗ್ ಮಾಡಿಕೊಳ್ಳಬೇಕು. ಹಡಗಿನಲ್ಲಿ ನಡೆಯುವ ವಿವಾಹಕ್ಕಾಗಿಯೇ ಕಸ್ಟಮೈಸ್ಡ್ ವೆಡ್ಡಿಂಗ್ ಪ್ಯಾಕೇಜ್‌ಗಳು ಲಭ್ಯ ಇವೆ.

-ಅಶೋಕ್ | ಇಂಟರ್‌ನ್ಯಾಷನಲ್ ಕ್ರೂಸ್ ಸಂಸ್ಥೆಯೊಂದರ ಭಾರತೀಯ ಅಧಿಕಾರಿ

ಆದರೆ ಹವಾಮಾನ, ಋತು ಕೂಡ ಇಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಅಲ್ಲದೆ ಇಂಥ ಸಮಾರಂಭವನ್ನು ತಕ್ಷಣಕ್ಕೆ ಯೋಜಿಸಲು ಸಾಧ್ಯವಿಲ್ಲ. ಇದಕ್ಕೆ ವರ್ಷಗಟ್ಟಲೆ ಮೊದಲೇ ಯೋಜನೆ ರೂಪಿಸಬೇಕು ಮತ್ತು ಕಡಿಮೆ ಜನರಿರುವ ಸಮಾರಂಭಕ್ಕೆ ಮಾತ್ರ ಇದು ಸೂಕ್ತ ಎನ್ನುತ್ತಾರೆ ಕ್ರೂಸ್ ಇವೆಂಟ್ ಆಯೋಜಕರು.

ಭಾರತದಲ್ಲಿ ಅಂಡಮಾನ್, ಗೋವಾ, ಮುಂಬಯಿ, ಕೋಲ್ಕತಾ ಸೇರಿದಂತೆ ಭಾರತೀಯ ಜಲಮಾರ್ಗದಲ್ಲಿ ಸಂಚರಿಸುವ ಹಲವು ಹಡಗುಗಳು ಸಹ ವಿವಾಹ ಆಯೋಜಿಸುವುದರಿಂದ ಇಲ್ಲಿ ಬಜೆಟ್ ಫ್ರೆಂಡ್ಲಿಯಾಗಿ ಹಾಗೂ ಕಡಿಮೆ ದಿನಗಳ ಜಲಸಂಚಾರದ ಮೂಲಕ ಹಡಗಿನಲ್ಲಿ ವಿವಾಹವಾಗುವ ಕನಸನ್ನು ಈಡೇರಿಸಿಕೊಳ್ಳಬಹುದು. ಈ ಮೂಲಕ ಈಗ ಹಡಗು ಕೇವಲ ಜಲಸಾರಿಗೆಗೆ ಸೀಮಿತವಾಗದೆ ಮದುವೆಯಂತಹ ಕಾರ್ಯಕ್ರಮಗಳಿಗೆ ಪ್ರಮುಖ ವೇದಿಕೆಯಾಗಿ ಬದಲಾಗುತ್ತಿದೆ. ■

ಬರಲಿದೆ ಕಿರಣ್ ಬೇಡಿ ಬಯೋಪಿಕ್

ಲವಲVK ಸುದ್ದಿಲೋಕ

feedbacklvk@vijaykarnataka.com

ದೇಶದ ಮೊದಲ ಮಹಿಳಾ ಐಪಿಎಸ್ ಅಧಿಕಾರಿಯಾಗಿ, ಪ್ರತಿ ಹೆಣ್ಣುಮಕ್ಕಳಿಗೆ ಸ್ಫೂರ್ತಿ ನೀಡಿದ ಮತ್ತು ಮಹಿಳೆಯರು ಕೂಡ ತಮಗಿರುವ ಎಲ್ಲೆಗಳನ್ನು ಮೀರಿ ಪುರುಷ ಪ್ರಧಾನ ಸಮಾಜದಲ್ಲಿ ಉನ್ನತ ಸ್ಥಾನಮಾನ ಪಡೆಯಬಹುದು ಎಂದು ಸಾಬೀತುಪಡಿಸಿದ ಐಪಿಎಸ್ ಕಿರಣ್ ಬೇಡಿ ಕುರಿತ ಬಯೋಪಿಕ್ ಸೆಟ್ಟೇರಿದೆ. 'ಬೇಡಿ: ದಿ ನೇಮ್ ಯು ನೋ, ದಿ ಸ್ಟೋರಿ ಯು ಡೋಂಟ್ ನೋ' ಎಂಬ ಟೈಟಲ್‌ನ ಈ ಸಿನಿಮಾವನ್ನು ಕುಶಾಲ್ ಚಾವ್ಲಾ ನಿರ್ದೇಶನ ಮಾಡುತ್ತಿದ್ದಾರೆ.

ಈ ಬಗ್ಗೆ ಹೇಳಿರುವ ಕಿರಣ್ ಬೇಡಿ, 'ನನ್ನ ಜೀವನ ತನ್ನ ಗುರಿ ತಲುಪಿದೆ. ಯಾಕೆಂದರೆ 75ನೇ ವಯಸ್ಸಿನಲ್ಲೂ ನಾನು ಎನರ್ಜೆಟಿಕ್ ಆಗಿದ್ದೇನೆ ಮತ್ತು ನನಗೆ ಎಲ್ಲವೂ ಸಿಕ್ಕಿದೆ. ಈಗ ಇವುಗಳನ್ನೆಲ್ಲ ಮರಳಿ ಸಮಾಜಕ್ಕೆ ಕೊಡುವ ಸಮಯ ಬಂದಿದೆ. ನನಗೆ ಎಲ್ಲವನ್ನೂ ಕೊಟ್ಟ ಈ ಜಗತ್ತಿಗೆ, ಸಮಾಜಕ್ಕೆ, ಸಮುದಾಯಕ್ಕೆ, ಜನರಿಗೆ, ಇಲಾಖೆಗೆ, ಸಹೋದ್ಯೋಗಿಗಳಿಗೆ, ತಂಡಕ್ಕೆ ಮತ್ತು ನನಗೆ ಸದಾ ಜತೆಯಾದ ಕುಟುಂಬಕ್ಕೆ ನಾನೀಗ ಮರಳಿ ಕೊಡಬೇಕಾಗಿದೆ. ಇವುಗಳನ್ನೆಲ್ಲಾ ಈ ಸಿನಿಮಾ ತೋರಿಸಲಿದೆ' ಎಂದಿದ್ದಾರೆ.

ಈ ಸಿನಿಮಾದಲ್ಲಿ ಬೇಡಿ ಪಾತ್ರ ಯಾರು ಮಾಡಲಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಅವರು, 'ಈ ಬಗ್ಗೆ ಒಂದು ಪೋಲ್ ಶುರು ಮಾಡಿ. ಜನರು ಯಾರನ್ನು ಸೂಚಿಸುತ್ತಾರೆ ಎಂದು ನೋಡುವ' ಎಂದು ಹೇಳಿದ್ದಾರೆ. ಈ ಸಿನಿಮಾ ಮುಂಬರುವ ವರ್ಷದಲ್ಲಿ ನಡೆಯಲಿರುವ 50ನೇ ಅಂತಾರಾಷ್ಟ್ರೀಯ ಮಹಿಳಾ ದಿನದಂದು ಬಿಡುಗಡೆಯಾಗಲಿದೆ. ■



ಕಿರಣ್ ಬೇಡಿ

RNI No. KARKAN/2016/71628

Printed and Published by R J Prakashan on behalf of Metropolitan Media Company Limited., Published at 74/2,Sanjana Plaza,4th&5th Floor,Elephant Rock Road,Jayanagar 3rd block,Bengaluru-560011, Ph: 080 40877666 and Printed at (a) Bennett Coleman & Co Ltd, The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099. (b) Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) MMetropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) Metropolitan Media Co. Ltd, Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g) Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. Regd. Office: 74/2,Sanjana Plaza,4th&5th Floor,Elephant Rock Road,Jayanagar 3rd block,Bengaluru-560011, (Ph:080-40877666). Editor: Sudarshan Channangihalli. © All Rights Reserved. Reproduction in whole or part without permission is prohibited.

ಕತಾರ್‌ನ ವಿವಾದಾತ್ಮಕ ಗೋಲ್ ಕುರಿತ ತನಿಖೆಗೆ ಎಐಎಫ್‌ಎಫ್ ಆಗ್ರಹ

ಹೊಸದಿಲ್ಲಿ: ದೋಹಾದಲ್ಲಿ ನಡೆದ ನಿರ್ಣಾಯಕ 2026ರ ವಿಶ್ವಕಪ್ ಅರ್ಹತಾ ಪಂದ್ಯದಲ್ಲಿ ಕತಾರ್‌ಗೆ ನೀಡಲಾದ ವಿವಾದಾತ್ಮಕ ಗೋಲ್‌ನ ಕುರಿತು ತನಿಖೆ ನಡೆಸುವಂತೆ ಅಖಿಲ ಭಾರತ ಫುಟ್ಬಾಲ್ ಫೆಡರೇಶನ್ (ಎಐಎಫ್‌ಎಫ್) ಅಧ್ಯಕ್ಷ ಕಲ್ಯಾಣ್ ಚೌಬೆ ಆಗ್ರಹಿಸಿದ್ದಾರೆ.

ಜಸ್ಸಿಮ್ ಬಿನ್ ಹಮದ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ದಕ್ಷಿಣ ಕೊರಿಯಾದ ರೆಫರಿ ಕಿಮ್ ವೂ-ಸಂಗ್ ಅವರು ಅನುಮತಿಸಿದ ಗೋಲಿನ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಭಾರತ ಕೋರಿದೆ ಎಂದು ಎಐಎಫ್‌ಎಫ್ ಮುಖ್ಯಸ್ಥರು ಬುಧವಾರ ತಿಳಿಸಿದ್ದಾರೆ. ''ಗೆಲುವು ಮತ್ತು ಸೋಲು ಆಟದ ಅವಿಭಾಜ್ಯ ಅಂಗ, ನಾವು ಗೌರವಯುತವಾಗಿ ಸ್ವೀಕರಿಸಲು ಕಲಿತಿದ್ದೇವೆ. ಆದರೂ ನಿನ್ನೆ ರಾತ್ರಿ ಭಾರತದ ವಿರುದ್ಧ ಗಳಿಸಿದ 2 ಗೋಲುಗಳಲ್ಲಿ ಒಂದು ಕೆಲವು ಪ್ರಶ್ನೆಗಳಿಗೆ ಉತ್ತರಿಸದೆ ಉಳಿದಿದೆ,'' ಎಂದು ಚೌಬೆ ಹೇಳಿಕೆಯಲ್ಲಿ ತಿಳಿಸಿದ್ದಾರೆ.

2026ರ ಆವೃತ್ತಿಯ ಫಿಫಾ ವಿಶ್ವಕಪ್ ಅರ್ಹತಾ ಸುತ್ತಿನ ಮೂರನೇ ಸುತ್ತಿಗೆ ಮೊದಲ ಬಾರಿಗೆ ಅರ್ಹತೆ ಗಳಿಸಬೇಕಿದ್ದ ಭಾರತೀಯರನ್ನು ಈ ಗೋಲು ವಂಚಿತರನ್ನಾಗಿಸಿದ್ದರಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

''ಫಿಫಾ ವಿಶ್ವಕಪ್ ಕ್ವಾಲಿಫೈಯರ್ ರೌಂಡ್ 3ರಲ್ಲಿ ಸ್ಥಾನ ಪಡೆಯಲು ಪ್ರಾಯೋಗಿಕವಾಗಿ ನಮಗೆ ನಷ್ಟವನ್ನುಂಟು ಮಾಡಿದ ಗಂಭೀರ ಮೇಲ್ವಿಚಾರಣೆ ದೋಷದ ಬಗ್ಗೆ ನಾವು ಫಿಫಾ ಅರ್ಹತಾ ಮುಖ್ಯಸ್ಥರು, ಎಎಫ್‌ಸಿ ರೆಫರಿಗಳ ಮುಖ್ಯಸ್ಥರು ಮತ್ತು ಮ್ಯಾಚ್ ಕಮಿಷನರ್‌ಗೆ ಪತ್ರ ಬರೆದಿದ್ದೇವೆ. ಅದರ ತೀವ್ರತೆಯನ್ನು ಗಮನದಲ್ಲಿಟ್ಟುಕೊಂಡು, ಸಮಗ್ರ ತನಿಖೆಗಾಗಿ ನಾವು ಸಂಬಂಧಪಟ್ಟ ಅಧಿಕಾರಿಗಳನ್ನು ಕೋರುತ್ತೇವೆ. ಅನ್ಯಾಯವನ್ನು ಸರಿಪಡಿಸಲು ಕ್ರೀಡಾ ಮನೋಭಾವದ ಸಾಧ್ಯತೆಗಳನ್ನು ಅನ್ವೇಷಿಸಲು ನಾವು ಅವರನ್ನು ಒತ್ತಾಯಿಸಿದ್ದೇವೆ ಮತ್ತು ಫಿಫಾ ಮತ್ತು ಎಎಫ್‌ಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತವೆ,'' ಎಂದು ನಾವು ನಂಬುತ್ತೇವೆ ಎಂದು ಅವರು ಹೇಳಿದ್ದಾರೆ.

ಇರಾನ್‌ನ ಹಮೀದ್ ಮೊಮೆನಿ ಪಂದ್ಯದ ಕಮಿಷನರ್ ಆಗಿದ್ದರು. ಈ ಪಾತ್ರಕ್ಕೆ ಅವರು ಪಂದ್ಯದ ಸಂಘಟನೆಯ ಮೇಲ್ವಿಚಾರಣೆ ಮತ್ತು ಆಟದ ಸಮಯದಲ್ಲಿ ಫಿಫಾ ನಿಯಮಗಳಿಗೆ ಬದ್ಧವಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು.

73ನೇ ನಿಮಿಷದಲ್ಲಿ ಅಬ್ದುಲ್ಲಾ ಅಲಹ್ರಾಕ್ ಗಳಿಸಿದ ಫ್ರೀ ಕಿಕ್ ಗೋಲಿನಿಂದ ಯೂಸುಫ್ ಅಯೆಮ್ ಗೋಲು ದಾಖಲಿಸಿದ್ದರು. ತಂಡದ ನಾಯಕ ಹಾಗೂ ಗೋಲ್ ಕೀಪರ್ ಗುರ್‌ಪ್ರೀತ್ ಸಿಂಗ್ ಸಂಧು ಗೋಲು ತಡೆದರು. ಆದರೆ ಚೆಂಡು ರೇಖೆಯ ಮೇಲೆ ಉರುಳುವುದನ್ನು ನೋಡುತ್ತಾ ಕನ್ನೋಡಿಯನ್ ನೆಲದ ಮೇಲೆ ಮಲಗಿದ್ದಾಗ, ಹಶ್ಮಿ ಹುಸೇನ್ ಅದನ್ನು ಮೈದಾನದ ಒಳಗೆ ತಳ್ಳಿದರು. ಐಮೆನ್ ಅದನ್ನು ನೆಟ್‌ನ ಒಳಗೆ ತಳ್ಳಿದರು.

ಚೆಂಡು ಆಟದಿಂದ ಹೊರಹೋಗಿದ್ದರಿಂದ, ಆಟವನ್ನು ನಿಲ್ಲಿಸಿ ನಂತರ ಕಾರ್ನರ್ ಕಿಕ್‌ನೊಂದಿಗೆ ಪುನರಾರಂಭಿಸಬೇಕಾಗಿತ್ತು. ಏಕೆಂದರೆ, ಚೆಂಡು ಮೈದಾನದ ಗೆರೆ ದಾಟುವ ಮೊದಲು ಅದನ್ನು ಸ್ಪರ್ಶಿಸಿದ ಸಂಧು ಕೊನೆಯ ಆಟಗಾರರಾಗಿದ್ದರು. ಆದರೆ, ಭಾರತೀಯ ಆಟಗಾರರ ಹತಾಶೆಗೆ, ರೆಫರಿ ಕತಾರ್‌ಗೆ ಗೋಲನ್ನು ನೀಡಿದರು ಮತ್ತು ಪ್ರವಾಸಿ ತಂಡವು ತೀವ್ರವಾಗಿ ಪ್ರತಿಭಟಿಸಿದರೂ, ಮೈದಾನದಲ್ಲಿನ ಅಧಿಕಾರಿ ತನ್ನ ನಿರ್ಧಾರವನ್ನು ಎತ್ತಿಹಿಡಿದರು.

ಫಿಫಾ ನಿಯಮಗಳ ಪ್ರಕಾರ, ಚೆಂಡನ್ನು ಸಂಪೂರ್ಣವಾಗಿ ಗೋಲ್ ಲೈನ್ ಮೇಲೆ ಅಥವಾ ನೆಲದ ಮೇಲೆ ಅಥವಾ ಗಾಳಿಯಲ್ಲಿ ಹಾದುಹೋದರೆ ಅದು ಆಟದಿಂದ ಹೊರಗುಳಿಯುತ್ತದೆ.

ವಿಶ್ವಕಪ್ ಕ್ವಾಲಿಫೈಯರ್ ಅರ್ಹತಾ ಸುತ್ತು

ಆಸ್ಟ್ರೇಲಿಯಾ ಒಲಿಂಪಿಕ್ ಈಜು ಟ್ರಯಲ್ಸ್

200 ಮೀ. ಫ್ರೀಸ್ಟೈಲ್‌ನಲ್ಲಿ ಟಿಟ್ಮಸ್ ವಿಶ್ವ ದಾಖಲೆ

ಬ್ರಿಸ್ಬೇನ್: ಅರಿಯಾರ್ನೆ ಟಿಟ್ಮಸ್ ಆಸ್ಟ್ರೇಲಿಯ ಒಲಿಂಪಿಕ್ ಈಜು ಟ್ರಯಲ್ಸ್‌ನ ಮಹಿಳೆಯರ 200 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಬುಧವಾರ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಫೈನಲ್ ಸ್ಪರ್ಧೆಯಲ್ಲಿ ಟಿಟ್ಮಸ್ 1 ನಿಮಿಷ 52.23 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದರು. ನ್ಯೂಜಿಲೆಂಡ್‌ನ ಕಳೆದ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೊಲ್ಲಿ ಒ'ಕಲ್ಲಾಘನ್ ನಿರ್ಮಿಸಿದ್ದ 1:52.85 ಸೆಕೆಂಡ್‌ಗಳ ದಾಖಲೆಯನ್ನು ಅಳಿಸಿ ಹಾಕಿದರು. 200 ಮತ್ತು 400 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಗಳಲ್ಲಿ ಒಲಿಂಪಿಕ್ ಚಾಂಪಿಯನ್ ಆಗಿರುವ ಟಿಟ್ಮಸ್, ಈಗ ಎರಡು ಸ್ಪರ್ಧೆಗಳಲ್ಲಿ ವಿಶ್ವ ದಾಖಲೆಯನ್ನು ಹೊಂದಿದ್ದಾರೆ. ''ನಿಜವಾಗಿಯೂ, ವಿಶ್ವ ದಾಖಲೆ ನಿರ್ಮಿಸಿರುವುದು ಖುಷಿಯ ಸಂಗತಿ,'' ಎಂದು ಸ್ಪರ್ಧೆಯ ಬಳಿಕ ಟಿಟ್ಮಸ್ ಹೇಳಿದ್ದಾರೆ.

ರಹಾನೆ ಸೇರಿ ಹಲವರಿಂದ ಅಮೋಲ್‌ಗೆ ಅಂತಿಮ ನಮನ

ಮುಂಬಯಿ: ನ್ಯೂಯಾರ್ಕ್‌ನಲ್ಲಿ ಇತ್ತೀಚೆಗೆ ನಿಧನ ಹೊಂದಿದ ಮುಂಬಯಿ ಕ್ರಿಕೆಟ್ ಸಂಸ್ಥೆ (ಎಂಸಿಎ) ಅಧ್ಯಕ್ಷ ಅಮೋಲ್ ಕಾಳೆ ಅವರಿಗೆ ಭಾರತ ಮತ್ತು ಮುಂಬಯಿ ಆಟಗಾರರಾದ ಅಜಿಂಕ್ಯ ರಹಾನೆ, ಧವಳ್ ಕುಲಕರ್ಣಿ ಸೇರಿದಂತೆ ಕ್ರಿಕೆಟ್ ವಲಯದ ಹಲವಾರು ಗಣ್ಯರು ಬುಧವಾರ ಅಂತಿಮ ನಮನ ಸಲ್ಲಿಸಿದರು.

ಜೂನ್ 9 ಮತ್ತು 10 ರ ಮಧ್ಯರಾತ್ರಿ ಹೃದಯ ಸ್ತಂಭನದಿಂದ ನಿಧನರಾದ ನಂತರ ಕಾಳೆ ಅವರ ಪಾರ್ಥಿವ ಶರೀರವನ್ನು ಬುಧವಾರ ಮಧ್ಯಾಹ್ನ ಮುಂಬಯಿಗೆ ತರಲಾಯಿತು. ಪ್ರಸ್ತುತ ನಡೆಯುತ್ತಿರುವ ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನ ವಿರುದ್ಧದ ಭಾರತದ ಪಂದ್ಯವನ್ನು ವೀಕ್ಷಿಸಲು 47 ವರ್ಷದ ಕಾಳೆ ಎಂಸಿಎ ಮತ್ತು ಬಿಸಿಸಿಐ ಇತರ ಕೆಲವು ಅಧಿಕಾರಿಗಳೊಂದಿಗೆ ನ್ಯೂಯಾರ್ಕ್‌ನಲ್ಲಿದ್ದರು. ''ಎಂಸಿಎ ಅಧ್ಯಕ್ಷ ಅಮೋಲ್ ಕಾಳೆ ಅವರ ಹಠಾತ್ ನಿಧನದ ಸುದ್ದಿ ತೀವ್ರ ದುಃಖ ತಂದಿದೆ. ಮುಂಬಯಿ ಕ್ರಿಕೆಟ್‌ಗೆ ಅವರ ಸಮರ್ಪಣೆ ಅನುಕರಣೀಯವಾಗಿದೆ. ಈ ಕಷ್ಟದ ಸಮಯದಲ್ಲಿ ಅವರ ಕುಟುಂಬ ಮತ್ತು ಸ್ನೇಹಿತರಿಗೆ ತೀವ್ರ ಸಂತಾಪಗಳು,'' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಡಾಲ್-ಅಲ್ಕರಾಜ್ ಕಣಕ್ಕೆ

ಮ್ಯಾಡ್ರಿಡ್: ರಾಫೆಲ್ ನಡಾಲ್ ಮತ್ತು ಕಾರ್ಲೋಸ್ ಅಲ್ಕರಾಜ್ ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಸ್ಪೇನ್ ಅನ್ನು ಪ್ರತಿನಿಧಿಸಲಿದ್ದಾರೆ ಎಂದು ಸ್ಪೇನ್ ಟೆನಿಸ್ ಒಕ್ಕೂಟ ಬುಧವಾರ ಹೇಳಿದೆ. 21 ವರ್ಷದ ಅಲ್ಕರಾಜ್ ಮೊದಲ ಸಲ ಫ್ರೆಂಚ್ ಓಪನ್ ಗೆದ್ದ ಮೂರು ದಿನಗಳ ನಂತರ ಈ ನಿರ್ಧಾರ ಹೊರಬಿದ್ದಿದೆ. 38 ವರ್ಷದ ನಡಾಲ್ ಈಗಾಗಲೇ ಸಿಂಗಲ್ಸ್ (2008) ಮತ್ತು ಡಬಲ್ಸ್‌ನಲ್ಲಿ (2016-ಮಾರ್ಕ್ ಲೋಪೆಜ್) ಒಲಿಂಪಿಕ್ ಪದಕ ಜಯಿಸಿದ್ದಾರೆ.

ರಾಜ್ಯದ ಸ್ನೇಹಾ, ಅಭಿನಯಗೆ ಸ್ವರ್ಣ

ಇಂಡಿಯನ್ ಗ್ರ್ಯಾನ್ ಪ್ರಿ -3

ಸ್ನೇಹಾ ಎಸ್.ಎಸ್.



ಅಭಿನಯ ಶೆಟ್ಟಿ

■ ವಿಕ ಸುದ್ದಿಲೋಕ ಬೆಂಗಳೂರು

ಕರ್ನಾಟಕದ ಸ್ನೇಹಾ ಎಸ್.ಎಸ್. ಇಂಡಿಯನ್ ಗ್ರ್ಯಾನ್ ಪ್ರಿ-3 ಕೂಟದ ಮಹಿಳೆಯರ 100 ಮೀಟರ್ ಸ್ಪರ್ಧೆಯಲ್ಲಿ ಸ್ವರ್ಣ ಪದಕ ಗೆಲ್ಲುವ ಮೂಲಕ ಗಮನ ಸೆಳೆದರು.

ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಒಂದು ದಿನದ ಸ್ಪರ್ಧೆಯಲ್ಲಿ ಸ್ನೇಹಾ 11.41 ಸೆಕೆಂಡ್‌ಗಳಲ್ಲಿ ಅಗ್ರಸ್ಥಾನಿಯಾಗಿ ಗುರಿ ತಲುಪಿದರು. ಸ್ನೇಹಾಗೆ ತಮಿಳುನಾಡಿನ ಪ್ರೊತೀಮ ನೀಡಿದ ತಮಿಳುನಾಡಿನ ಅಭಿನಯ ರಾಜರಾಜನ್ (11.60 ಸೆ.) ದ್ವಿತೀಯ ಸ್ಥಾನ ಪಡೆದರೆ, ರಾಜ್ಯದವರಾದ ವಿ. ಸುಧೀಕ್ಷಾ (11.75 ಸೆ.) ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟರು. ಇದೇ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಕರ್ನಾಟಕದ ಮಣಿಕಂಠ ಹೋಬಳಿದಾರ್ (10.65 ಸೆ.) ದ್ವಿತೀಯ ಸ್ಥಾನ ಗಳಿಸಿದರೆ, ತಮಿಳುನಾಡಿನ ರಾಘುಲ್ ಕುಮಾರ್ ಜಿ. (10.56 ಸೆ.) ಮೊದಲ ಸ್ಥಾನ ಅಲಂಕರಿಸಿದರು.

ಪೂವಮ್ಮಗೆ ಕಂಚು: ಮಹಿಳೆಯರ 400 ಮೀಟರ್ ಸ್ಪರ್ಧೆಯಲ್ಲಿ 52.62 ಸೆಕೆಂಡ್‌ಗಳಲ್ಲಿ ಮೂರನೇ ಸ್ಥಾನಿಯಾಗಿ ಗುರಿ ಮುಟ್ಟಿದ ಹಿರಿಯ ಅಥ್ಲೀಟ್ ಪೂವಮ್ಮ ರಾಜು, ಕಂಚಿನ ಪದಕಕ್ಕೆ ಕೊರಳೊಡ್ಡಿದರೆ, ಆಂಧ್ರಪ್ರದೇಶದ ದಂಡಿ ಜ್ಯೋತಿಕಾ (51.53 ಸೆ.) ಮತ್ತು ತಮಿಳುನಾಡಿನ ಸುಭಾ ವೆಂಕಟೇಶನ್ (52.34 ಸೆ.) ದ್ವಿತೀಯ ಸ್ಥಾನ ಗಳಿಸಿದರು. ಏತನ್ಮಧ್ಯೆ, ಮಹಿಳೆಯರ ಹೈಜಂಪ್ ಸ್ಪರ್ಧೆಯಲ್ಲಿ ಕರ್ನಾಟಕದ ಪ್ರತಿಭಾನ್ವಿತ ಅಥ್ಲೀಟ್ ಅಭಿನಯ ಶೆಟ್ಟಿ 1.74 ಮೀಟರ್ ಎತ್ತರ ಜಿಗಿಯುವ ಮೂಲಕ ಚಿನ್ನ ಪದಕವನ್ನು ಗೆದ್ದುಕೊಂಡರೆ, ತಮಿಳುನಾಡಿನ ಕೆವಿನಾ ಅಶ್ವಿನಿ ಅಣ್ಣಾವಿ (1.65 ಮೀ.) ದ್ವಿತೀಯ ಸ್ಥಾನ ಗಳಿಸಿದರು.

ಆರ್ಯಗೆ ಬಂಗಾರ: ಕರ್ನಾಟಕದ ಆರ್ಯ ಎಸ್. ಪುರುಷರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಮೊದಲ ಸ್ಥಾನಿಯಾಗಿ ಗುರಿ ಮುಟ್ಟಿ ಚಿನ್ನಕ್ಕೆ ಕೊರಳೊಡ್ಡಿದರು. ತಮಿಳುನಾಡು ಸ್ಪರ್ಧಿಗಳಿಂದ ತೀವ್ರ ಸ್ಪರ್ಧೆ ಎದುರಿಸಿದ ಆರ್ಯ 7.76 ಮೀ. ಉದ್ದ ಜಿಗಿಯುವ ಮೂಲಕ ಮೊದಲ ಸ್ಥಾನ ಗಳಿಸಿದರೆ, ಸೆಲ್ವ ಪ್ರಭು ಸಹ (7.55 ಮೀ.) ಮತ್ತು ಶರೋನ್ (7.54 ಮೀ.) ಅನುಕ್ರಮವಾಗಿ 2 ಮತ್ತು 3ನೇ ಸ್ಥಾನ ಗಳಿಸಿದರು.

ಮಹಿಳೆಯರ 800 ಮೀಟರ್ ಸ್ಪರ್ಧೆಯಲ್ಲಿ ಇ.ಬಿ. ಅರ್ಚನಾ (2:12.69 ಸೆ.) 2ನೇ ಸ್ಥಾನ ಗಳಿಸಿದರೆ, ತಮಿಳುನಾಡಿನ ಹೀನಾ (2:12.21ಸೆ.) ಮೊದಲ ಸ್ಥಾನ ಗಳಿಸಿದರು. ಇದೇ ವೇಳೆ ಮಹಿಳೆಯರ 200 ಮೀ. ಸ್ಪರ್ಧೆಯಲ್ಲಿ ರಾಜ್ಯದ ಕಾವೇರಿ ಎಲ್.ಪಿ (24.38 ಸೆ.) ದ್ವಿತೀಯ ಸ್ಥಾನ ಪಡೆದರು.

20 ವರ್ಷದೊಳಗಿನವರ ಪುರುಷರ 400 ಮೀಟರ್ ಹರ್ಡಲ್ಸ್ ಸ್ಪರ್ಧೆಯಲ್ಲಿ ಕರ್ನಾಟಕದ ನೋಯಲ್ ಜೋಸೆಫ್ ಪ್ರಭು (57.74 ಸೆ.) ಮೂರನೇ ಸ್ಥಾನ ಗಳಿಸಿದರೆ, ತಮಿಳುನಾಡಿನ ಎ. ಕಾರ್ತಿಕ್ ರಾಜ (52.76 ಸೆ.) ಮತ್ತು ಜೆರೋಮ್ ಸಂಜಯ್ ನಿಶಾಂತ್ (53.06 ಸೆ.) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದುಕೊಂಡರು.

ಟಾಟಾ ಕಮ್ಯುನಿಕೇಷನ್ಸ್ ಜತೆ ವಿಶ್ವ ಅಥ್ಲೆಟಿಕ್ಸ್ ಒಪ್ಪಂದ

ಹೊಸದಿಲ್ಲಿ: ಟೋಕಿಯೊ ವಿಶ್ವ ಚಾಂಪಿಯನ್‌ಷಿಪ್ ಸೇರಿದಂತೆ ಮುಂದಿನ ವರ್ಷದಿಂದ ಪ್ರಮುಖ ಕೂಟಗಳ ಪ್ರಸಾರಕ್ಕಾಗಿ ಭಾರತೀಯ ಟೆಲಿಕಾಂ ದೈತ್ಯ ಟಾಟಾ ಕಮ್ಯುನಿಕೇಷನ್ ಜತೆ ಐದು ವರ್ಷಗಳ ಜಾಗತಿಕ ಪ್ರಸಾರ ಸೇವೆಗಳ ಒಪ್ಪಂದವನ್ನು ವಿಶ್ವ ಅಥ್ಲೆಟಿಕ್ಸ್ ಬುಧವಾರ ಪ್ರಕಟಿಸಿದೆ.

ನಾವೀನ್ಯತೆ ಮತ್ತು ಪ್ರೇಕ್ಷಕರ ಪಾಲ್ಗೊಳ್ಳುವಿಕೆಯನ್ನು ಹೊಸ ಎತ್ತರಕ್ಕೆ ಏರಿಸುವ ಉದ್ದೇಶದಿಂದ ಟಾಟಾ ಕಮ್ಯುನಿಕೇಷನ್ಸ್, ವಿಶ್ವ ಸಂಸ್ಥೆಗೆ ಪ್ರಮುಖ ಕಾರ್ಯತಂತ್ರದ ಪೂರೈಕೆದಾರ ಆಗಲಿದೆ ಎಂದು ವಿಶ್ವ ಅಥ್ಲೆಟಿಕ್ಸ್ ಹೇಳಿಕೆಯಲ್ಲಿ ತಿಳಿಸಿದೆ. 2025ರಲ್ಲಿ ಮಾರ್ಚ್‌ನಲ್ಲಿ ನಾನ್ಜಿಂಗ್‌ನಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ಒಳಾಂಗಣ ಚಾಂಪಿಯನ್‌ಷಿಪ್, ಮೇ ತಿಂಗಳಲ್ಲಿ ಗುವಾಂಗ್‌ಝೌನಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ರಿಲೇಗಳು ಮತ್ತು ಸೆಪ್ಟೆಂಬರ್‌ನಲ್ಲಿ ಸ್ಲಾನ್ ಡಿಯಾಗೋದಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ರೋಡ್ ರನ್ನಿಂಗ್ ಚಾಂಪಿಯನ್‌ಷಿಪ್‌ಗಳಂತಹ ಸ್ಪರ್ಧೆಗಳು ನಡೆಯಲಿವೆ.

ದ್ವೈವಾರ್ಷಿಕ ವಿಶ್ವ ಚಾಂಪಿಯನ್‌ಷಿಪ್ ಮುಂದಿನ ವರ್ಷದ ಸೆ.13ರಿಂದ 21 ರವರೆಗೆ ನಡೆಯಲಿದೆ.

134,858 ಕೋಟಿಗೆ ಐಪಿಎಲ್ ಮೌಲ್ಯ

ಹೊಸದಿಲ್ಲಿ: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್)ನ ಮೌಲ್ಯವು 2024ರಲ್ಲಿ ಶೇಕಡ 6.5 ರಷ್ಟು ಏರಿಕೆಯಾಗಿ 16.4 ಬಿಲಿಯನ್ ಡಾಲರ್‌ಗೆ (ಸುಮಾರು 134,858 ಕೋಟಿ ರೂ.) ತಲುಪಿದೆ ಎಂದು ಅಮೆರಿಕದ ಹೂಡಿಕೆ ಬ್ಯಾಂಕ್ ಹೌಲಿಹಾನ್ ಲೋಕಿ ವರದಿ ಮಾಡಿದೆ.

ಇದಲ್ಲದೆ, ಬಹುಕೋಟಿ ಮೊತ್ತದ ಟಿ20 ಲೀಗ್‌ನ ಬ್ರ್ಯಾಂಡ್ ಮೌಲ್ಯವು ವರ್ಷದಿಂದ ವರ್ಷಕ್ಕೆ ಶೇಕಡಾ 6.3 ರಷ್ಟು ಏರಿಕೆಯಾಗಿ 3.4 ಬಿಲಿಯನ್ ಡಾಲರ್‌ಗೆ (ಸುಮಾರು 28,000 ಕೋಟಿ ರೂ.) ಮುಟ್ಟಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಐಪಿಎಲ್ ಮೌಲ್ಯ ಹೆಚ್ಚಳದಿಂದಾಗಿ ಶೀರ್ಷಿಕೆ ಪ್ರಾಯೋಜಕತ್ವ ಹೊಂದಿರುವ ಟಾಟಾ ಗ್ರೂಪ್‌ಗೆ ಸಹಾಯವಾಗಿದೆ.

ವುಶು: ತಮಿಳುನಾಡು ಸ್ಪರ್ಧಿಗಳ ಮುನ್ನಡೆ

■ ವಿಕ ಸುದ್ದಿಲೋಕ ಬಾಗಲಕೋಟೆ

ರಾಜ್ಯ ವುಶು ಸಂಸ್ಥೆ ನಗರದಲ್ಲಿ ಆಯೋಜಿಸಿರುವ ದಕ್ಷಿಣ ಭಾರತ ವುಶು ಮಹಿಳಾ ಕ್ರೀಡಾಕೂಟದಲ್ಲಿ ತಮಿಳುನಾಡು ಸ್ಪರ್ಧಿಗಳು ಮುನ್ನಡೆ ಸಾಧಿಸಿದ್ದಾರೆ.

ನಗರದ ಗೌರಿಶಂಕರ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 2ನೇ ದಿನವಾದ ಬುಧವಾರ ತಮಿಳುನಾಡು 7 ಚಿನ್ನದ ಪದಕ ಗಳಿಸಿ ಮುನ್ನಡೆ ಸಾಧಿಸಿದೆ. ಆತಿಥೇಯ ಕರ್ನಾಟಕದ ಕ್ರೀಡಾಪಟುಗಳು 6 ಬೆಳ್ಳಿ, 13 ಕಂಚಿನ ಪದಕ ಸೇರಿ ಒಟ್ಟು 19 ಪದಕಗಳನ್ನು ಗಳಿಸಿದ್ದಾರೆ. ಒಡಿಶಾ, ಕೇರಳ ತಲಾ 3 ಚಿನ್ನ ಗೆದ್ದಿದ್ದರೆ, ತೆಲಂಗಾಣ 1 ಚಿನ್ನದ ಪದಕ ಗಳಿಸಿದೆ. ಕ್ರೀಡಾಕೂಟದ ಫೈನಲ್ ಪಂದ್ಯಗಳು ಗುರುವಾರ ನಡೆಯಲಿವೆ.

ಕ್ವಾರ್ಟರ್‌ಫೈನಲ್‌ಗೆ ನಗಾಲ್

ಪೆರುಗಿಯಾ (ಇಟಲಿ): ಭಾರತದ ಟೆನಿಸ್ ತಾರೆ ಸುಮಿತ್ ನಗಾಲ್ ಇಲ್ಲಿ ನಡೆಯುತ್ತಿರುವ ಪೆರುಗಿಯಾ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ಸ್ ಪ್ರವೇಶಿಸಿದ್ದಾರೆ.

ಬುಧವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪ್ರಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸ್ಫೂರ್ತಿದಾಯಕ ಪ್ರದರ್ಶನ ಮುಂದುವರಿಸಿದ 6ನೇ ಶ್ರೇಯಾಂಕಿತ ಆಟಗಾರ ನಗಾಲ್ 0-6, 7-5, 7-6(7/5) ಸೆಟ್‌ಗಳಿಂದ ಶ್ರೇಯಾಂಕರಹಿತ ಸ್ಪೇನಿಯ ಪ್ರತಿಭೆ ಅಲೆಸ್ಸಾಂಡ್ರೊ ಜಿಯಾನೆಸ್ಸಿ ವಿರುದ್ಧ ಪ್ರಯಾಸದ ಜಯ ಗಳಿಸಿದರು.

ಕಳೆದ ವಾರವಷ್ಟೇ ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಜರ್ಮನಿಯಲ್ಲಿ ಹೈಲ್‌ಬ್ರಾನ್ ಎದುರು ಜಯ ಗಳಿಸಿದ್ದರು. ಮೊದಲ ಸೆಟ್‌ನಲ್ಲಿ ನಿಸ್ತೇಜ ಪ್ರದರ್ಶನ ನೀಡಿದ ನಗಾಲ್, 0-6 ಅಂತರದಲ್ಲಿ ಹಿನ್ನಡೆ ಅನುಭವಿಸಿದರು. ಆದರೆ ನಂತರದ ಸೆಟ್‌ನಲ್ಲಿ ಲಯಕ್ಕೆ ಮರಳುವ ಮೂಲಕ ಇಟಲಿ ಆಟಗಾರನಿಗೆ ದಿಟ್ಟ ಸವಾಲು ಒಡ್ಡಿದರು. ಕ್ವಾರ್ಟರ್‌ಫೈನಲ್‌ನಲ್ಲಿ ಭಾರತೀಯ ಆಟಗಾರ ಪೋಲೆಂಡ್‌ನ ಮ್ಯಾಕ್ಸ್ ಕಸ್ನಿಕೋವ್ಸ್ಕಿ ಅಥವಾ ಕ್ರೊಯೇಷ್ಯಾದ ಬೋರ್ನಾ ಕೊರಿಕ್ ಅವರಲ್ಲೊಬ್ಬರನ್ನು ಎದುರಿಸಲಿದ್ದಾರೆ.

ಹೈಲ್‌ಬ್ರಾನ್ ವಿರುದ್ಧ ಗೆಲ್ಲುವ ಮೂಲಕ ನಗಾಲ್ ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದಾರೆ.

ನಿತ್ಯದರ್ಶಿ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ಜಾತಕ ರಾಶಿ ಹೊಂದಿಕೆ ಕುಂಡಲಿ ದಶಾ ಭುಕ್ತಿ, ಕುಂಡಲಿಗಳಿಗೆ ಪರಿಹಾರ ಕ್ರಮಗಳು. ನಿಮ್ಮ ರಾಶಿಗೆ ಅನುಗುಣವಾಗಿ ಬರುವ ರತ್ನಗಳ ಬಗ್ಗೆ, ವಿದ್ಯೆ, ಉದ್ಯೋಗ, ವಿವಾಹ, ಸಂತಾನ, ಆರೋಗ್ಯ, ಹಣಕಾಸು ಇತ್ಯಾದಿಗಳ ವಿವರ. ಕುಂಡಲಿಗಳಿಗೆ ಅನುಗುಣವಾಗಿ ಧರಿಸಬೇಕಾದ ಹರಳುಗಳ ಬಗ್ಗೆ, ಗುರುಬಲ ವಿವರ, ಶನಿ, ರಾಹು ಗ್ರಹಗಳು ಕೊಡುವ ಫಲ ಹಾಗೂ ಕುಂಡಲಿಗಳಿಗೆ ಪರಿಹಾರ ಪೂಜೆಗಳ ವಿವರ. ವಿವಾಹ ಹೊಂದಾಣಿಕೆ, ವೃತ್ತಿ ಕುಂಡಲಿ ಆಧಾರದ ಮೇಲೆ ವಿವರ. ಮತ್ತೆ ಜಾತಕ ತಪಾಸಣೆ. ವಿದೇಶ ವಿವರಗಳಿಗೆ ನೇರವಾಗಿ ಬಂದು ಭೇಟಿ ಮಾಡಿ. ವಾಟ್ಸಪ್ ಮೂಲಕ ಪ್ರಶ್ನೆ ಕಳಿಸಿ. ದೂ: 9513747474

ಮೇಷ: [illegible] ಅದೃಷ್ಟ ಸಂಖ್ಯೆ 3
(ನಾಮಾಕ್ಷರ: ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: [illegible] ಅದೃಷ್ಟ ಸಂಖ್ಯೆ 7
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: [illegible] ಅದೃಷ್ಟ ಸಂಖ್ಯೆ 4
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರ, ಪುನರ್ವಸು 1, 2, 3

ಕಟಕ: [illegible] ಅದೃಷ್ಟ ಸಂಖ್ಯೆ 2
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: [illegible] ಅದೃಷ್ಟ ಸಂಖ್ಯೆ 5
(ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ) ಮಖ, ಪುಬ್ಬ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: [illegible] ಅದೃಷ್ಟ ಸಂಖ್ಯೆ 8
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತ 1, 2ನೇ ಪಾದ

ತುಲಾ: [illegible] ಅದೃಷ್ಟ ಸಂಖ್ಯೆ 7
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: [illegible] ಅದೃಷ್ಟ ಸಂಖ್ಯೆ 2
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನು: [illegible] ಅದೃಷ್ಟ ಸಂಖ್ಯೆ 6
(ಯೆ, ಯೊ, ಬ, ಬಿ, ಬು, ಧ, ಫ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: [illegible] ಅದೃಷ್ಟ ಸಂಖ್ಯೆ 5
(ಬೊ,ಜ,ಜಿ,ಖಿ,ಖು,ಖೆ,ಖೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: [illegible] ಅದೃಷ್ಟ ಸಂಖ್ಯೆ 8
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: [illegible] ಅದೃಷ್ಟ ಸಂಖ್ಯೆ 4
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಮಹಿಳೆಯರ ಆಯುಸ್ಸು ಹೆಚ್ಚಿಸುವ ಮೆಡಿಟರೇನಿಯನ್ ಡಯಟ್

ಮಹಿಳೆಯರ ಆರೋಗ್ಯವನ್ನು ಕಾಪಾಡಿ ದೀರ್ಘ ಕಾಲದ ಆಯುಸ್ಸನ್ನು ನೀಡುತ್ತದೆ ಮೆಡಿಟರೇನಿಯನ್ ಡಯಟ್.

ಲವಲVK ಸುದ್ದಿಲೋಕ
feedbacklvk@vijaykarnataka.com

ಆರೋಗ್ಯ ಕಾಳಜಿ

ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಕಾಯಿಲೆಗಳೇ ಆಯುಸ್ಸನ್ನು ಬಹು ಬೇಗ ಮುಗಿಸಿ ಬಿಡುವಂತೆ ಮಾಡುತ್ತವೆ. ಆದರೆ ಕಾಯಿಲೆಯನ್ನು ಜಯಿಸಿ ಆಯುಸ್ಸು ಹೆಚ್ಚಿಸುವಲ್ಲಿ ಮೆಡಿಟರೇನಿಯನ್ ಡಯಟ್ ಸಹಕಾರಿ. ಮಹಿಳೆಯರ ಆರೋಗ್ಯವನ್ನು ವರ್ಧಿಸಿ, ಆಯುಸ್ಸನ್ನು ಹೆಚ್ಚಿಸಲು ಮೆಡಿಟರೇನಿಯನ್ ಡಯಟ್ ಅಮೃತವಿದ್ದಂತೆ ಎಂದಿದೆ ಇತ್ತೀಚಿನ ಅಧ್ಯಯನ. ಸುದೀರ್ಘ ಕಾಲದ ಅಧ್ಯಯನದ ನಂತರ ಈ ಬಗೆಯ ಡಯಟ್ ಮಹಿಳೆಯ ಅಕಾಲಿಕ ಮರಣ ಪ್ರಮಾಣದ ಸಾಧ್ಯತೆಯನ್ನು ಶೇ.23ರಷ್ಟು ತಗ್ಗಿಸುತ್ತದೆ ಎಂಬುದನ್ನು ಕಂಡು ಹಿಡಿಯಲಾಗಿದೆ. ವಿಶ್ವದ ಅತ್ಯುತ್ತಮ ಡಯಟ್ ಪಟ್ಟಿಯಲ್ಲಿ ಸತತವಾಗಿ ಪ್ರಮುಖ ಸ್ಥಾನ ಪಡೆದುಕೊಂಡಿರುವ ಮೆಡಿಟರೇನಿಯನ್ ಡಯಟ್ ಮಹಿಳೆಯರ ಆರೋಗ್ಯ ರಕ್ಷಕವಾಗಿ ಈಗ ಪುನಃ ಗಮನ ಸೆಳೆದಿದೆ.

ಏನಿದು?

ಮೆಡಿಟರೇನಿಯನ್ ಸಮುದ್ರದ ಗಡಿಯಲ್ಲಿರುವ ದೇಶಗಳ ಸಾಂಪ್ರದಾಯಿಕ ಆಹಾರ ಪದ್ಧತಿಯೇ ಈಗ ಎಲ್ಲೆಡೆ ಡಯಟ್ ವಿಧಾನವಾಗಿ ಸೆಳೆಯುತ್ತಿದೆ. ಆರೋಗ್ಯಪೂರ್ಣ ಡಯಟ್ ಎನಿಸಿರುವ ಇದು ಎಲ್ಲೆಡೆ ಖ್ಯಾತವಾಗುತ್ತಿದೆ. ಬೀಜಗಳು, ಹಣ್ಣುಗಳು, ತರಕಾರಿಗಳು, ಧಾನ್ಯಗಳು ಮತ್ತು ದ್ವಿದಳ ಧಾನ್ಯಗಳು ಸೇರಿದಂತೆ ಸಸ್ಯ ಆಧರಿತ ಆಹಾರಗಳೇ ಹೆಚ್ಚಿರುವ ಇದರಲ್ಲಿ ಆಲಿವ್ ಎಣ್ಣೆಯನ್ನು ಮುಖ್ಯ ಕೊಬ್ಬಿನ ಮೂಲವಾಗಿ ಬಳಸಲಾಗುತ್ತದೆ. ಇದರ ಹೊರತಾಗಿ ಡೈರಿ ಪದಾರ್ಥ, ಮಾಂಸವನ್ನು ಸಹ ಸೇರಿಸಲಾಗುತ್ತದೆ. ಸಾಮಾನ್ಯವಾಗಿ ಈ ಡಯಟ್‌ನಲ್ಲಿ ಟೊಮೆಟೊ, ಪಾಲಕ್, ಈರುಳ್ಳಿ, ಹೂಕೋಸು, ಕ್ಯಾರೆಟ್, ಸೌತೆಕಾಯಿ, ಅಣಬೆಗಳಂತಹ ತರಕಾರಿಗಳು, ಸೇಬು, ಬಾಳೆಹಣ್ಣು, ಕಲ್ಲಂಗಡಿ, ದ್ರಾಕ್ಷಿ, ಸ್ಟ್ರಾಬೆರಿ, ದ್ರಾಕ್ಷಿ, ಅಂಜೂರ ಸೇರಿದಂತೆ ಹಲವು ಬಗೆಯ ಹಣ್ಣುಗಳು, ಬಾದಾಮಿ, ಗೋಡಂಬಿ, ಸೂರ್ಯಕಾಂತಿ ಹಾಗೂ ಕುಂಬಳಕಾಯಿ ಬೀಜಗಳು, ಕಾಳುಗಳು, ಕಂದು ಅಕ್ಕಿಗಳಿಂದ ತಯಾರಾದ ಆಹಾರ ಸೇವನೆಗೆ ಪ್ರಾಮುಖ್ಯ ನೀಡಲಾಗುತ್ತದೆ. ಅಲ್ಲದೆ ಮೀನು ಮತ್ತು ಸಮುದ್ರಾಹಾರ, ಚೀಸ್, ಮೊಸರು, ಹಾಲು ಸೇವಿಸಬಹುದು.

ಪ್ರಯೋಜನ

ಆರೋಗ್ಯಪೂರ್ಣವಾಗಿ ದೀರ್ಘಕಾಲ ಬದುಕಲು ಬಯಸುವ ಮಹಿಳೆಯರು ಈ ಬಗೆಯ ಡಯಟ್ ಅನುಸರಿಸಬಹುದು. ಏಕೆಂದರೆ ಅನಾರೋಗ್ಯದಿಂದ ಉಂಟಾಗುವ ಸಾವಿನ ಅಪಾಯವನ್ನು ಸುಮಾರು ಕಾಲು ಭಾಗದಷ್ಟು ಕಡಿಮೆ ಮಾಡುತ್ತದೆ. ಈ ವಿಧಾನದ ಆಹಾರ ಸೇವನೆ ದೇಹಕ್ಕೆ ಅಗತ್ಯ ಪೋಷಕಾಂಶ ನೀಡುತ್ತದೆ. ತೂಕ ನಿಯಂತ್ರಿಸುವುದರ ಜತೆಗೆ ಹೃದ್ರೋಗ, ಮಧುಮೇಹದಂತಹ ಆರೋಗ್ಯ ಸಮಸ್ಯೆಗಳಿಂದ ದೂರ ಇರಲು ಸಹಕಾರಿ. ಅಕಾಲಿಕ ಮರಣದ ಅಪಾಯವನ್ನು ಕಡಿಮೆ ಮಾಡುತ್ತದೆ. ■

ಲವಲVK GARDEN ಲೋಕ

ಎಲ್ಲಾ ಕಾಲದಲ್ಲೂ ಬೆಳೆಯಬಹುದಾದ ಮೂಲಂಗಿ

ಮೂಲಂಗಿ ಒಂದು ಮುಖ್ಯ ಬೇರು ತರಕಾರಿ ಬೆಳೆ. ಈ ತರಕಾರಿಯ ಎಲೆಗಳು ಹೇರಳವಾಗಿ 'ಎ' ಮತ್ತು 'ಸಿ' ಅನ್ನಾಂಗವನ್ನು ಹೊಂದಿರುತ್ತವೆ. ಇದನ್ನು ವರ್ಷದ ಎಲ್ಲಾ ಕಾಲದಲ್ಲೂ ಬೆಳೆಯಬಹುದು. ಇದು ಸ್ವಲ್ಪ ತಂಪು ವಾತಾವರಣವನ್ನು ಬಯಸುತ್ತದೆ. ಹೀಗಾಗಿ ಜೂನ್-ಜುಲೈ ತಿಂಗಳಿನಲ್ಲಿ ಮಳೆಯಾಗುವ ಕಾರಣ ಇದನ್ನು ಕೈತೋಟಗಳಲ್ಲಿ ಸುಲಭವಾಗಿ ಬೆಳೆಯಬಹುದು.

ಮರಳು ಮಿಶ್ರಿತ ಗೋಡು ಮಣ್ಣು ಈ ಬೆಳೆಗೆ ಉತ್ತಮ. ಮಣ್ಣನ್ನು ಚೆನ್ನಾಗಿ ಸಡಿಲಗೊಳಿಸಿ ಅದಕ್ಕೆ ಸಾವಯವ ಗೊಬ್ಬರಗಳನ್ನು ಸೇರಿಸಿ ಹದಮಾಡಬೇಕು. ಒಂದು ಅಡಿ ಅಂತರದಲ್ಲಿ ಸಾಲನ್ನು ಮಾಡಿ,

ಪ್ರತಿ ಸಾಲಿನಲ್ಲಿ 10 ಸೆಂ.ಮೀ. ಅಂತರದಲ್ಲಿ ಬೀಜ ಬಿತ್ತಿ, ನಂತರ 4-5 ದಿನಗಳಿಗೊಮ್ಮೆ ನೀರನ್ನು ಒದಗಿಸಬೇಕು. ಜೊತೆಗೆ ಆಗಾಗ ಕಳೆಗಳನ್ನು ತೆಗೆಯುತ್ತಿರಬೇಕು. ಇದರ ಗಡ್ಡೆಗಳ ಬೆಳವಣಿಗೆ ಹಂತದಲ್ಲಿ ಒಮ್ಮೆ ಮಣ್ಣನ್ನು ಬುಡಗಳಿಗೆ ಏರಿಸಬೇಕು. ಈ ಬೆಳೆಯಲ್ಲಿ ರಸ ಹೀರುವ ಕೀಟಗಳು ಕಂಡು ಬರುವುದರಿಂದ ಅದರ ನಿರ್ವಹಣೆಗಾಗಿ ಬೇವಿನ ಕಷಾಯ ಅಥವಾ ಬೇವಿನ ಎಣ್ಣೆಯನ್ನು ಸಿಂಪಡಿಸಬೇಕು. ಬಿತ್ತನೆ ಮಾಡಿದ 45-50 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ಕೊಯ್ಲು ಮಾಡುವ ಮುನ್ನ ಮಣ್ಣಿಗೆ ತೆಳುವಾಗಿ ನೀರು ಒದಗಿಸಿ ಬೇರುಗಳನ್ನು ನಿಧಾನವಾಗಿ ಕೈಯಿಂದ ಕಿತ್ತು ತೆಗೆಯಬೇಕು. ಸರಿಯಾದ ಸಮಯಕ್ಕೆ ಕೊಯ್ಲು ಮಾಡದಿದ್ದರೆ ಬೇರುಗಳು ಕೊಯಾಗಿ ತಿನ್ನಲು ಯೋಗ್ಯವಾಗಿರುವುದಿಲ್ಲ. ■

ಡಾ. ಎಂ. ಶಾಲಿನಿ
ಸಹಾಯಕ ಪ್ರಾಧ್ಯಾಪಕರು
(ತೋಟಗಾರಿಕೆ) ಕೃಷಿ ವಿವಿ, ಬೆಂಗಳೂರು

ಲವಲVK cinema @ ಟಿವಿ

ಉದಯ ಟಿವಿ

ಲಕ್ಕಿ/ಬೆಳಗ್ಗೆ 9
ಯಶ್, ರಮ್ಯಾ
ನಿರ್ದೇಶಕ: ಡಾ.ಸೂರಿ

ಸರ್ಕಾರ್/ಮಧ್ಯಾಹ್ನ 3
ವಿಜಯ್, ಕೀರ್ತಿ ಸುರೇಶ್
ನಿರ್ದೇಶಕ: ಎ.ಆರ್. ಮುರುಗದಾಸ್

ಉದಯ ಮೂವೀಸ್

ಬಂಗಾರದ ಕಳಶ/ಮಧ್ಯಾಹ್ನ 1
ವಿಷ್ಣುವರ್ಧನ್, ಸಿತಾರಾ
ನಿರ್ದೇಶಕ: ಎಚ್.ಆರ್.ಭಾರ್ಗವ

ಸಂಜುಂಡಿ/ರಾತ್ರಿ 7
ಶಿವರಾಜ್‌ಕುಮಾರ್, ಉಮಾಶ್ರೀ
ನಿರ್ದೇಶಕ: ಎಸ್.ಆರ್.ಬ್ರದರ್ಸ್

ಸ್ಟಾರ್ ಸುವರ್ಣ ಪ್ಲಸ್

ವರದನಾಯಕ/ಮಧ್ಯಾಹ್ನ 3
ಸುದೀಪ್, ಚಿರಂಜೀವಿ ಸರ್ಜಾ
ನಿರ್ದೇಶಕ: ಅಯ್ಯಪ್ಪ ಪಿ ಶರ್ಮ

ಡಾನ್ ಸೀನು/ಸಂಜೆ 6
ರವಿತೇಜ, ಶ್ರೀಯಾ ಶರಣ್
ನಿರ್ದೇಶಕ: ಗೋಪಿಚಂದ್ ಮಲಿನೇನಿ

ಕಾಲ ಮುದ್ರೆ

ಲವಲVK MUDRA ಸೂತ್ರ

ಬದುಕಿನ ಸಮಯವನ್ನು ತಿಳಿಸಿಕೊಡುವುದು ಹಾಗೂ ಅರ್ಥೈಸುವುದೇ ಕಾಲ ಮುದ್ರೆ. ಪದ್ಮಾಸನ, ಸುಖಾಸನ ಅಥವಾ ವಜ್ರಾಸನ ಈ ಯಾವುದಾದರೂ ಒಂದು ಆಸನದಲ್ಲಿ ನೇರ ಕುಳಿತುಕೊಳ್ಳಬೇಕು. ನಂತರ ಎರಡು ಹಸ್ತಗಳನ್ನು ಎದೆ ಮುಂಭಾಗಕ್ಕೆ ತಂದು ಅಂಗೈಗಳನ್ನು ಅಧೋಮುಖವಾಗಿ ಹಿಡಿದು ಕಿರುಬೆರಳು, ಮಧ್ಯದ ಬೆರಳು ಮತ್ತು ತೋರು ಬೆರಳುಗಳನ್ನು ಮುಂದಕ್ಕೆ ಮಡಿಸಿ ಒಂದಕ್ಕೊಂದು ತಾಗಿಸಿ ಹಾಗೆ ಹೆಬ್ಬೆರಳಿನ ತುದಿಯನ್ನು ಒಂದಕ್ಕೊಂದು ತಾಗಿಸಿ. ಉಂಗುರದ ಬೆರಳು ನೇರವಾಗಿರಲಿ ಮತ್ತು ಬೆರಳುಗಳ ತುದಿ ಒಂದಕ್ಕೊಂದು ತಾಗಿರಲಿ. ನೇರವಾಗಿರುವ ಉಂಗುರದ ಬೆರಳಿನ ತುದಿಗಳನ್ನು ಯಾವಾಗ ಬೇರ್ಪಡಿಸಲು ಸಾಧ್ಯವಾಗುವುದೋ ಆ ಕಾಲವನ್ನು ಆಧರಿಸಿ ವ್ಯಕ್ತಿಯ ಜೀವಿತಾವಧಿಯನ್ನು ಅಳೆಯಬಹುದು ಎಂದು ಹೇಳಲಾಗುತ್ತದೆ. ಇದು ಕಾಲದ ಒಂದು ರಹಸ್ಯವೂ ಹೌದು. ಈ ಮುದ್ರೆಯನ್ನು ಮಾಡುವುದರಿಂದ ಸೃಷ್ಟಿಯ ರಹಸ್ಯದ ಜೊತೆಗೆ ತನ್ನ ಹುಟ್ಟಿನ ಉದ್ದೇಶವನ್ನು ಅರಿಯಬಹುದು ಎಂದು ಹೇಳಲಾಗುತ್ತದೆ. ಈ ಮುದ್ರೆಯನ್ನು ತಂತ್ರವಿದ್ಯೆಯಲ್ಲಿ ಹೆಚ್ಚು ಬಳಸಲಾಗುತ್ತದೆ. ■



- ವಿರೂಪಾಕ್ಷ ಬೆಳವಾಡಿ, ಯೋಗ ಶಿಕ್ಷಕ

ವಿಜಯಬಂಧ - 7250

1		■	2		3	■	4	5
	■	6		■	7	8	■	
	■		■	■	■		■	
9	10		11	■	12		13	
■		■	14			■		■
15		16		■	17	18		19
	■		■	■	■		■	
	■	20	21	■	22		■	
23		■	24			■	25	

ಎಡದಿಂದ ಬಲಕ್ಕೆ
1 ಅಂಬೂರದಂತೆ ಇರುವ ಅಂತಹುದೇ ಹಣ್ಣು 2
2 ಮಾದಕಕ್ಕೆ ಪ್ರಸಿದ್ಧಿ ನೀಡಿದ ತ್ರಿಗಂಧದ ವನ 3
4 ವಾಯಸ ಗೂಡು ಕಟ್ಟಿಕೊಂಡು ಕಂಡುಕೊಂಡ ನೆಲೆ 2
6 ಕಾಡಿದ್ದು ಬರುವ ಎಂದಾಗ ಮಿಡಿದ ಧ್ವನಿ 2
7 ನಿರ್ಮಿಸಲಾದ ಕಾಲದಿಂದ ಆರಾಧಿಸುವ ಕಾಲುಗಳಿ 2
9 ಕುಬೇರನ ಒಂಬತ್ತು ಬಗೆಯ ಸಂಪತ್ತು 4
12 ಆಕಾಶವನ್ನು ಬೆಂಬಿಡದ ದಾರಿದ್ರ್ಯ 4
14 ಆರು ಪದಗಳ ಸುಬ್ರಹ್ಮಣ್ಯ 3
15 ಕಾಡಿನಲ್ಲಿ ನೆಲೆಸಿದ ಗಂಡೆದ್ದು ಎಂತಹ ಬಲಿಷ್ಠ ತ್ಯಾಗ 4
17 ದಾನದ ಮಗ ಯಾರ ಆಣೆಗೂ ಒಳಗಾಗದ ಸ್ವತಂತ್ರನಾದ 4
20 ಕಂಡದ ಮನೆಯ ಬಾಗಿಲ ಹಲಗೆ 2
22 ಮಾಗದ ಹೊಂದಿದ ಮಯೂರ 2
23 ತಪ್ಪಿಸಿ ನೀಡಿದ ದಸ್ತ ಮುಟ್ಟು 2
24 ಸಿಂಗಾರಿಯ ಮುಂದೆ ನುಡಿಸಿದ ವಾದನ 3
25 ಹೂದನೇಗದ ವಂಶಸ್ಥನಾದ ಕೃಷ್ಣ 2

ಮೇಲಿನಿಂದ ಕೆಳಕ್ಕೆ
1 ಜ್ವಾಲೆಕ್ಕೆ ಬರುವ ಗುರುತು ಕಾಣುತ್ತಿಲ್ಲದಿಯೊಂದಿಗೆ ಸೇರಿತು 4
2 ಮುಖದಿಂದ ಮೇಲೆ ಹಾರಿಸಿದ ಸಂಪ್ರದಾಯ 2
3 ತಮಸದಲ್ಲಿ ಮುಳುಗಿದರೂ ಸಿಗುವ ಗೆಲುವು 2
5 ಆಕರ ಸಹಿತ ತುಂಬಾ ಹುರುಳಿಲ್ಲದವನು 4
6 ಹಿಟ್ಟು ಕಾದಿರಿಸಲು ಬಂದ ಸಹಿಯ ಸಹೋದರ 3
8 ಕರವಸ್ತ್ರ ಅಂತ ಇರಲು ಬಳಸುವ ಧರಣಿ 3
10 ಹಲ್ಲುಗಳನ್ನು ಹಿಡಿದುಕೊಂಡ ಚರ್ಮದ ಭಾಗ 3
11 ದೇವತೆಗಳ ಗುರು ಬೃಹಸ್ಪತಿಯಂತಹ ಮೇಧಾವಿ 3
12 ಹಾಳೆ ಜಾಡಿಗೆ ಸೇರಿದ ಮರ 3
13 ಪರೋಕ್ಷವಾಗಿ ಹಿಡಿದ ಗುಟ್ಟು 3
15 ಸಮುದ್ರಕ್ಕೆ ಭಯವನ್ನು ತರುವ ಯಮ 4
16 ಪಕ್ಷಿಗಳ ಆಳ ಪ್ರಮಾಣ ಅಂತಃಕರಣದ ಆಳ 3
18 ಬಸವ ರೂಪದಂತೆ ಪ್ರಾಸಿಕೊಂಡ ಬಿಲ್ಲು 3
19 ಅಶ್ವತ್ಥ ಮರದ ಕುಟುಂಬದ ಸಸ್ಯ ಜಾತಿ ಗಿಡದ ತರಕಾರಿ 4
21 ಚಂದನ ಪ್ರಾಸಿಕೊಂಡು ಬಂದ ಹೂವು 2
22 ಮಾರಾಟವಾಗಿ ಜಗಳಕ್ಕೆ ಬಂದ ಗ್ರಾಮದೇವತೆ 2

ವಿಜಯಬಂಧ 7249

ಎಡದಿಂದ ಬಲಕ್ಕೆ: 1.ಹುನ್ನಾರ 3.ಜಯಂತಿ 5.ದಂಡು 6.ಪತನ 7.ದೋಣ 8.ಗಾದರ 9.ಬಲ್ಲಿದ 10.ಪಾಟು 11.ಪಲಲ 13.ಕದಿ 15.ತಪ 17.ಹಸದ 19.ಹದ 20.ಕೃಪಾ 21.ಪದರಾ 22.ದೀಪಾ 23.ಬರ್ಗಾದ 24.ಪಂಕ 25.ತುಲ 26.ಸಹಿತ.

ಮೇಲಿನಿಂದ ಕೆಳಕ್ಕೆ: 1.ಹುದುಗಾಟ 2.ರವಿದ 3.ಜಗುಲಿ 4.ತಿಲೋದಕ 10.ಮಾಪ್ತಕ 12.ಲಕಲ 14.ದಿಗಂತ 16.ಪತ್ತಾಪತ 17.ಹಗುಲ 18.ಸವರ 19.ಹಾಗಲಕ.

ಅ.ನಾ.ಪ್ರಹ್ಲಾದರಾವ್





ಅರ್ಷ್‌ದೀಪ್ ಶ್ರೇಷ್ಠ ಬೌಲಿಂಗ್ | ಸೂರ್ಯ ಅರ್ಧ ಶತಕ | ಅಮೆರಿಕ ವಿರುದ್ಧ 7 ವಿಕೆಟ್ ಜಯ

ಸೂಪರ್ 8 ಹಂತಕ್ಕೆ ಭಾರತ ಲಗ್ಗೆ

ನ್ಯೂಯಾರ್ಕ್: ಅರ್ಷ್‌ದೀಪ್ ಸಿಂಗ್ ಅವರ ಜೀವನ ಶ್ರೇಷ್ಠ ಬೌಲಿಂಗ್ ಜತೆಗೆ ಸೂರ್ಯಕುಮಾರ್ ಯಾದವ್ ಅವರ ಆಕರ್ಷಕ ಅರ್ಧ ಶತಕದ ನೆರವಿನಿಂದ ಭಾರತ ತಂಡ ಟಿ20 ವಿಶ್ವಕಪ್‌ನ ತನ್ನ 3ನೇ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಅಮೆರಿಕ ತಂಡವನ್ನು ಸೋಲಿಸಿ, ಟೂರ್ನಿಯಲ್ಲಿ ಹ್ಯಾಟ್ರಿಕ್ ಜಯ ದಾಖಲಿಸಿದೆ.

ನಸ್ಸೌ ಕೌಂಟಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಬುಧವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದು ಬೌಲಿಂಗ್ ಆಯ್ದು ಮಾಡಿಕೊಂಡ ಟೀಮ್ ಇಂಡಿಯಾ, ಆತಿಥೇಯ ತಂಡವನ್ನು 110 ರನ್‌ಗಳಿಗೆ ನಿಯಂತ್ರಿಸಿತು. ನಂತರ 10 ಎಸೆತಗಳು ಬಾಕಿ ಇರುವಂತೆಯೇ 3 ವಿಕೆಟ್ ನಷ್ಟಕ್ಕೆ 111 ರನ್ ಗಳಿಸಿತು. ಈ ಗೆಲುವಿನೊಂದಿಗೆ ಒಟ್ಟು 6 ಅಂಕ ಕಲೆಹಾಕಿದ ರೋಹಿತ್ ಬಳಗ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಸೂಪರ್ 8ರ ಹಂತಕ್ಕೆ ಮುನ್ನಡೆಯಿತು. ಸತತ ಎರಡು ಜಯದ ಬಳಿಕ ಅಮೆರಿಕ ಟೂರ್ನಿಯಲ್ಲಿ ಮೊದಲ ಸೋಲು ಕಂಡಿತಲ್ಲದೆ, ನೆಟ್ ರನ್‌ರೇಟ್‌ನಲ್ಲಿ ಪಾಕಿಸ್ತಾನಕ್ಕಿಂತ ಕೆಳಕ್ಕೆ ಜಾರಿತು.

ಭಾರತೀಯ ಮೂಲದ ಸೌರಭ್ ದಾಳಿಗೆ ವಿರಾಟ್ ಕೊಹ್ಲಿ ಮತ್ತು ನಾಯಕ ರೋಹಿತ್ ಶರ್ಮ ಬಂದಷ್ಟೇ ವೇಗದಲ್ಲಿ ಪೆವಿಲಿಯನ್ ಸೇರಿದರೆ, ಪಾಕ್ ಎದುರಿನ ಹೀರೋ ರಿಷಭ್ ಪಂತ್ 18 ರನ್ ಕಾಣಿಕೆ ನೀಡಿದರು. ನಂತರ ಮುರಿಯದ 4ನೇ ವಿಕೆಟ್‌ಗೆ ಜತೆಗೂಡಿದ ಸೂರ್ಯಕುಮಾರ್ (50*;49 ಎಸೆತ) ಮತ್ತು ಶಿವಂ ದುಬೆ (31*; 35 ಎಸೆತ) 67 ರನ್ ಕಲೆಹಾಕಿ ತಂಡಕ್ಕೆ ಸುಲಭ ಗೆಲುವು ತಂದುಕೊಟ್ಟರು.

ಕೆನಡಾ ಮತ್ತು ಪಾಕಿಸ್ತಾನ ವಿರುದ್ಧ ಅದ್ಭುತ ಪ್ರದರ್ಶನ ನೀಡಿ ಸತತ ಎರಡು ಗೆಲುವಿಗೆ ಕಾರಣರಾಗಿದ್ದ ಆತಿಥೇಯ ಅಮೆರಿಕ ತಂಡದ ಬ್ಯಾಟರ್‌ಗಳು ಅಗ್ರಮಾನ್ಯ ತಂಡ ಭಾರತದ ಗುಣಮಟ್ಟದ ಬೌಲರ್‌ಗಳ ಮುಂದೆ ರನ್ ಗಳಿಸಲು ತಿಣುಕಾಡಿದರು.

ಮೊದಲ ಹತ್ತು ಓವರ್‌ಗಳಲ್ಲಿ 42 ರನ್ ಕಲೆಹಾಕಲು ಅಗ್ರ ಕ್ರಮಾಂಕದ ಮೂರು ವಿಕೆಟ್ ಕಳೆದುಕೊಂಡ ಪರದಾಡಿತ್ತು ಅಮೆರಿಕ ತಂಡ. ನಂತರದ ಹತ್ತು ಓವರ್‌ಗಳಲ್ಲಿ 5 ವಿಕೆಟ್ ಒಪ್ಪಿಸಿ 68 ರನ್ ಗಳಿಸಿತು. ಭಾರತೀಯರ ಶಿಸ್ತಿನ ದಾಳಿಯ ನಡುವೆಯೂ ನಿತೀಶ್ ಕುಮಾರ್ (27), ಸ್ಟೀವನ್ ಟೇಲರ್(24) ಮತ್ತು ನ್ಯೂಜಿಲೆಂಡ್‌ನ ಮಾಜಿ ಆಟಗಾರ ಕೋರಿ ಆ್ಯಂಡರ್ಸನ್ (15) ತಂಡದ ಗೌರವಯುತ ಮೊತ್ತಕ್ಕೆ ನೆರವಾದರು.

ಅರ್ಷ್‌ದೀಪ್ ದಾಖಲೆ: ಟೀಮ್ ಇಂಡಿಯಾದ ಮಧ್ಯಮ ವೇಗಿ ಅರ್ಷ್‌ದೀಪ್ ಸಿಂಗ್ ಟಿ20 ಪಂದ್ಯದ ಮೊದಲ ಎಸೆತದಲ್ಲೇ ವಿಕೆಟ್ ಪಡೆದ ಮೊದಲ ಭಾರತೀಯ ಎಂಬ ಗೌರವಕ್ಕೆ ಪಾತ್ರರಾದರು. 25 ವರ್ಷದ ಅರ್ಷ್‌ದೀಪ್, ಅಮೆರಿಕದ ಶಯಾನ್ ಜಹಾಂಗೀರ್ ಅವರನ್ನು ಎಲ್‌ಬಿ ಮಾಡಿ ಈ ದಾಖಲೆ ಬರೆದರು. ಅದೇ ಓವರ್‌ನಲ್ಲಿ ಅವರು ಆಂಡ್ರೀಸ್ ಗೌಸ್ ಅವರನ್ನು ಸಹ ಔಟ್ ಮಾಡಿ ಟೀಮ್ ಇಂಡಿಯಾದ ಆರಂಭಿಕ ಮೇಲುಗೈಗೆ ಕಾರಣರಾದರು. ಆರಂಭಿಕ ಮತ್ತು ಡೆತ್ ಓವರ್‌ಗಳಲ್ಲಿ ಕರಾರುವಾಕ್ ಬೌಲಿಂಗ್ ದಾಳಿ ನಡೆಸಿದ ಎಡಗೈ ವೇಗಿ ಹಾಕಿದ 4 ಓವರ್‌ಗಳಲ್ಲಿ 9 ರನ್ ನೀಡಿ 4 ವಿಕೆಟ್ ಪಡೆಯುವ ಜತೆಗೆ 17 ಡಾಟ್ ಬಾಲ್ ಮಾಡಿ ಮತ್ತೊಮ್ಮೆ ಗಮನ ಸೆಳೆದರು.

ಟಿ20 ವಿಶ್ವಕಪ್‌ಗಳಲ್ಲಿ ಭಾರತ ಪರ ಶ್ರೇಷ್ಠ ಬೌಲಿಂಗ್

ರನ್ / ವಿಕೆಟ್	ಬೌಲರ್	ಎದುರಾಳಿ	ಸ್ಥಳ	ವರ್ಷ
9ಕ್ಕೆ4	ಅರ್ಷ್‌ದೀಪ್	ಅಮೆರಿಕ	ನ್ಯೂಯಾರ್ಕ್	2024
11ಕ್ಕೆ4	ಆರ್. ಅಶ್ವಿನ್	ಆಸ್ಟ್ರೇಲಿಯಾ	ಮಿರ್‌ಪುರ	2014
12ಕ್ಕೆ4	ಹರ್ಭಜನ್	ಇಂಗ್ಲೆಂಡ್	ಕೊಲಂಬೊ	2012

ಸ್ಕೋರ್ ವಿವರ

ಅಮೆರಿಕ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 110

ಜಹಾಂಗೀರ್ ಎಲ್‌ಬಿಡಬ್ಲ್ಯು ಬಿ ಅರ್ಷ್‌ದೀಪ್	00
ಸ್ಟೀವನ್ ಟೇಲರ್ ಬಿ ಅಕ್ಷರ್	24
ಆಂಡ್ರೀಸ್ ಗೌಸ್ ಸಿ ಹಾರ್ದಿಕ್ ಬಿ ಅರ್ಷ್‌ದೀಪ್	02
ಆ್ಯರೋನ್ ಜೋನ್ಸ್ ಸಿ ಸಿರಾಜ್ ಬಿ ಹಾರ್ದಿಕ್	11
ನಿತೀಶ್ ಕುಮಾರ್ ಸಿ ಸಿರಾಜ್ ಬಿ ಅರ್ಷ್‌ದೀಪ್	27
ಕೋರಿ ಆ್ಯಂಡರ್ಸನ್ ಸಿ ಪಂತ್ ಬಿ ಹಾರ್ದಿಕ್	14
ಹರ್ಮೀತ್ ಸಿಂಗ್ ಸಿ ಪಂತ್ ಬಿ ಅರ್ಷ್‌ದೀಪ್	10
ಶಾಡ್ಲಿ ವ್ಯಾನ್ ಔಟಾಗದೆ	11
ಜಸ್‌ದೀಪ್ ಸಿಂಗ್ ರನ್‌ಔಟ್	02

ಇತರ: (ಲೆಗ್‌ಬೈ 2, ವೈಡ್ 7) 09

ವಿಕೆಟ್ ಪತನ: 1-0, 2-3, 3-25, 4-56, 5-81, 6-96, 7-98, 8-110.

ಬೌಲಿಂಗ್ ವಿವರ

ಅರ್ಷ್‌ದೀಪ್ ಸಿಂಗ್	4	0	9	4
ಮೊಹಮ್ಮದ್ ಸಿರಾಜ್	4	0	25	0
ಜಸ್‌ಪ್ರೀತ್ ಬುಮ್ರಾ	4	0	25	0
ಹಾರ್ದಿಕ್ ಪಾಂಡ್ಯ	4	1	14	2
ಶಿವಂ ದುಬೆ	1	0	11	0
ಅಕ್ಷರ್ ಪಟೇಲ್	3	0	25	1

ಭಾರತ: 18.2 ಓವರ್‌ಗಳಲ್ಲಿ 3 ವಿಕೆಟ್‌ಗೆ 111

ರೋಹಿತ್ ಶರ್ಮ ಸಿ ಹರ್ಮೀತ್ ಬಿ ಸೌರಭ್	03
ವಿರಾಟ್ ಕೊಹ್ಲಿ ಸಿ ಆ್ಯಂಡ್ರೀಸ್ ಬಿ ಸೌರಭ್	00
ರಿಷಭ್ ಪಂತ್ ಬಿ ಅಲಿ ಖಾನ್	18
ಸೂರ್ಯಕುಮಾರ್ ಔಟಾಗದೆ	50
ಶಿವಂ ದುಬೆ ಔಟಾಗದೆ	31

ಇತರ: (ಲೆಗ್‌ಬೈ 1, ವೈಡ್ 2, ನೋಬಾಲ್ 1, ಪೆನಾಲ್ಟಿ) 10

ವಿಕೆಟ್ ಪತನ: 1-1, 2-10, 3-39.

ಬೌಲಿಂಗ್ ವಿವರ

ಸೌರಭ್ ನೇತ್ರಾವಲ್ಕರ್	4	0	18	2
ಅಲಿ ಖಾನ್	3.2	0	21	1
ಜಸ್‌ದೀಪ್ ಸಿಂಗ್	4	0	24	0
ಶಾಡ್ಲಿ ವ್ಯಾನ್	4	0	25	0
ಕೋರಿ ಆ್ಯಂಡರ್ಸನ್	3	0	17	0

ಆಸೀಸ್‌ಗೆ ಹ್ಯಾಟ್ರಿಕ್ ಜಯ

ನಮೀಬಿಯಾ ವಿರುದ್ಧ 9 ವಿಕೆಟ್ ಜಯ

ಸೂಪರ್ 8 ಹಂತಕ್ಕೆ ಆಸ್ಟ್ರೇಲಿಯಾ

ನಾರ್ತ್ ಸೌಂಡ್(ಆಂಟಿಗುವಾ): ಬಲಗೈ ಲೆಗ್ ಸ್ಪಿನ್ನರ್ ಆ್ಯಡಂ ಝಂಪಾ (12ಕ್ಕೆ 4) ಅವರ ಕೈಚಳಕದ ಜತೆಗೆ ಟ್ರಾವಿಸ್ ಹೆಡ್ (34*) ಅವರ ಬಿರುಸಿನ ಆಟದ ಫಲದಿಂದ ಆಸ್ಟ್ರೇಲಿಯಾ ತಂಡ 9 ವಿಕೆಟ್‌ಗಳಿಂದ ನಮೀಬಿಯಾ ತಂಡವನ್ನು ಸೋಲಿಸಿ, ಟಿ20 ವಿಶ್ವಕಪ್ ಟೂರ್ನಿಯಲ್ಲಿ ಹ್ಯಾಟ್ರಿಕ್ ಗೆಲುವು ದಾಖಲಿಸಿತು. ಈ ಜಯದೊಂದಿಗೆ ಒಟ್ಟು 6 ಅಂಕ ಕಲೆಹಾಕಿದ ಮಾಜಿ ಚಾಂಪಿಯನ್ ಆಸ್ಟ್ರೇಲಿಯಾ, 'ಬಿ' ಗುಂಪಿನ ಅಗ್ರಸ್ಥಾನಿಯಾಗಿ ಸೂಪರ್ 8ರ ಹಂತಕ್ಕೆ ಅರ್ಹತೆ ಗಳಿಸಿದೆ.

ಸರ್ ವಿವಿಯನ್ ರಿಚರ್ಡ್ಸ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಸಂಘಟಿತ ಬೌಲಿಂಗ್ ನಿರ್ವಹಣೆಯೊಂದಿಗೆ ನಮೀಬಿಯಾ ತಂಡವನ್ನು 72 ರನ್‌ಗಳಿಗೆ ಕಟ್ಟಿಹಾಕಿದ ಆಸ್ಟ್ರೇಲಿಯಾ, ಟ್ರಾವಿಸ್ ಹೆಡ್ (34) ಮತ್ತು ನಾಯಕ ಮಿಚೆಲ್ ಮಾರ್ಷ್ (18) ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಕೇವಲ 5.4 ಓವರ್‌ಗಳಲ್ಲಿ 9 ವಿಕೆಟ್‌ಗಳ ವಿಜಯೋತ್ಸವ ಆಚರಿಸಿತು.

ಲೆಗ್ ಸ್ಪಿನ್ನರ್ ಆ್ಯಡಂ ಝಂಪಾ ಅವರ ಮಾರಕ ಬೌಲಿಂಗ್‌ಗೂ ಮುನ್ನ ಜೋಶ್ ಹೇಜಲ್‌ವುಡ್ ನಮೀಬಿಯಾದ ಆರಂಭಿಕರಾದ ಮೈಕೆಲ್ ವ್ಯಾನ್ ಲಿಂಗನ್ ಮತ್ತು ನಿಕೊ ಡೇವಿನ್ ಅವರನ್ನು ಔಟ್ ಮಾಡಿ ಆರಂಭಿಕ ಆಘಾತ ನೀಡಿದರು. ಹೀಗಾಗಿ ನಮೀಬಿಯಾ ಅಂತಾರಾಷ್ಟ್ರೀಯ ಟಿ20ಯಲ್ಲಿ ತನ್ನ ಕನಿಷ್ಠ ಮೊತ್ತಕ್ಕೆ ಆಲೌಟಾಯಿತು.



ಆ್ಯಡಂ ಝಂಪಾ

ಸಂಕ್ಷಿಪ್ತ ಸ್ಕೋರ್

ನಮೀಬಿಯಾ: 17 ಓವರ್‌ಗಳಲ್ಲಿ 72 (ಗೆರ್ಹಾರ್ಡ್ ಎರಾಸ್ಮಸ್ 36, ಮೈಕೆಲ್ ವ್ಯಾನ್ ಲಿಂಗನ್ 10; ಆ್ಯಡಂ ಝಂಪಾ 12ಕ್ಕೆ4, ಸ್ಟೋಯಿನಿಸ್ 9ಕ್ಕೆ 2, ಹೇಜಲ್‌ವುಡ್ 18ಕ್ಕೆ 2).

ಆಸ್ಟ್ರೇಲಿಯಾ: 5.4 ಓವರ್‌ಗಳಲ್ಲಿ 1 ವಿಕೆಟ್‌ಗೆ 74(ಟ್ರಾವಿಸ್ ಹೆಡ್ 34*, ಮಿಚೆಲ್ ಮಾರ್ಷ್ 18*, ಡೇವಿಡ್ ವಾರ್ನರ್ 20; ಡೇವಿಡ್ ವೈಸ್ 15ಕ್ಕೆ1).

ಸೂಪರ್ 8 ಹಂತಕ್ಕೆ ದ. ಆಫ್ರಿಕಾ

ಮಳೆಯಿಂದಾಗಿ ನೇಪಾಳ - ಶ್ರೀಲಂಕಾ ಪಂದ್ಯ ರದ್ದು

ಲಾಡರ್‌ಹಿಲ್(ಅಮೆರಿಕ): ಭಾರಿ ಮಳೆಯಿಂದಾಗಿ ನೇಪಾಳ ಮತ್ತು ಶ್ರೀಲಂಕಾ ನಡುವಿನ ಟಿ20 ವಿಶ್ವಕಪ್ ಟೂರ್ನಿಯ 'ಡಿ' ಗುಂಪಿನ ಪಂದ್ಯ ರದ್ದುಗೊಂಡಿದೆ. ಇದರಿಂದಾಗಿ ಉಭಯ ತಂಡಗಳು ಗುಂಪು ಹಂತದಲ್ಲೇ ನಿರ್ಗಮಿಸುವಂತಹ ಸಂಕಷ್ಟಕ್ಕೆ ಸಿಲುಕಿವೆ. ಈ ಮಧ್ಯೆ, ದಕ್ಷಿಣ ಆಫ್ರಿಕಾ ಗುಂಪಿನ ಅಗ್ರಸ್ಥಾನಿಯಾಗಿ ಸೂಪರ್ 8 ಹಂತಕ್ಕೆ ಅರ್ಹತೆ ಗಳಿಸಿದೆ.

ಸೆಂಟ್ರಲ್ ಬ್ರೋವಾರ್ಡ್ ರೀಜನಲ್ ಪಾರ್ಕ್ ಕ್ರೀಡಾಂಗಣದಲ್ಲಿ ಬುಧವಾರ ನಡೆಯಬೇಕಿದ್ದ ಪಂದ್ಯ ಯಾವುದೇ ಎಸೆತ ಕಾಣದೆ ರದ್ದುಗೊಂಡಿತು. ಹೀಗಾಗಿ ತಲಾ ಒಂದು ಅಂಕಕ್ಕೆ ಸೀಮಿತಗೊಂಡ ಉಭಯ ತಂಡಗಳು ಗುಂಪು ಹಂತದಲ್ಲೇ ಹೊರಬೀಳುವ ಆತಂಕಕ್ಕೆ ಗುರಿಯಾಗಿವೆ. ಮೂರು ಪಂದ್ಯಗಳಿಂದ ಆರು ಅಂಕ ಕಲೆಹಾಕಿರುವ ದಕ್ಷಿಣ ಆಫ್ರಿಕಾ ಗುಂಪಿನ ಮೊದಲ ಸ್ಥಾನಿಯಾಗಿ ಮುಂದಿನ ಹಂತಕ್ಕೆ ತೇರ್ಗಡೆ ಹೊಂದಿದೆ.

ನೇಪಾಳ ತನ್ನ ಮುಂದಿನ ಪಂದ್ಯದಲ್ಲಿ ಶನಿವಾರ ದಕ್ಷಿಣ ಆಫ್ರಿಕಾ ತಂಡವನ್ನು ಹಾಗೂ ಸೋಮವಾರ ಬಾಂಗ್ಲಾದೇಶ ತಂಡವನ್ನು ಕ್ರಮವಾಗಿ ಕಿಂಗ್ಸ್‌ಟೌನ್, ಸೇಂಟ್ ವಿನ್ಸೆಂಟ್‌ನಲ್ಲಿ ಎದುರಿಸಲಿದೆ. 8ರ ಘಟ್ಟದ ಪ್ರವೇಶವನ್ನು ಬಹುತೇಕ ಕಳೆದುಕೊಂಡಿರುವ ಶ್ರೀಲಂಕಾ ತನ್ನ ಅಂತಿಮ ಪಂದ್ಯದಲ್ಲಿ ಸೋಮವಾರ ಸೇಂಟ್ ಲೂಸಿಯಾದಲ್ಲಿ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ.

ನ್ಯೂಜಿಲೆಂಡ್ ತಂಡಕ್ಕೆ 'ಮಾಡು ಇಲ್ಲವೇ ಮಡಿ ಸ್ಥಿತಿ'

ತರೌಬಾ(ಟ್ರಿನಿಡಾಡ್): ಸೋಲಿನ ಅಭಿಯಾನ ಆರಂಭಿಸಿರುವ ನ್ಯೂಜಿಲೆಂಡ್ ತಂಡ ಟಿ20 ವಿಶ್ವಕಪ್ ಟೂರ್ನಿಯ ತನ್ನ ನಿರ್ಣಾಯಕ ಪಂದ್ಯದಲ್ಲಿ ಗುರುವಾರ ಸಹ ಆತಿಥೇಯ ವೆಸ್ಟ್ ಇಂಡೀಸ್ ತಂಡದ ಸವಾಲು ಎದುರಿಸಲಿದ್ದು, "ಮಾಡು ಇಲ್ಲವೇ ಮಡಿ ಸ್ಥಿತಿ"ಯಲ್ಲಿದೆ.

ಪ್ರಾವಿಡೆನ್ಸ್ ಕ್ರೀಡಾಂಗಣದಲ್ಲಿ ನಡೆದ ತನ್ನ ಆರಂಭಿಕ ಪಂದ್ಯದಲ್ಲಿ ಅಫಘಾನಿಸ್ತಾನ ವಿರುದ್ಧ 15.2 ಓವರ್‌ಗಳಲ್ಲಿ ಕೇವಲ 75 ರನ್‌ಗಳಿಗೆ ಆಲ್‌ಔಟ್ ಆಗಿದ್ದ ಕಿವೀಸ್ ತಂಡ 84 ರನ್‌ಗಳ ಹೀನಾಯ ಸೋಲಿಗೆ ಗುರಿಯಾಗಿತ್ತು. ಈ ಸೋಲು ಡಿ ಗುಂಪಿನ ತಂಡಗಳಲ್ಲಿ ಅತ್ಯಂತ ಕನಿಷ್ಠ ಮಟ್ಟದ ನೆಟ್ ರನ್ ರೇಟ್‌ಗೆ (-4.2) ತಂಡವನ್ನು ಕುಸಿಯುವಂತೆ ಮಾಡಿದೆ. ಜತೆಗೆ ಗುಂಪಿನಲ್ಲಿ ನಾಲ್ಕನೇ ಹಾಗೂ ಅಂತಿಮ ಸ್ಥಾನದಲ್ಲಿದೆ.

ಸದ್ಯ ನ್ಯೂಜಿಲೆಂಡ್ ತಂಡ ಗುಂಪು ಹಂತದಲ್ಲೇ ನಿರ್ಗಮಿಸುವ ಹಾದಿಯಲ್ಲಿದೆ. ವಿಶ್ವಕಪ್‌ನಲ್ಲಿ ಗಮನಾರ್ಹ ಸ್ಥಿರತೆಗೆ ಹೆಸರುವಾಸಿಯಾದ ತಂಡಕ್ಕೆ ಈ ಬಾರಿ ಅನಿರೀಕ್ಷಿತ ಸಂಕಟ ಎದುರಾಗಿದೆ.

ಹ್ಯಾಟ್ರಿಕ್ ಜಯದ ನಿರೀಕ್ಷೆಯಲ್ಲಿ ವೆಸ್ಟ್ ಇಂಡೀಸ್

ಅತ್ತ ಸತತ ಎರಡು ಗೆಲುವಿನಿಂದ ಆತ್ಮವಿಶ್ವಾಸದಲ್ಲಿರುವ ವೆಸ್ಟ್ ಇಂಡೀಸ್, ಮೂರನೇ ಜಯದೊಂದಿಗೆ ಸೂಪರ್ 8ರ ಹಂತಕ್ಕೆ ಅರ್ಹತೆ ಪಡೆಯುವ ನಿರೀಕ್ಷೆಯಲ್ಲಿದೆ. ತನ್ನ ಆರಂಭಿಕ ಪಂದ್ಯದಲ್ಲಿ ಪಪುವಾ ನ್ಯೂ ಗಿನಿಯಾ ವಿರುದ್ಧ ಪ್ರಯಾಸದ ಜಯ ಗಳಿಸಿದ ಕೆರಿಬಿಯನ್ನರು, ನಂತರದ ಪಂದ್ಯದಲ್ಲಿ ಉಗಾಂಡ ವಿರುದ್ಧ 134 ರನ್‌ಗಳಿಂದ ಗೆದ್ದು ಬೀಗಿದೆ.

ಪಂದ್ಯ ಆರಂಭ: ಬೆಳಗ್ಗೆ 6ಕ್ಕೆ

ಸ್ಥಳ: ಬ್ರಯಾನ್ ಲಾರಾ ಕ್ರೀಡಾಂಗಣ, ತರೌಬಾ

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಬಾಂಗ್ಲಾಗೆ ಪುಟಿದೇಳುವ ವಿಶ್ವಾಸ ಸೇಂಟ್ ವಿನ್ಸೆಂಟ್: ಆಡಿದ ಮೊದಲೆರಡು ಪಂದ್ಯಗಳಲ್ಲಿ ಮಿಶ್ರಫಲ ಕಂಡಿರುವ ಬಾಂಗ್ಲಾದೇಶ ಟಿ20 ವಿಶ್ವಕಪ್‌ನ 'ಡಿ' ಗುಂಪಿನ ಪಂದ್ಯದಲ್ಲಿ ಗುರುವಾರ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದ್ದು, ಪುಟಿದೇಳುವ ಇರಾದೆ ಹೊಂದಿದೆ. ಬಾಂಗ್ಲಾದೇಶ ಮತ್ತು ನೆದರ್ಲೆಂಡ್ಸ್ ಎರಡೂ ತಂಡಗಳು ಆಡಿದ 2 ಪಂದ್ಯಗಳಿಂದ ಗೆಲುವು - ಸೋಲಿನ ಮಿಶ್ರ ಫಲ ಕಂಡಿದ್ದು 2 ಅಂಕ ಹೊಂದಿವೆ. ಆದರೆ ನೆಟ್ ರನ್‌ರೇಟ್‌ನಲ್ಲಿ ಬಾಂಗ್ಲಾದೇಶಕ್ಕಿಂತ ಕೆಳಗಿದೆ.

ಪಂದ್ಯ ಆರಂಭ: ರಾತ್ರಿ 8ಕ್ಕೆ

ಮೃತ ನೌಕರರು, ಪ್ರಯಾಣಿಕರ ಅವಲಂಬಿತರಿಗೆ ಪರಿಹಾರ ವಿತರಣೆ

■ ವಿಕ ಸುದ್ದಿಲೋಕ ಬೆಂಗಳೂರು

ಅನಾರೋಗ್ಯದಿಂದ ಹಾಗೂ ಅಪಘಾತದಲ್ಲಿ ಮೃತಪಟ್ಟ ನೌಕರರ ಅವಲಂಬಿತರಿಗೆ 1 ಕೋಟಿ ರೂ. ವಿಮಾ ಪರಿಹಾರ, ಬಸ್ ಅಪಘಾತಗಳಲ್ಲಿ ಸಾವಿಗೀಡಾದ ಪ್ರಯಾಣಿಕರ ಅವಲಂಬಿತರಿಗೆ ತಲಾ 10 ಲಕ್ಷ ರೂ. ಪರಿಹಾರದ ಚೆಕ್‌ಗಳನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಬುಧವಾರ ವಿತರಿಸಿದರು.

ಶಾಂತಿನಗರದಲ್ಲಿರುವ ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸೇವೆಯಲ್ಲಿದ್ದಾಗಲೇ ಮೃತಪಟ್ಟಿರುವ 4 ಮಂದಿ ನೌಕರರ ಅವಲಂಬಿತರಿಗೆ ತಲಾ 1 ಕೋಟಿ ರೂ. ವಿಮಾ ಪರಿಹಾರ, ಕುಟುಂಬ ಕಲ್ಯಾಣ ಯೋಜನೆಯಡಿ 23 ನೌಕರರ ಅವಲಂಬಿತರಿಗೆ ತಲಾ 10 ಲಕ್ಷ ರೂ. ಪರಿಹಾರ ಹಾಗೂ ನಿಗಮದ ಬಸ್ ಅಪಘಾತಗಳಲ್ಲಿ ಸಾವನ್ನಪ್ಪಿದ್ದ 4 ಪ್ರಯಾಣಿಕರ ಅವಲಂಬಿತರಿಗೆ ತಲಾ 10 ಲಕ್ಷ ರೂ.ಗಳ ಪರಿಹಾರದ ಚೆಕ್‌ಗಳನ್ನು ವಿತರಿಸಲಾಯಿತು.

ಪರಿಹಾರದ ಚೆಕ್‌ಗಳನ್ನು ವಿತರಿಸಿ ಮಾತನಾಡಿದ ಸಚಿವ ರಾಮಲಿಂಗಾರೆಡ್ಡಿ, "ಸಾರಿಗೆ ಸಂಸ್ಥೆಯ ನೌಕರರು ಹಾಗೂ ಪ್ರಯಾಣಿಕರ ಹಿತರಕ್ಷಣೆಗಾಗಿ ಹಲವು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗಿದೆ. ಜೀವ ಅಮೂಲ್ಯವಾದದ್ದು, ಅದಕ್ಕೆ ಬೆಲೆ ಕಟ್ಟಲಾಗದು. ಆದರೆ, ಮೃತ ನೌಕರರ ಕುಟುಂಬದ ಆರ್ಥಿಕ ಸ್ವಾವಲಂಬನೆಗಾಗಿ ಜಾರಿಗೆ ತಂದಿರುವ ಯೋಜನೆಗಳು ದೂರದರ್ಶಿತ್ವ ಹೊಂದಿವೆ. ಪರಿಹಾರದ ಮೊತ್ತವನ್ನು ಮಕ್ಕಳ ವಿದ್ಯಾಭ್ಯಾಸ, ಮನೆ ನಿರ್ಮಾಣ ಕಾರ್ಯಗಳಿಗೆ ಬಳಸಿಕೊಳ್ಳಬೇಕು. ಇತರೆ ಉದ್ದೇಶಗಳಿಗೆ ಬಳಸಿ ಪೋಲು ಮಾಡಬಾರದು," ಎಂದು ಸಲಹೆ ನೀಡಿದರು.

ಕೆಎಸ್‌ಆರ್‌ಟಿಸಿ ಅಧ್ಯಕ್ಷ ಗುಬ್ಬಿ ಶ್ರೀನಿವಾಸ್, ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್, ಕಾರ್ಮಿಕ ಸಂಘಟನೆಗಳ ಮುಖಂಡರಾದ ಅನಂತಸುಬ್ಬರಾವ್, ವಿಜಯಭಾಸ್ಕರ್, ರೇವಪ್ಪ, ಮಂಜುನಾಥ್, ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಬೆಂಗಳೂರಿನ ಕೆಎಸ್ ಆರ್ ಟಿಸಿ ಕೇಂದ್ರ ಕಚೇರಿಯಲ್ಲಿ ಬುಧವಾರ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು 1 ಕೋಟಿ ರೂ. ವಿಮಾ ಪರಿಹಾರದ ಚೆಕ್ ಅನ್ನು ಮೃತಪಟ್ಟ ನೌಕರರ ಅವಲಂಬಿತರಿಗೆ ವಿತರಿಸಿದರು.

ನಿರ್ಣಾಯಕ ಮಂತ್ರಿಗಳಾಗಿದ್ದರು ವೀರೇಂದ್ರ ಪಾಟೀಲ್, ಗುರುಪಾದಸ್ವಾಮಿ, ಬೊಮ್ಮಾಯಿ

ಯತ್ನಾಳ್, ಜಿ.ಎಂ.ಸಿದ್ದೇಶ್ವರ್, ಸುರೇಶ್ ಅಂಗಡಿ, ಖೂಬಾ, ಸೋಮಣ್ಣ ಸಹಾಯಕರಷ್ಟೆ

ಲಿಂಗಾಯತರಿಗೆ ಸಂಪುಟ ದರ್ಜೆ ಮರೀಚಿಕೆ

■ ಶಶಿಧರ ನಂದಿಕಲ್ ಬೆಂಗಳೂರು
shashidhar.nandikal@timesgroup.com

ರಾಜ್ಯದಲ್ಲಿ ಪ್ರಮುಖವಾಗಿರುವ ವೀರಶೈವ-ಲಿಂಗಾಯತ ಸಮುದಾಯಕ್ಕೆ ಈ ಬಾರಿಯೂ ಕೇಂದ್ರದಲ್ಲಿ ಸಂಪುಟ ದರ್ಜೆಯ ಸ್ಥಾನಮಾನ ತಪ್ಪಿರುವುದು ಚರ್ಚೆಗೆ ಎಡೆಮಾಡಿಕೊಟ್ಟಿದೆ. ಸುಮಾರು ಮೂರು ದಶಕದಿಂದ ಕೇಂದ್ರದಲ್ಲಿ 'ಕ್ಯಾಬಿನೆಟ್ ಮಿನಿಸ್ಟರ್' ಎಂಬ ಪದವು ಲಿಂಗಾಯತರಿಗೆ ಮರೀಚಿಕೆಯಂತಾಗಿ ಹೋಗಿದೆ.

> ■ ಮೂರು ದಶಕದಿಂದ ಕೇಂದ್ರ ಕ್ಯಾಬಿನೆಟ್‌ನಲ್ಲಿ ಸಿಕ್ಕಿಲ್ಲ ಸ್ಥಾನಮಾನ, ರಾಜ್ಯ ಖಾತೆಗೆ ಸೀಮಿತ

ವಿಶೇಷವಾಗಿ ಕಳೆದ ಎರಡೂವರೆ ದಶಕದಿಂದಲೂ ಅಕ್ಷರಶಃ ಬಿಜೆಪಿ ಬೆನ್ನಿಗೆ ನಿಂತಿರುವ ಲಿಂಗಾಯತರಿಗೆ ಕ್ಯಾಬಿನೆಟ್ ಬರ್ತ್ ನೀಡಲು ಬೇಕಾಬಿಟ್ಟಿ ಮಾಡುತ್ತಿರುವುದು ಅಚ್ಚರಿದಾಯಕವೆನಿಸಿದೆ.

ಹಾಗೆ ನೋಡಿದರೆ ವಾಜಪೇಯಿ ಅವಧಿಯಿಂದಲೂ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಈವರೆಗೂ ಲಿಂಗಾಯತರಿಗೆ ಸಂಪುಟ ದರ್ಜೆ ನೀಡಿಯೇ ಇಲ್ಲ. ಕಾಂಗ್ರೆಸ್ ಮತ್ತು ಜನತಾ ರಂಗಗಳ ಸರಕಾರಗಳಲ್ಲಿ ಲಿಂಗಾಯತರು ಕ್ಯಾಬಿನೆಟ್ ಮಂತ್ರಿಗಳಾದದ್ದು ಕೊನೆ. ಆ ಬಳಿಕ ಈ ಸಮುದಾಯದಿಂದ ಆಯ್ಕೆಯಾದವರೆಲ್ಲರೂ ಸಹಾಯಕ ಸಚಿವರ(ಎಂಒಎಸ್) ಸ್ಥಾನಕ್ಕೆ ಸೀಮಿತರಾಗಿದ್ದಾರೆ.

ಎಂಬತ್ತರ ದಶಕದ ಬಳಿಕ ಕಾಂಗ್ರೆಸ್‌ನಿಂದಲೂ ಈ ಸಮುದಾಯಕ್ಕೆ ಸಂಪುಟ ದರ್ಜೆ ನೀಡಿಲ್ಲ. ಇಂದಿರಾ ಗಾಂಧಿ, ರಾಜೀವ್ ಗಾಂಧಿ ಕ್ಯಾಬಿನೆಟ್‌ನಲ್ಲಿ ವೀರೇಂದ್ರ ಪಾಟೀಲ್ ಅವರು ಸಂಪುಟ ದರ್ಜೆ ಸಚಿವರಾಗಿದ್ದರು. ಅನಂತರದಲ್ಲಿ ಕಾಂಗ್ರೆಸ್‌ನಲ್ಲಿ ಲಿಂಗಾಯತರಿಗೆ ಕ್ಯಾಬಿನೆಟ್ ಬರ್ತ್ ಸಿಕ್ಕಿಲ್ಲ. ವಿ.ಪಿ.ಸಿಂಗ್ ಸರಕಾರದಲ್ಲಿ ಎಂ.ಎಸ್.ಗುರುಪಾದಸ್ವಾಮಿ ಸಂಪುಟ ದರ್ಜೆ ಸಚಿವರಾಗಿದ್ದರು. ನಂತರ ಎಚ್.ಡಿ.ದೇವೇಗೌಡರು, ಐ.ಕೆ.ಗುಜ್ರಾಲ್ ಸಂಪುಟದಲ್ಲಿ ಎಸ್.ಆರ್.ಬೊಮ್ಮಾಯಿ ಅವರು ಸಂಪುಟ ದರ್ಜೆ ಸಚಿವರಾಗಿದ್ದರು.

> **ಸಮರ್ಥನೆ ಏನು?**
>
> ರಾಜ್ಯದಲ್ಲಿ ಬಿಜೆಪಿಯಿಂದ ಮುಖ್ಯಮಂತ್ರಿಗಳಾಗಿರುವ ನಾಲ್ವರಲ್ಲಿ ಮೂವರು ಲಿಂಗಾಯತರು. ಮತ್ತೊಬ್ಬರು ಒಕ್ಕಲಿಗರು. ಈ ಹಿಂದೆ ಲಿಂಗಾಯತರನ್ನು ಸಿಎಂ ಮಾಡಿದ್ದರಿಂದ ಕೇಂದ್ರದಲ್ಲಿ ಸಂಪುಟ ದರ್ಜೆ ಸ್ಥಾನ ನೀಡಿಲ್ಲವೆಂಬ ಸಮರ್ಥನೆಯೂ ರಾಜಕೀಯ ವಲಯದಲ್ಲಿದೆ. ಆದರೆ, ಇದು ಸಮಂಜಸವಾದ ಸಮರ್ಥನೆಯಾಗಿ ಎನಿಸುವುದಿಲ್ಲ ಎಂಬ ಮಾತುಗಳಿವೆ.
>
> **ದಲಿತ, ಒಬಿಸಿಗೂ ಇಲ್ಲ:** ಯುಪಿಎ ಅವಧಿಯಲ್ಲಿ ರಾಜ್ಯದಿಂದ ದಲಿತ ಸಮುದಾಯದ ಮಲ್ಲಿಕಾರ್ಜುನ ಖರ್ಗೆ, ಒಬಿಸಿಯಡಿ ಬರುವ ಎಂ.ವೀರಪ್ಪ ಮೊಯ್ಲಿ ಸಂಪುಟ ದರ್ಜೆ ಸಚಿವರಾಗಿದ್ದರು. ಎನ್‌ಡಿಎ ಅವಧಿಯಲ್ಲಿ ದಲಿತರಾದ ರಮೇಶ್ ಜಿಗಜಿಣಗಿ, ಎ.ನಾರಾಯಣಸ್ವಾಮಿ ಸಹಾಯಕ ದರ್ಜೆಗೆ ಸೀಮಿತರಾಗಿದ್ದರು. ಎನ್‌ಡಿಎ ಸರಕಾರದಲ್ಲಿ ರಾಜ್ಯದಿಂದ ಒಬಿಸಿಗೆ ಪ್ರಾತಿನಿಧ್ಯವೂ ದೊರೆತಿಲ್ಲ. ಲಿಂಗಾಯತರ ವಿಷಯದಲ್ಲಿ ಈ ಬಗ್ಗೆ ಚರ್ಚೆಯಾದರೂ ಆಗುತ್ತಿದೆ. ದಲಿತ, ಹಿಂದುಳಿದ ವರ್ಗಗಳ ಸಂಬಂಧದಲ್ಲಿ ಅಂತಹ ಧ್ವನಿಯೂ ಕೇಳಿ ಬರುತ್ತಿಲ್ಲ.



ಲಿಂಗಾಯತರ ಹಾದಿ: ರಾಜ್ಯದಲ್ಲಿ ಲಿಂಗಾಯತರು ಆರಂಭದಲ್ಲಿ ಕಾಂಗ್ರೆಸ್ ವೋಟ್‌ಬ್ಯಾಂಕ್ ಆಗಿದ್ದರು. ಎಸ್.ನಿಜಲಿಂಗಪ್ಪ, ಬಿ.ಡಿ.ಜತ್ತಿ ಅವರಂತಹ ನಾಯಕರ ಕಾರಣದಿಂದ ಲಿಂಗಾಯತರು ಕಾಂಗ್ರೆಸ್‌ನೊಂದಿಗಿದ್ದರು. ಕಾಂಗ್ರೆಸ್ ವಿಭಜನೆಯಾದಾಗ ಜನತಾ ಪರಿವಾರದಲ್ಲಿ ಲಿಂಗಾಯತರು ಪರ್ಯಾಯ ಕಂಡುಕೊಂಡಿದ್ದರು. ರಾಮಕೃಷ್ಣ ಹೆಗಡೆ ಜತೆಗೆ ನಿಂತಿದ್ದ ಲಿಂಗಾಯತರು ಜನತಾ ಪರಿವಾರ ಛಿದ್ರವಾದಾಗ ಬಿಜೆಪಿಯತ್ತ ವಾಲಿದರು. 1998ರಲ್ಲಿ ಲೋಕಶಕ್ತಿ ಮೂಲಕ ರಾಮಕೃಷ್ಣ ಹೆಗಡೆ ಬಿಜೆಪಿಯ ನೆಚ್ಚು ಬೆಳೆಸಿದರು. ಅಲ್ಲಿಂದ ಉತ್ತರ ಕರ್ನಾಟಕದ ಹಲವು ಲಿಂಗಾಯತ ನಾಯಕರು, ಮುಖಂಡರು ಬಿಜೆಪಿಯತ್ತ ಹೊರಳಿದರು. 1999ರ ಚುನಾವಣೆ ಬಳಿಕ ಅನಾರೋಗ್ಯದಿಂದಾಗಿ ಸಕ್ರಿಯ ರಾಜಕಾರಣದಿಂದ ಹೆಗಡೆ ದೂರವಾದರೆ ಎಸ್.ಆರ್.ಬೊಮ್ಮಾಯಿ, ಜೆ.ಎಚ್.ಪಟೇಲರಿಗೂ ಜನತಾ ಪರಿವಾರವನ್ನು ಸಂಘಟಿಸಲು ಸಾಧ್ಯವಾಗಲಿಲ್ಲ. ಈ ಕಾರಣದಿಂದ ಲಿಂಗಾಯತರು ಬಿಜೆಪಿಯಲ್ಲಿ ಭವಿಷ್ಯ ಅರಸಿದರು. ಅಷ್ಟು ಹೊತ್ತಿಗೆ ಬಿ.ಎಸ್.ಯಡಿಯೂರಪ್ಪ ಪ್ರವರ್ಧಮಾನಕ್ಕೆ ಬಂದಿದ್ದರು. ತೊಂಬತ್ತರ ದಶಕದಿಂದ ಪ್ರಾರಂಭವಾಗಿ ಮೋದಿ ಕಾಲಘಟ್ಟದ ವರೆಗೂ ಲೋಕಸಭೆ ಚುನಾವಣೆಗಳಲ್ಲಿ ಲಿಂಗಾಯತರ ಬೆಂಬಲದಲ್ಲಿ ಬಿಜೆಪಿಗೆ ದೊಡ್ಡ ಮಟ್ಟದ ಬೆಂಬಲ ದೊರೆತಿದೆ. ಇಷ್ಟಾದರೂ ಈ ಸುದೀರ್ಘ ಅವಧಿಯಲ್ಲಿ ಯಾವೊಬ್ಬ ಲಿಂಗಾಯತ ನಾಯಕರಿಗೂ ಕೇಂದ್ರದಲ್ಲಿ ಸಂಪುಟ ದರ್ಜೆಯ ಸಚಿವ ಸ್ಥಾನ ಸಿಗದಿರುವುದು ವಾಸ್ತವ.

ವಾಜಪೇಯಿ ಸರಕಾರದಲ್ಲಿ ಬಸನಗೌಡ ಪಾಟೀಲ್ ಯತ್ನಾಳ್ ಸಹಾಯಕ ಸಚಿವರಾಗಿದ್ದರು. ಮೋದಿ ಮೊದಲ ಅವಧಿಯಲ್ಲಿ ಜಿ.ಎಂ.ಸಿದ್ದೇಶ್ವರ್, ಎರಡನೇ ಅವಧಿಯಲ್ಲಿ ಸುರೇಶ್ ಅಂಗಡಿ, ಭಗವಂತ ಖೂಬಾ ಸಹಾಯಕ ಸಚಿವರಾಗಿದ್ದರು. ಇದೀಗ ಅವಕಾಶ ಪಡೆದಿರುವ ವಿ.ಸೋಮಣ್ಣ ಕೂಡ ಸಹಾಯಕ ಸಚಿವರು!

ನರೇಂದ್ರ ಮೋದಿ ಅವಧಿಯನ್ನೇ ತೆಗೆದುಕೊಂಡರೆ, 2014ರಲ್ಲಿ ಲಿಂಗಾಯತ ಸಮಾಜದಿಂದ 7 ಸಂಸದರಿದ್ದರು. 2019ರಲ್ಲಿ 9 ಮಂದಿ ಈ ಸಮಾಜದಿಂದ ಆಯ್ಕೆಯಾಗಿದ್ದರು. ಮೋದಿಯವರ ಮೊದಲ ಅವಧಿಯಲ್ಲಿ ಬ್ರಾಹ್ಮಣ ಸಮಾಜದ ಅನಂತಕುಮಾರ್, ಒಕ್ಕಲಿಗರಾದ ಡಿ.ವಿ.ಸದಾನಂದಗೌಡ ಮತ್ತು ರಾಜ್ಯದಿಂದ ರಾಜ್ಯಸಭೆ ಪ್ರತಿನಿಧಿಸುತ್ತಿದ್ದ ವೆಂಕಯ್ಯ ನಾಯ್ಡು ಅವರಿಗೆ ಸಂಪುಟ ದರ್ಜೆ ಕೊಡಲಾಗಿತ್ತು. ಮೋದಿ 2ರಲ್ಲಿ ಸದಾನಂದಗೌಡ ಮುಂದುವರಿದರೆ ಅನಂತಕುಮಾರ್ ನಿಧನದ ಹಿನ್ನೆಲೆಯಲ್ಲಿ ಬ್ರಾಹ್ಮಣರ ಕೋಟಾದಲ್ಲಿ ಸಂಪುಟ ದರ್ಜೆಗೆ ಪ್ರಲ್ಹಾದ ಜೋಶಿ ಪ್ರವೇಶ ಪಡೆದಿದ್ದರು. ರಾಜ್ಯದಿಂದ ರಾಜ್ಯಸಭೆ ಸದಸ್ಯೆಯಾಗಿರುವ ಹಿನ್ನೆಲೆಯಲ್ಲಿ ನಿರ್ಮಲಾ ಸೀತಾರಾಮನ್ ಅವರೂ ರಾಜ್ಯದ ಕೋಟಾದಡಿ ಬರುತ್ತಾರೆ.

ವಕೀಲರ ಕಾಯಿದೆ ಜಾರಿಗೆ ಅಧಿಸೂಚನೆ

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದಲ್ಲಿ ವಕೀಲರ ರಕ್ಷಣೆಗೆ ಸಂಬಂಧಿಸಿದ ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ಅಧಿನಿಯಮ-2023 ಜಾರಿಗೊಳಿಸಲಾಗಿದೆ.

ಈ ಸಂಬಂಧ ರಾಜ್ಯ ಸರಕಾರ ಜೂ.10ರಂದು ಗೆಜೆಟ್ ಅಧಿಸೂಚನೆ ಪ್ರಕಟಿಸಿದ್ದು, ಆ ದಿನದಿಂದಲೇ ಕಾಯಿದೆ ಜಾರಿಗೆ ಬರಲಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಇದರಿಂದಾಗಿ ವಕೀಲ ವೃಂದದ ಬಹುದಿನಗಳ ಬೇಡಿಕೆ ಈಡೇರಿದಂತಾಗಿದೆ.

ಇನ್ನು ಮುಂದೆ ವಕೀಲರು ತಮ್ಮ ವೃತ್ತಿಪರ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗ ಅವರ ಮೇಲೆ ಹಲ್ಲೆ ನಡೆಸುವುದು, ಕರ್ತವ್ಯಕ್ಕೆ ಅಡ್ಡಿಪಡಿಸುವುದು, ಬೆದರಿಕೆ ಹಾಕುವುದು ಅಥವಾ ಕಿರುಕುಳ ನೀಡುವುದನ್ನು ನಿಷೇಧಿಸಲಾಗಿದ್ದು, ಒಂದು ವೇಳೆ ಅಂತಹ ಕೃತ್ಯಗಳು ನಡೆದರೆ ಅದು ಶಿಕ್ಷಾರ್ಹ ಅಪರಾಧವಾಗಲಿದೆ.

ನ್ಯಾಯವಾದಿಯ ಮೇಲೆ ಯಾವುದೇ ವ್ಯಕ್ತಿಯು ಹಿಂಸಾಚಾರ ಕೃತ್ಯ ಎಸಗುವಂತಿಲ್ಲ. ಒಂದು ವೇಳೆ ಹಲ್ಲೆ, ಹಿಂಸಾಚಾರ ನಡೆಸಿದರೆ ಅಂತಹ ವ್ಯಕ್ತಿಯು ಆರು ತಿಂಗಳಿಂದ ಮೂರು ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ 1 ಲಕ್ಷ ರೂ.ಗಳವರೆಗೆ ವಿಸ್ತರಿಸಬಹುದಾದ ದಂಡ ಭರಿಸಬೇಕಾಗುತ್ತದೆ ಎಂದು ಕಾಯಿದೆಯಲ್ಲಿ ಹೇಳಲಾಗಿದೆ.

> ■ ವಕೀಲರು ಬೆದರಿಕೆ, ಅಡ್ಡಿ, ಕಿರುಕುಳ ಅಥವಾ ಅನುಚಿತ ಹಸ್ತಕ್ಷೇಪರಹಿತವಾಗಿ ತಮ್ಮ ಎಲ್ಲಾ ವೃತ್ತಿಪರ ಕಾರ್ಯ ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಸಾಧ್ಯವಾಗತಕ್ಕದ್ದು
>
> ■ ನ್ಯಾಯವಾದಿಗಳು ಯಾವುದೇ ಭಯ ಅಥವಾ ಬಾಹ್ಯ ಪ್ರಭಾವಕ್ಕೆ ಒಳಗಾಗದೆ ತಮ್ಮ ವೃತ್ತಿಪರ ಸೇವೆಗಳನ್ನು ಸಲ್ಲಿಸುವುದಕ್ಕಾಗಿ ಹಾಗೂ ಅವರ ಮೇಲಿನ ಹಿಂಸೆಯನ್ನು ನಿಷೇಧಿಸಿ ಅವರಿಗೆ ರಕ್ಷಣೆ ನೀಡುವುದು ಕಾಯಿದೆಯ ಮೂಲ ಉದ್ದೇಶ.
>
> ■ ವಕೀಲರು ಮಾನ್ಯ ಮಾಡಿದ ವೃತ್ತಿಪರ ಕರ್ತವ್ಯಗಳು, ಮಾನಕಗಳು ಮತ್ತು ನೈತಿಕತೆಗಳ ಅನುಸಾರವಾಗಿ ತೆಗೆದುಕೊಂಡ ಕ್ರಮಕ್ಕಾಗಿ ಅಭಿಯೋಜನೆ ಅಥವಾ ಆಡಳಿತಾತ್ಮಕ, ಆರ್ಥಿಕ ಅಥವಾ ಇತರೆ ನಿರ್ಬಂಧಗಳನ್ನು ಅನುಭವಿಸತಕ್ಕದ್ದಲ್ಲ ಅಥವಾ ಭಯಪಡತಕ್ಕದ್ದಲ್ಲ ಎಂಬುದನ್ನು ಸರಕಾರ ಖಚಿತಪಡಿಸಬೇಕು.
>
> ■ ವಕೀಲರು ತಮ್ಮ ಕರ್ತವ್ಯ ನಿರ್ವಹಣೆ ಮಾಡುವಾಗ ಅವರ ಭದ್ರತೆಗೆ ಬೆದರಿಕೆ ಒಡ್ಡಿದಾಗ ಸಂಬಂಧಿಸಿದ ಪ್ರಾಧಿಕಾರಗಳು ಅವರನ್ನು ರಕ್ಷಿಸಬೇಕು.

ಇದು ಬ್ರಹ್ಮರ್ಷಿ ಆನಂದ ಸಿದ್ಧಿ ಪೀಠದ ಆಯುರ್ವೇದ ಉತ್ಪನ್ನ

ನಿಮ್ಮ ಬ್ಯುಸಿ ಕೆಲಸದಲ್ಲಿ ನಿಮ್ಮ ಕೂದಲ ಕಾಳಜಿ ಮರೆಯುವಿರಾ?
ನೀವು ಒತ್ತಡಕ್ಕೊಳಪಟ್ಟಿದ್ದೀರಾ?
ನಿಮಗೆ ನಿದ್ರೆಯ ಕೊರತೆಯಿದೆಯಾ?
ಇವೆಲ್ಲಕ್ಕೂ ಶಕುಂತಲಾ ಹರ್ಬಲ್ ಹೇರ್ ಟೋನ್
ಒಂದೇ ಉತ್ತರ



ಪ್ರಾಚೀನ ಗ್ರಂಥದಿಂದ ಪ್ರಮಾಣಿತವಾದ ಫಾರ್ಮುಲಾ
ನಿಮ್ಮ ಹೊಸ ಪೀಳಿಗೆಗಾಗಿ
ಶಕುಂತಲಾ
ಹರ್ಬಲ್ ಹೇರ್ ಟೋನ್
ನೂರಕ್ಕೆ ನೂರು ಪ್ರತಿಶತ ಪರಿಶುದ್ಧ ಮತ್ತು ಸ್ವಾಭಾವಿಕ

ಪ್ರಾಚೀನ ಗ್ರಂಥಗಳಲ್ಲಿ ತಿಳಿಸಲಾದ ಅಪರೂಪದ ಆಯುರ್ವೇದ ಔಷಧಿಯುಕ್ತ ಗಿಡಮೂಲಿಕೆಗಳಿಂದ ಪರಿಶುದ್ಧ ತೆಂಗಿನ ಎಣ್ಣೆಯಲ್ಲಿ ಶಕುಂತಲಾ ಹರ್ಬಲ್ ಹೇರ್ ಟೋನ್‌ನ್ನು ತಯಾರಿಸಲಾಗಿದೆ.

- ಇದು ಅತಿ ಉದ್ದನೆಯ ಕಪ್ಪಾದ ಸದೃಢ ಮತ್ತು ದಟ್ಟ ಕೂದಲು ಬೆಳವಣಿಗೆಗೆ ಸಹಕಾರಿ.
- ಇದು ನಿಮ್ಮ ತಲೆ ಮತ್ತು ಕಣ್ಣುಗಳನ್ನು ತಂಪಾಗಿಡುವುದು, ಇದರಿಂದ ಗಾಢ ನಿದ್ರೆ ಬರುವುದು.
- ಪ್ರತಿನಿತ್ಯದ ಒತ್ತಡವನ್ನು ಶಮನಗೊಳಿಸಿ ತಲೆನೋವನ್ನು ತಡೆಗಟ್ಟುವುದು.
- ಬಾಲನೆರೆ ಸಮಸ್ಯೆ, ತಲೆಕೂದಲು ಉದುರುವಿಕೆ, ತಲೆಹೊಟ್ಟು ಇತ್ಯಾದಿಗಳನ್ನು ತಡೆಗಟ್ಟಲು ಸಹಕಾರಿಯಾಗಿದೆ.
- ಪರಿಶುದ್ಧ ಕೇರಳ ಕೊಬ್ಬರಿ ಎಣ್ಣೆಯಿಂದ ತಯಾರಿಸಲಾಗಿದೆ.

ಇದು ಯಾವುದೇ ಹಾನಿಕಾರಕ ಕೃತಕ ಬಣ್ಣ ಅಥವಾ ರಾಸಾಯನಿಕ ಸುಗಂಧ ದ್ರವ್ಯಗಳಿಂದ ಮುಕ್ತವಾಗಿದ್ದು, ಕೂದಲಿಗೆ ನೈಸರ್ಗಿಕವಾಗಿ ಸಂಪೂರ್ಣ ಸುರಕ್ಷತೆ ನೀಡುತ್ತದೆ.

From the house of A & J Health Care, Bangalore Ph: 8762226000, 9243112373.
For a Healthy Society
Also available at: amazon Flipkart

ಕೀಲು, ಸಂಧಿವಾತ ಹಾಗೂ ಸಕಲ ಅಂಗಾಂಗದ ನೋವುಗಳಿಗೆ
ಅಮೃತರತ್ನ ತೈಲ ಮತ್ತು ಮಾತ್ರೆ

'ಅಮೃತರತ್ನ' ನೋವು ನಿವಾರಕ ತೈಲವು ಗಂಟುನೋವು, ಬೆನ್ನುನೋವು, ಕುತ್ತಿಗೆನೋವು, ಸ್ನಾಯುಸೆಳೆತ, ಉಳುಕು, ತೀವ್ರ ತರಹದ ಸೆಳೆತ, ಸಂಧಿನೋವು, ಆಸ್ಟಿಯೋಪೊರೋಸಿಸ್ ಕಾಯಿಲೆಗಳಿಗೆ ಶೀಘ್ರ ಪರಿಹಾರ ನೀಡುವುದು.

'ಅಮೃತರತ್ನ'ದಿಂದ ಶೀಘ್ರ ಮುಕ್ತಿ
ತ್ವರಿತ ನೋವು ನಿವಾರಣೆಗೆ 'ಅಮೃತರತ್ನ' ಪರಿಣಾಮಕಾರಿ ಫಾರ್ಮುಲಾ. ಒಂದು ಅಮೃತರತ್ನ ಗುಳಿಗೆ ಸೇವಿಸಿ ಬಳಿಕ ನೋವಿರುವ ಭಾಗಕ್ಕೆ ಅಮೃತರತ್ನ ನೋವು ನಿವಾರಕ ತೈಲವನ್ನು ಹಚ್ಚಿದಲ್ಲಿ ತಕ್ಷಣ ನೋವು ನಿವಾರಣೆಯಾಗುವುದು.

ಎ.ಜೆ. ಹೆಲ್ತ್ ಕೇರ್, ಬೆಂಗಳೂರು. Ph: 8762226000
Also available at: amazon Flipkart